ಶಿವಮೊಗ್ಗ
ಗುರುವಾರ, 19 ಮಾರ್ಚ್ 2026
ಸಂಪುಟ 16, ಸಂಚಿಕೆ 326, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಶುಭಾಶಯ

ನಮ್ಮೆಲ್ಲ ಓದುಗರು, ಹಿತೈಷಿಗಳು, ಜಾಹೀರಾತುದಾರರು, ಏಜೆಂಟರು ಹಾಗೂ ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಬಿಡುವು

ಯುಗಾದಿ ಪ್ರಯುಕ್ತ ಇಂದು (ಗುರುವಾರ, ಮಾರ್ಚ್ 19) ಹೊಸ ದಿಗಂತ ಕಚೇರಿಗೆ ಬಿಡುವು. ಆದ್ದರಿಂದ ಶುಕ್ರವಾರದ (ಮಾರ್ಚ್ 20) ಸಂಚಿಕೆ ಪ್ರಕಟವಾಗುವುದಿಲ್ಲ.

ಕಾಲಗಣನೆಯ ಕನ್ನಡಿ ಈ 'ಯುಗಾದಿ' ಪುಟ ೦೬

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಅಮಾವಾಸ್ಯೆ ಉಪರಿ ಪಾಡ್ಯ
ನಕ್ಷತ್ರ: ಉತ್ತರಭಾದ್ರ

ದಿನದ ಮಾತು

ನಿರಾಶಾವಾದಿಯನ್ನು ಆಶಾವಾದಿಯಾಗಿಸಲು ಎರಡು ಸಹಾನುಭೂತಿಯ ಮಾತುಗಳು ಸಾಕು.
▲ ನಾಣ್ನುಡಿ

ಯುದ್ಧಗಳಿಗೆ ಪರಾಭವವಾಗಲಿ, ಅಹಂಕಾರಕ್ಕೆ ಸೋಲಾಗಲಿ

ಗುರುತರ
• ಸೋಮಶೇಖರ ಸಿ.ಜೆ.

• ಪುಟ ೬

ಕಿರುಸುದ್ದಿ

ಬೋರ್ಡೋಲಾಯಿ ಬಿಜೆಪಿಗೆ ಸೇರ್ಪಡೆ

• **ಗುವಾಹಟಿ:** ಅಸ್ಸಾಂ ವಿಧಾನಸಭಾ ಚುನಾವಣೆಗೆ ಬರೇ 20 ದಿನಗಳು ಉಳಿದಿರುವಂತೆ, ಕಾಂಗ್ರೆಸ್ ಸಂಸದ ಪ್ರದ್ಯುತ್ ಬೋರ್ಡೋಲಾಯಿ ಪಕ್ಷಕ್ಕೆ ರಾಜೀನಾಮೆ ನೀಡಿ, ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಸೈಕಿಯಾ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

• ವಿವರ ಪುಟ ೨

ಪ್ರತ್ಯೇಕ ಬೆಂಕಿ ಅವಘಡ: 17 ಜನ ಸಜೀವ ದಹನ

• **ಹೊಸದಿಲ್ಲಿ/ಇಂದೋರ್:** ದಿಲ್ಲಿ ಮತ್ತು ಇಂದೋರ್‌ನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಬೆಂಕಿ ಅವಘಡದಲ್ಲಿ ಬುಧವಾರ 17 ಮಂದಿ ಮೃತಪಟ್ಟಿದ್ದಾರೆ. ದಿಲ್ಲಿಯ ಪಾಲಂ ಪ್ರದೇಶದ ಬಹುಮಹಡಿ ಕಟ್ಟಡವೊಂದರಲ್ಲಿ ಬುಧವಾರ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಸದಸ್ಯರು ಮೃತಪಟ್ಟಿದ್ದಾರೆ. ಇನ್ನೊಂದೆಡೆ ಮೂರು ಅಂತಸ್ತಿನ ಮನೆಯಲ್ಲಿ ಬುಧವಾರ ಮುಂಜಾನೆ ಮನೆಯ ಹೊರಗೆ ಚಾರ್ಜ್ ಮಾಡಲಾಗುತ್ತಿದ್ದ ಎಲೆಕ್ಟ್ರಿಕ್ ವಾಹನ (ಇವಿ) ಸ್ಫೋಟಗೊಂಡು 8 ಮಂದಿ ಮೃತಪಟ್ಟಿದ್ದಾರೆ.

• ವಿವರ ಪುಟ ೨

ವೈಷ್ಣೋದೇವಿ ಯಾತ್ರಿಗಳಿಗೆ ತಲಾ 5 ಸಾವಿರ ರೂ.

• ಪುಟ ೩

ಇಂದು ಮುರ್ಮು ಅಯೋಧ್ಯೆಗೆ ಭೇಟಿ

• ಪುಟ ೨

ಇಸ್ರೇಲ್ ವಿರುದ್ಧ ಪ್ರತೀಕಾರ ಇರಾನ್‌ನಿಂದ ಕ್ಷಿಪಣಿ ದಾಳಿ

• ಪುಟ ೨

80,886 ಟನ್ ತೈಲ ಹೊತ್ತು ಜಗ್ ಲಾಡ್ಕಿ ತವರಿಗೆ ವಾಪಸ್

• ಪುಟ ೨

ಇವ ನಮ್ಮವ ಇವ ನಮ್ಮವ ವಿಧೇಯಕ ಮಂಡಿಸಿದ ಸಚಿವ

ಮರ್ಯಾದೆ ಹತ್ಯೆಗೆ ಐದು ವರ್ಷ ಜೈಲು

• **ವಿಧಾನಸಭೆ:** ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಎಸಗುವ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ-ಇವ ನಮ್ಮವ) ವಿಧೇಯಕವನ್ನು ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಮಂಡಿಸಿದರು. ಬಳಿಕ ವಿಧೇಯಕದ ಬಗ್ಗೆ ವಿವರಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರು, ಈ ವಿಧೇಯಕದಲ್ಲಿ ಅಂತರ್ಜಾತಿ ವಿವಾಹವಾಗುವ ಜೋಡಿ ಅಥವಾ ದಂಪತಿಗೆ ಮರ್ಯಾದೆ ಹೆಸರಿನಲ್ಲಿ ಯಾರೊಬ್ಬರನ್ನು ಅಥವಾ ಯಾವುದೇ ವ್ಯಕ್ತಿಯನ್ನು ಯಾವುದೇ ರೀತಿ ಅವರ ಸಾವಿಗೆ ಕಾರಣನಾದ ಅಥವಾ ಸಾವಿಗೆ ಕಾರಣವಾಗುವ ಕೃತ್ಯ ಎಸಗುವ ವ್ಯಕ್ತಿಗೆ ಕನಿಷ್ಠ 5 ವರ್ಷಗಳ ಜೈಲು ಶಿಕ್ಷೆಗೆ ಒಳಗಾಗುತ್ತಾನೆ. ➡ಪುಟ ೭



1 ವರ್ಷದವರೆಗೆ ರಕ್ಷಣೆ

ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಎಸ್‌ಪಿ ಅವರು ದಂಪತಿ ಕುಟುಂಬಕ್ಕೆ ನೀಡಲಾಗುವ ಬೆದರಿಕೆ ಸಂಬಂಧಿಸಿದ ದೂರನ್ನು ಸೂಕ್ಷ್ಮತೆಯಿಂದ ನಿರ್ವಹಿಸತಕ್ಕದ್ದು, ದಂಪತಿಗಳು ಇಚ್ಛಿಸಿದ್ದಲ್ಲಿ ವಿಧಿವತ್ತಾಗಿ ಮದುವೆ ಹಾಗೂ ಮದುವೆಗೆ ಪೊಲೀಸರು ಬೆಂಬಲ ಒದಗಿಸಬಹುದಾಗಿದೆ. ಮದುವೆಯ ನಂತರ 1 ತಿಂಗಳಿಂದ 1 ವರ್ಷದವರೆಗೆ ನಾಮಮಾತ್ರದ ಶುಲ್ಕ (ನಾಮಿನಲ್ ಫೀ) ಪಾವತಿಯ ಮೇರೆಗೆ ವಸತಿ ರಕ್ಷಣೆ ಒದಗಿಸಬಹುದು.

ಡಿಜೆ ನಿಷೇಧಿಸುವ ಕುರಿತು ಚರ್ಚೆ

• **ವಿಧಾನಸಭೆ:** ರಾಜ್ಯದಲ್ಲಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅಬ್ಬರದ ಸಂಗೀತ ಪ್ರಸಾರಕ್ಕೆ ತಡೆ ಹಾಕುವ ನಿಟ್ಟಿನಲ್ಲಿ ಡಿಜೆ ನಿಷೇಧಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ. ಬಿಜೆಪಿಯವರು ಒಪ್ಪಿದರೆ ನಾವು ಆದೇಶ ಹೊರಡಿಸುತ್ತೇವೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಎಸ್.ಎನ್. ಚನ್ನಬಸಪ್ಪ (ಚೆನ್ನಿ) ಅವರು ನಿಯಮಿತವಾಗಿ ಸಹ್ಯಾದ್ರಿ ಉತ್ಸವ ಆಯೋಜಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ➡ಪುಟ ೭

“ನಮಗೆ ಬೇಕು. ಡಿಜೆ ನಿಷೇಧಕ್ಕೆ ನನ್ನ ಒಪ್ಪಿಗೆ ಇಲ್ಲ. ಡಿಜೆ ಮಾತ್ರ ನಿಷೇಧ ಏಕೆ? ಸುಪ್ರೀಂ ಕೋರ್ಟ್ ಆದೇಶದಲ್ಲಿ ಆಝಾನ್ ನಿಷೇಧ ಮಾಡಿ ಎಂದಿದೆ. ಅದನ್ನು ನಿಷೇಧಿಸುತ್ತೀರಾ?
■ **ಎಸ್.ಎನ್. ಚನ್ನಬಸಪ್ಪ**, ಬಿಜೆಪಿ ಶಾಸಕ

“ಹೃದಯ ಸಂಬಂಧಿ ಸಮಸ್ಯೆಗಳಿರುವವರು ಮತ್ತು ಫೇಸ್ ಮೇಕರ್ ಹಾಕಿದವರಿಗೆ ಡಿಜೆ ಶಬ್ದದಿಂದ ತುಂಬಾ ತೊಂದರೆ ಆಗುತ್ತಿದೆ. ಮಕ್ಕಳೂ ಕಿವಿ ಮುಚ್ಚಿಕೊಳ್ಳುವುದನ್ನು ಕಂಡಿದ್ದೇವೆ. ಈ ವಿಚಾರದಲ್ಲಿ ಪೊಲೀಸರೂ ಅಸಹಾಯಕರಾಗಿದ್ದಾರೆ. ಡಿಜೆಗಳಿಂದ ಆಗುತ್ತಿರುವ ಶಬ್ದಮಾಲಿನ್ಯವನ್ನು ನಾವು ಗಂಭೀರವಾಗಿ ಪರಿಗಣಿಸಬೇಕು.
■ **ಸುರೇಶ್ ಕುಮಾರ್**, ಬಿಜೆಪಿ ಶಾಸಕ

ಚೀನಾಗೆ ತೆರಳಬೇಕಿದ್ದ 7 ಹಡಗು ಮಾರ್ಗ ಬದಲು

ಭಾರತದತ್ತ ರಷ್ಯಾ ತೈಲ ಹಡಗುಗಳು

• **ಹೊಸದಿಲ್ಲಿ:** ಅಚ್ಚರಿ ಎಂಬಂತೆ ಚೀನಾಕ್ಕೆ ತೆರಳಬೇಕಿದ್ದ ರಷ್ಯಾದ ಕಚ್ಚಾ ತೈಲ ಹೊತ್ತ ನೌಕೆಗಳು ಸಮುದ್ರ ಮಧ್ಯದಲ್ಲೇ ಭಾರತದ ಬಂದರುಗಳತ್ತ ಮುಖ ಮಾಡಿವೆ. ಮಾರ್ಗ ಬದಲಾವಣೆ ಬಗ್ಗೆ ಕೇಂದ್ರ ಬಂದರು ಇಲಾಖೆಯಿಂದ ಯಾವುದೇ ಮಾಹಿತಿ ಸಿಗದಿದ್ದರೂ, ಆಂಗ್ಲ ಪತ್ರಿಕೆ ಬ್ಲೂಮ್‌ಬರ್ಗ್, ಈ ಕುರಿತಂತೆ ಮಾಹಿತಿ ನೀಡಿದೆ. ಇರಾನ್ ಯುದ್ಧದ ಕಾರಣದಿಂದಾಗಿ ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಸ್ಥಗಿತಗೊಂಡಿರುವ ತೈಲ ಪೂರೈಕೆಯನ್ನು ಸರಿದೂಗಿಸಲು, ಭಾರತೀಯ ಸಂಸ್ಕರಣಾಗಾರಗಳು ಕೇವಲ ಒಂದು ವಾರದಲ್ಲಿ 30 ಮಿಲಿಯನ್ ಬ್ಯಾರೆಲ್ ರಷ್ಯಾ ತೈಲವನ್ನು ಖರೀದಿಸಿವೆ, ಎಂದು ವರದಿಯಾಗಿದೆ.

ಮಾರುಕಟ್ಟೆ ಸ್ಥಿರತೆಗೆ ಯತ್ನ: ಇರಾನ್‌ನಲ್ಲಿ ನಡೆಯುತ್ತಿರುವ ಸಂಘರ್ಷದ ನಡುವೆ ರಾಷ್ಟ್ರೀಯ ಇಂಧನ ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಭಾರತ ಈ ಕ್ರಮ ಕೈಗೊಂಡಿದೆ.



ಸರಣಿ ಹತ್ಯೆ

ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಮತ್ತು ಬಸಿಜ್ ಪಡೆಯ ಮುಖ್ಯಸ್ಥ ಗುಲಾಮ್ ರೆಜಾ ಸುಲೈಮಾನಿ ಹತ್ಯೆಯ ಬೆನ್ನಲ್ಲೇ ಖತೀಬ್ ಹತ್ಯೆ ನಡೆದಿದೆ. ಸುಲೈಮಾನಿ ಅವರನ್ನು ಅರಣ್ಯ ಪ್ರದೇಶವೊಂದರಲ್ಲಿ ಗುರಿಯಾಗಿಸಿ ಕೊಲ್ಲಲಾಗಿದೆ. ಇರಾನ್ ನಾಯಕತ್ವಕ್ಕೆ ಯಾವುದೇ ಸುರಕ್ಷಿತ ತಾಣವಿಲ್ಲ ಎಂಬ ಸಂದೇಶವನ್ನು ರವಾನಿಸಲು ಈ ದಾಳಿಗಳನ್ನು ನಡೆಸಲಾಗಿದೆ ಎಂದು ಇಸ್ರೇಲ್ ಹೇಳಿದೆ.

30 ದಶಲಕ್ಷ ಬ್ಯಾರೆಲ್ ರಷ್ಯಾ ತೈಲ ಖರೀದಿ!

ಇರಾನ್ ಮೇಲಿನ ಯುದ್ಧ ಆರಂಭವಾದಾಗಿನಿಂದ ಸುಮಾರು 30 ದಶಲಕ್ಷ ಬ್ಯಾರೆಲ್‌ನಷ್ಟು ರಷ್ಯಾ ಕಚ್ಚಾ ತೈಲವನ್ನು ಭಾರತೀಯ ಕಂಪನಿಗಳು ಖರೀದಿಸಿವೆ. ಉಕ್ರೇನ್ ಯುದ್ಧ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ನಿರ್ಬಂಧ ಎದುರಿಸುತ್ತಿರುವ ರಷ್ಯಾ ಏಷ್ಯಾ ಬೇಡಿಕೆಯಿಂದ ರಫ್ತು ಸ್ಥಿರತೆ ಕಾಯ್ದುಕೊಂಡಿದೆ. ಇದರಿಂದ ಭಾರತೀಯ ಕಂಪನಿಗಳ ಖರೀದಿ ಬೇಡಿಕೆಗಳಿಗಾಗಿ ತನ್ನ ಹಡಗುಗಳ ಮಾರ್ಗ ಬದಲಾಯಿಸಲು ರಷ್ಯಾ ಸಿದ್ಧವಾಗಿದೆ.

ಬದಲಾಯ್ತು ತೈಲ ನೌಕೆಗಳ ಮಾರ್ಗ

ನೌಕೆಗಳ ಸಂಚಾರದ ದತ್ತಾಂಶದ ಪ್ರಕಾರ, ಯುರಲ್ಸ್ ಕಚ್ಚಾ ತೈಲ ಹೊತ್ತ ಆಕ್ವಾ ಟೈಟಾನ್ ಹಡಗು ಈಗ ನವ ಮಂಗಳೂರು ಬಂದರಿನತ್ತ ಬರುತ್ತಿದ್ದು, ಮಾ.21ರಂದು ತಲುಪುವ ನಿರೀಕ್ಷೆಯಿದೆ. ಅದೇ ರೀತಿ, ಕರುಖ್ ಸಿಪಿಸಿ ಬ್ಲೆಂಡ್ ಹೊತ್ತ ಝೌರ್ಝೌ ಎನ್ ನೌಕೆ ಸಿಕ್ಕಾ ಬಂದರಿನತ್ತ ತಿರುಗಿದೆ. ದಕ್ಷಿಣ ಚೀನಾ ಸಮುದ್ರದಲ್ಲಿ ಕನಿಷ್ಠ ಏಳು ತೈಲ ನೌಕೆಗಳು ಚೀನಾದ ಬಂದರುಗಳಿಗೆ ತೆರಳುವ ಬದಲು ಭಾರತದತ್ತ ತಿರುಗಿವೆ.

ಪ್ರವೇಶ ನಿಯಂತ್ರಿತ ರಸ್ತೆ ಯೋಜನೆಗೆ 6,969 ಕೋಟಿ ರೂ.

ಯುವಜನರಿಗಾಗಿ ಭವ್ಯ ಯೋಜನೆ

• **ಹೊಸದಿಲ್ಲಿ:** ಕೇಂದ್ರದ ನರೇಂದ್ರ ಮೋದಿ ಅವರ ಬಿಜೆಪಿ ನೇತೃತ್ವದ ಸರಕಾರ ದೇಶದಲ್ಲಿ ಯುವಜನತೆಗಾಗಿ ಉದ್ಯೋಗ ಸೃಷ್ಟಿಸುವ ಬೃಹತ್ ಯೋಜನೆಯೊಂದನ್ನು ರೂಪಿಸಿದೆ. ಇದರಂತೆ, ಕೇಂದ್ರ ಸಂಪುಟವು ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆ(ಭವ್ಯ)ಯಲ್ಲಿ 33,660ಕೋಟಿ ರೂ. ವೆಚ್ಚದಲ್ಲಿ ದೇಶಾದ್ಯಂತ 100 ಹೂಡಿಕೆಗೆ ಸಿದ್ಧವಾದ ಪ್ಲಗ್-ಅಂಡ್-ಪ್ಲೇ ಕೈಗಾರಿಕಾ ಪಾರ್ಕ್‌ಗಳನ್ನು ನಿರ್ಮಿಸುವ ಯೋಜನೆಯೊಂದಕ್ಕೆ ಬುಧವಾರ ಅನುಮೋದನೆ ನೀಡಿದೆ. ಇದು ದೇಶದಲ್ಲಿ ಉತ್ಪಾದನಾ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ಭಾರೀ ವೇಗ ನೀಡುವಲ್ಲಿ ನೆರವಾಗಲಿದೆ. ಈ ಯೋಜನೆಯು 2026-27ರಿಂದ 2031-32ರ ನಡುವಿನ ಆರು ವರ್ಷಗಳಲ್ಲಿ ಅನುಷ್ಠಾನಗೊಳ್ಳಲಿದ್ದು, ಹೂಡಿಕೆದಾರರ ಲಭ್ಯತೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ನಗರ ಕೇಂದ್ರಗಳ ಬಳಿಯಲ್ಲಿ ಈ ಕೈಗಾರಿಕಾ ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುವುದು. ಕೈಗಾರಿಕಾ ಪಾರ್ಕ್ ಅಭಿವೃದ್ಧಿಗಾಗಿ ಪ್ರತಿ ಎಕರೆಗೆ ಕೇಂದ್ರ ಸರಕಾರವು 1 ಕೋಟಿ ರೂ.ಗಳವರೆಗೆ ಹಣಕಾಸು ಬೆಂಬಲ ಒದಗಿಸಲಿದೆ. ➡ಪುಟ ೭





- ಕೇಂದ್ರದಿಂದ ಭಾರತ್ ಔದ್ಯೋಗಿಕ್ ವಿಕಾಸ್ ಅನುಷ್ಠಾನಕ್ಕೆ ಕ್ರಮ
- 33,660 ಕೋಟಿ ವೆಚ್ಚದಲ್ಲಿ ಯೋಜನೆ ಜಾರಿ
- ದೇಶಾದ್ಯಂತ 100 ಕೈಗಾರಿಕಾ ಪಾರ್ಕ್ ನಿರ್ಮಾಣ
- ಸಂಪರ್ಕ ಹೆಚ್ಚಳಕ್ಕೆ ಉತ್ತರ ಪ್ರದೇಶದಲ್ಲಿ 4 ಪಥಗಳ

ಡಿನ್ನರ್ ಮೀಟಿಂಗ್, ಸಿಎಂ ಭೇಟಿ ಬಗ್ಗೆ ನನಗೆ ಮಾಹಿತಿಯಿಲ್ಲ

ಸಚಿವಾಕಾಂಕ್ಷಿಗಳು ಭೇಟಿಯಾಗಿಲ್ಲ: ಡಿಕೆಶಿ

• **ಹೊಸದಿಲ್ಲಿ:** ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವವರು ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಡಿನ್ನರ್ ಮೀಟಿಂಗ್ ಮಾಡಿರುವ ಬಗ್ಗೆ ಹಾಗೂ ಹಿರಿಯ ಶಾಸಕರು ತಮ್ಮನ್ನು ಸಚಿವರನ್ನಾಗಿ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚರ್ಚಿಸಿರುವ ಬಗ್ಗೆ ನನಗೆ ಮಾಹಿತಿಯಿಲ್ಲ, ಅವರ್‍ಯಾರೂ ನನ್ನನ್ನು ಈ ವಿಚಾರವಾಗಿ ಭೇಟಿ ಮಾಡಿ ಚರ್ಚೆ ಮಾಡಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.



ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಶಾಸಕರನ್ನು ನಿಯಂತ್ರಣ ಮಾಡುವುದು ಮುಖ್ಯಮಂತ್ರಿಗಳು. ಶಾಸಕಾಂಗದ ಪಕ್ಷದ ನಾಯಕರಾದ ಮುಖ್ಯಮಂತ್ರಿಗಳಿಗೆ ಶಾಸಕರಿಂದ ಶಿಸ್ತು ಪಾಲನೆ ಮಾಡುವ ಜವಾಬ್ದಾರಿ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ಆದರೆ, ಶಾಸಕರ ಸಭೆಗಳ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ ಎಂದರು. ➡ಪುಟ ೭

ಶೀಘ್ರವೇ ಉಪಚುನಾವಣೆ ಅಭ್ಯರ್ಥಿಗಳ ಹೆಸರು ಅಂತಿಮ

ದಾವಣಗೆರೆ ಟಿಕೆಟ್ ವಿಚಾರವಾಗಿ ಇರುವ ಗೊಂದಲದ ಬಗ್ಗೆ ನನಗೆ ಮಾಹಿತಿ ಇಲ್ಲ, ನಾನು ಹಾಗೂ ಮುಖ್ಯಮಂತ್ರಿಗಳು ಈ ವಿಚಾರವಾಗಿ ಚರ್ಚೆ ಮಾಡಿದ್ದು, ವರದಿ ಇನ್ನೂ ಬಂದಿಲ್ಲ, ಮುಖ್ಯಮಂತ್ರಿಗಳು ಮೇಟಿ ಅವರ ಕುಟುಂಬದವರನ್ನು ಕರೆಸಿ ಚರ್ಚೆ ಮಾಡಿದ್ದಾರೆ. ದಾವಣಗೆರೆ ಚುನಾವಣಾ ಆಕಾಂಕ್ಷಿಗಳು ನನ್ನನ್ನು ಭೇಟಿ ಮಾಡುತ್ತಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ನಾನು ಕೂಡಾ ಆ ಭಾಗದ ಸಂಸದರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜತೆ ಚರ್ಚೆ ಮಾಡಿದ್ದೇನೆ. ನಾನು ಹೈಕಮಾಂಡ್ ನಾಯಕರಿಗೆ ವರದಿ ನೀಡುತ್ತೇನೆ. ಎರಡ್ಮೂರು ದಿನಗಳಲ್ಲಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರವೂ ಗಮನಿಸಲಿ

- ಈ ವರ್ಷದಿಂದ 5 ಸಾವಿರ ಮಾಂಟೆಸ್ಸರಿ ಆರಂಭ: ಲಕ್ಷ್ಮೀ ಹೆಬ್ಬಾಳ್ಕರ್



• **ವಿಧಾನಸಭೆ:** ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳ ವಿಷಯದಲ್ಲಿ ಕೇವಲ ರಾಜ್ಯ ಸರ್ಕಾರದತ್ತ ಬೊಟ್ಟು ಮಾಡುವುದು ಸರಿಯಲ್ಲ, ಕೇಂದ್ರ ಸರ್ಕಾರವೂ ಈ ವಿಷಯದಲ್ಲಿ ಕಣ್ತೆರೆಯಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ರಾಜ್ಯ ಅತಿ ಹೆಚ್ಚು ಗೌರವ ಧನವನ್ನು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ನೀಡುತ್ತಿದೆ. ➡ಪುಟ ೭

ದಾಖಲೆ ನೀಡಿದರೆ ಮರುಪರೀಕ್ಷೆ | ಮತ್ತೊಂದು ತನಿಖೆಗೂ ಸಿದ್ಧ ಎಂದ ಕೃಷ್ಣ ಬೈರೇಗೌಡ

ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಲೋಪವಾಗಿಲ್ಲ

• **ವಿಧಾನಸಭೆ:** ಇತ್ತೀಚೆಗೆ ನಡೆದ ಕೆಪಿಎಸ್‌ಸಿ ಮುಖ್ಯ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ 11 ಅಭ್ಯರ್ಥಿಗಳು ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅನುಮಾನಕ್ಕೆ ಪರೀಕ್ಷೆ ಕೇಂದ್ರದ ವಿಡಿಯೋ ಸಂಗ್ರಹ ನೋಡಲಾಗಿದ್ದು, ಯಾವುದೇ ತಪ್ಪು ಕಂಡು ಬಂದಿಲ್ಲ, ಈ ಬಗ್ಗೆ ಮುಖ್ಯಮಂತ್ರಿಗಳ ಜತೆ ಚರ್ಚೆ ಮಾಡಿದ್ದು ಅವರು ಕೂಡ ಬೇಸರ ವ್ಯಕ್ತಪಡಿಸಿದ್ದಾರೆ. ಈ ಪ್ರಕರಣದ ಬಗ್ಗೆ ಲಿಖಿತವಾಗಿ ಉತ್ತರ ನೀಡುತ್ತೇವೆ. ಮತ್ತೊಂದು ತನಿಖೆ ಬೇಕಾದರೆ ಮಾಡಿಸುತ್ತೇವೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ನಿಯಮ 69ರ ಮೇರೆಗೆ ಕೆಪಿಎಸ್‌ಸಿ ಕುರಿತು ನಡೆದ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರಿಸಿದ ಅವರು, ಒಂದೇ ಕೊಠಡಿಯಲ್ಲಿ ಪರೀಕ್ಷೆ ಪಾಸ್ ಆಗಿರುವ 11 ಜನರು ಒಂದೇ ಕುಟುಂಬದವರಲ್ಲ, ಬೇರೆ ಬೇರೆ ಜಿಲ್ಲೆಯವರು, ಒಂದೇ ಇನ್ಶಿಯಲ್ ಇರುವುದು ಗೊಂದಲ ಮೂಡಿಸಿರಬಹುದು ಎಂದರು.

ಮರು ಪರೀಕ್ಷೆಗೆ ಒತ್ತಾಯ: ಆರೋಪ ಬಂದಿರುವ 11 ಅಭ್ಯರ್ಥಿಗಳ ಶೈಕ್ಷಣಿಕ ಹಿನ್ನೆಲೆ ನೋಡಬೇಕು. ಆಗ ಆರೋಪ ನಿಜವೋ / ಅಲ್ಲವೋ ಎಂದು ಗೊತ್ತಾಗಲಿದೆ ಎಂದು ಹೇಳಿದ ಶಾಸಕ ಸುರೇಶ್ ಕುಮಾರ್ ಅವರು, ಮರು ಪರೀಕ್ಷೆ ನಡೆಸಬೇಕೆಂದರು. ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಸದಸ್ಯರು ಎಸ್‌ಐಟಿ ತನಿಖೆ ಕೂಡಾ ಆಗಬೇಕೆಂದು ಆಗ್ರಹಿಸಿದರು. ಶಾಸಕರು, ಸಚಿವರು ಹಾಗೂ ಸಿಎಂ ಮೇಲೂ ತನಿಖೆ ಆಗುತ್ತೆ, ನಾವು ವಿಚಾರಣೆ ಎದುರಿಸಿದ್ದೇವೆ, ಅವರು ಕಟಕಟೆಯ ಮೇಲೆ ನಿಲ್ಲಲಿ ಎಂದು ಅಶೋಕ್ ಹೇಳಿದರು.

ಅನುಮಾನದ ಆಧಾರದ ಮೇಲೆ ಮರು ಪರೀಕ್ಷೆ ನಡೆಸಿದರೆ 1 ವರ್ಷ ಮುಂದಕ್ಕೆ ಹೋಗುತ್ತದೆ. 5,500 ಅಭ್ಯರ್ಥಿಗಳು ಮತ್ತೆ ಪರೀಕ್ಷೆ ಬರೆಯಬೇಕಾಗುತ್ತದೆ. 2 ವರ್ಷ ವಯೋಮಿತಿ ಮುಂದಕ್ಕೆ ಹೋಗುತ್ತದೆ. ತಪ್ಪಾಗಿರುವ ಬಗ್ಗೆ ದಾಖಲೆ ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು. ➡ಪುಟ ೭



ಕೆಪಿಎಸ್‌ಸಿ ಸುಧಾರಣೆಗೆ ಸದನ ಸಮಿತಿ ರಚನೆ

ಕೆಪಿಎಸ್‌ಸಿ ಸುಧಾರಣೆಗೆ ಸದನ ಸಮಿತಿ ರಚಿಸಲು ಸರ್ಕಾರ ನಿರ್ಧರಿಸಿದ್ದು, ಇದಕ್ಕೆ ಸಭಾಧ್ಯಕ್ಷರು ಅನುಮೋದನೆ ನೀಡಿದರು. ಮುಂದಿನ ಅಧಿವೇಶನದ ಒಳಗಾಗಿ ವರದಿ ಸಲ್ಲಿಸಲು ಒಪ್ಪಿಗೆ ಸೂಚಿಸಲಾಯಿತು. ಇದಕ್ಕೆ ವಿರೋಧ ಪಕ್ಷದವರು ಒಪ್ಪಿಗೆ ನೀಡಿದರು.

ಸದಸ್ಯರ ಸಂಖ್ಯೆ 8ಕ್ಕೆ ಇಳಿಕೆ

15ರಿಂದ 18 ಇರುವ ಸದಸ್ಯರ ಸಂಖ್ಯೆಯನ್ನು 8ಕ್ಕೆ ಇಳಿಸಲು ಸರ್ಕಾರ ನಿರ್ಧರಿಸಿದ್ದು, ಅವರನ್ನು ನಿವೃತ್ತಿ ಆಗುವವರೆಗೂ ತೆಗೆಯಲು ಸಾಧ್ಯವಿಲ್ಲ, 2027ಕ್ಕೆ ಬಹುತೇಕ ಸದಸ್ಯರ ಅವಧಿ ಮುಗಿಯಲಿದೆ, 2027ಕ್ಕೆ ಸದಸ್ಯರ ಸಂಖ್ಯೆ 8ಕ್ಕೆ ಇಳಿಯಲಿದೆ ಎಂದು ತಿಳಿಸಿದರು.



ಇಸ್ರೇಲ್ ವಿರುದ್ಧ ಪ್ರತೀಕಾರ ಇರಾನ್‌ನಿಂದ ಕ್ಷಿಪಣಿ ಸುರಿಮಳೆ

ದುಬೈ: ಇಸ್ರೇಲ್ ನಡೆಸಿದ ಸರಣಿ ಹತ್ಯೆಗಳಿಗೆ ಪ್ರತಿಯಾಗಿ ಇರಾನ್ ಬುಧವಾರ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳ ಮೇಲೆ ತೀವ್ರ ಕ್ಷಿಪಣಿ ದಾಳಿ ನಡೆಸಿದೆ. ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ಪ್ರಭಾವಿ ನಾಯಕ ಅಲಿ ಲಾರಿಜಾನಿ ಮತ್ತು ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಹತರಾದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಕ್ಷಿಪಣಿ ದಾಳಿ ಮತ್ತು ಸಾವು-ನೋವು: ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೇಂದ್ರ ಇಸ್ರೇಲ್ ಅನ್ನು ಗುರಿಯಾಗಿಸಿ 'ಖೋರಮ್‌ಶಹರ್ 4' ಮತ್ತು ಖಾದರ್ ಎಂಬ ಸುಧಾರಿತ ಮಲ್ಟಿ-ವಾರ್‌ಹೆಡ್ ಕ್ಷಿಪಣಿಗಳನ್ನು ಉಡಾಯಿಸಿದೆ. ಈ ದಾಳಿಯಿಂದಾಗಿ ಟೆಲ್ ಅವಿವ್ ಸಮೀಪದ ರಾಮತ್ ಗನ್ ನಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಇಸ್ರೇಲಿ ವೈದ್ಯಕೀಯ ಮೂಲಗಳು ದೃಢಪಡಿಸಿವೆ. ಇರಾನ್‌ನ ಈ ಕ್ಷಿಪಣಿಗಳು ವಾಯು ರಕ್ಷಣಾ ವ್ಯವಸ್ಥೆಗಳನ್ನು ಭೇದಿಸುವ ಸಾಮರ್ಥ್ಯ ಹೊಂದಿದ್ದು, ಇಸ್ರೇಲ್‌ನಾದ್ಯಂತ ತೀವ್ರ ಆತಂಕ ಸೃಷ್ಟಿಸಿದೆ.

ಗಲ್ಫ್ ರಾಷ್ಟ್ರಗಳ ಮೇಲೆ ದಾಳಿ: ಇಸ್ರೇಲ್ ಮಾತ್ರವಲ್ಲದೆ, ಇರಾನ್ ತನ್ನ ನೆರೆಯ ಗಲ್ಫ್ ರಾಷ್ಟ್ರಗಳಾದ ಸೌದಿ ಅರೇಬಿಯಾ, ಕುವೈತ್, ಯುಎಇ, ಬಹ್ರೇನ್ ಮತ್ತು ಕತಾರ್ ಮೇಲೆಯೂ ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳನ್ನು ನಡೆಸಿದೆ. ಸೌದಿ ಅರೇಬಿಯಾದ ತೈಲ ಸಮೃದ್ಧ ಪೂರ್ವ ಪ್ರಾಂತ್ಯ ಮತ್ತು ಅಮೆರಿಕದ ನೆಲೆ ಇರುವ ಪ್ರಿನ್ಸ್ ಸುಲ್ತಾನ್ ಏರ್ ಬೇಸ್ ಅನ್ನು ಗುರಿಯಾಗಿಸಲಾಗಿತ್ತು. ದುಬೈ ಸಮೀಪದ ಆಸ್ಟ್ರೇಲಿಯಾದ ಸೇನಾ ನೆಲೆಯಲ್ಲೂ ಸ್ಫೋಟಗಳು ಸಂಭವಿಸಿದ್ದು, ಸಣ್ಣ ಮಟ್ಟದ ಬೆಂಕಿ ಕಾಣಿಸಿಕೊಂಡಿದೆ.


ಕ್ಷಿಪಣಿ ಅವಶೇಷ ಬಿದ್ದು 3 ಇಸ್ರೇಲಿ ವಿಮಾನಕ್ಕೆ ಹಾನಿ: ಇರಾನ್ ಕ್ಷಿಪಣಿಗಳಿಂದಾಗಿ ಟೆಲ್ ಅವೀವ್‌ನ ಬೆನ್ ಗುರಿಯನ್ ವಿಮಾನ ನಿಲ್ದಾಣದಲ್ಲಿ ನಿಲುಗಡೆಗೊಳಿಸಿದ್ದ ಮೂರು ಖಾಸಗಿ ವಿಮಾನಗಳಿಗೆ ಹಾನಿಯಾಗಿವೆ ಎಂದು ಇಸ್ರೇಲ್ ವಿಮಾನ ನಿಲ್ದಾಣ ಪ್ರಾಧಿಕಾರ ಬುಧವಾರ ದೃಢೀಕರಿಸಿವೆ. ಇರಾನ್ ಕ್ಷಿಪಣಿಗಳ ಅವಶೇಷ ಬಿದ್ದಿದ್ದರಿಂದ ವಿಮಾನಗಳಿಗೆ ಹಾನಿಯಾಗಿವೆ ಎಂದು ಇಸ್ರೇಲ್ ಸೇನೆ ಹೇಳಿದೆ.

ಹಾರ್ಮುಜ್‌ನತ್ತ ಭಾರತದ ಹೆಚ್ಚುವರಿ ಯುದ್ಧನೌಕೆಗಳು

ಇರಾನ್ ಇನ್ನಷ್ಟು ಭಾರತೀಯ ತೈಲ ಟ್ಯಾಂಕರ್‌ಗಳಿಗೆ ಅನುಮತಿ ನೀಡುವ ಸಾಧ್ಯತೆ ಹಿನ್ನೆಲೆ ಹಾರ್ಮುಜ್ ಜಲಸಂಧಿಯನ್ನು ದಾಟಿ ಭಾರತದತ್ತ ಸಂಚರಿಸುವ ತೈಲ ಹಡಗುಗಳ ಸುರಕ್ಷತೆಯನ್ನು ಖಚಿತಪಡಿಸುವುದಕ್ಕಾಗಿ ಗಲ್ಫ್ ಆಫ್ ಒಮನ್ ಮತ್ತು ಅರಬ್ಬಿ ಸಮುದ್ರಕ್ಕೆ ಸುಮಾರು 6ಕ್ಕೂ ಹೆಚ್ಚು ಹೆಚ್ಚುವರಿ ಯುದ್ಧನೌಕೆಗಳನ್ನು ಭಾರತೀಯ ವಾಯುಪಡೆ ಕಳುಹಿಸಿಕೊಟ್ಟಿದೆ. ಇವುಗಳೊಂದಿಗೆ ಸರಕು ಹಡಗುಗಳನ್ನೂ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಲೆಬನಾನ್‌ನಲ್ಲಿ ಸಂಘರ್ಷ ಮತ್ತು ಸ್ಥಳಾಂತರ

ಇತ್ತ ಇಸ್ರೇಲ್ ತನ್ನ ದಾಳಿಯನ್ನು ಲೆಬನಾನ್ ಮೇಲೆಯೂ ತೀವ್ರಗೊಳಿಸಿದೆ. ಬುಧವಾರ ಬೆಳಗ್ಗೆ ಯಾವುದೇ ಮುನ್ಸೂಚನೆ ನೀಡದೆ ಮಧ್ಯ ಬೈರುತ್‌ನ ವಸತಿ ಕಟ್ಟಡಗಳ ಮೇಲೆ ದಾಳಿ ನಡೆಸಲಾಗಿದ್ದು, ಕನಿಷ್ಠ 12 ಜನರು ಮೃತಪಟ್ಟಿದ್ದಾರೆ. ಫೆಬ್ರವರಿ 28 ರಿಂದ ಆರಂಭವಾದ ಈ ಸಂಘರ್ಷದಲ್ಲಿ ಇದುವರೆಗೆ ಲೆಬನಾನ್‌ನಲ್ಲಿ 912ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, ಸುಮಾರು 10 ಲಕ್ಷಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಈ ಮಧ್ಯೆ, ಇಸ್ರೇಲ್‌ನ ಮೊಸಾದ್ ಗುಪ್ತಚರ ಸಂಸ್ಥೆಗಾಗಿ ಗೂಢಚರ್ಯೆ ನಡೆಸಿದ ಆರೋಪದ ಮೇಲೆ ಇರಾನ್ ವ್ಯಕ್ತಿಯೊಬ್ಬನನ್ನು ಗಲ್ಲಿಗೇರಿಸಿದೆ ಎಂದು ಅಲ್ಲಿನ ನ್ಯಾಯಾಂಗದ ಮಿಜಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಈತ ಇಸ್ರೇಲ್‌ಗೆ ಸೂಕ್ಷ್ಮ ಪ್ರದೇಶಗಳ ಚಿತ್ರಗಳು ಮತ್ತು ಮಾಹಿತಿಗಳನ್ನು ನೀಡಿದ್ದ ಎಂದು ವರದಿಯಲ್ಲಿ ತಿಳಿಸಲಾಗಿದೆ. ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆ (ಐಎಇಎ) ಪ್ರಕಾರ, ಇರಾನ್‌ನ ಬುಶೆಹರ್ ಪರಮಾಣು ಸ್ಥಾವರದ ಮೇಲೆಯೂ ಕ್ಷಿಪಣಿಯೊಂದು ಬಿದ್ದಿದೆ. ಆದರೆ ಯಾವುದೇ ವಿಕಿರಣ ಸೋರಿಕೆ ಅಥವಾ ಹಾನಿ ಸಂಭವಿಸಿಲ್ಲ, ಎಂದು ವರದಿಯಾಗಿದೆ. ಯುದ್ಧವು ಈಗ ನಿರ್ಣಾಯಕ ಹಂತ ತಲುಪಿದ್ದು, ಜಾಗತಿಕ ಸಮುದಾಯವು ಆತಂಕದಿಂದ ಗಮನಿಸುತ್ತಿದೆ.



ಹಾರ್ಮುಜ್ ಸುರಕ್ಷತೆಗಾಗಿ ಸಹಾಯ ನಿರಾಕರಿಸಿದ ನ್ಯಾಟೋ

ನ್ಯಾಟೋ ವಿರುದ್ಧ ಟ್ರಂಪ್ ಆಕ್ರೋಶ

ವಾಷಿಂಗ್ಟನ್: ಇಡೀ ಜಗತ್ತಿನ ಒಳಿತಿಗಾಗಿ ತಾನು ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧಕ್ಕೆ ಬೆಂಬಲಿಸದೆ ನ್ಯಾಟೋ ಮತ್ತದರ ಮಿತ್ರ ರಾಷ್ಟ್ರಗಳು ಮೂರ್ಖತನದ ಕೆಲಸ ಮಾಡುತ್ತಿವೆ. ನಮಗೆ ಯಾರ ಸಹಾಯವೂ ಬೇಕಾಗಿಲ್ಲ, ಯಾರ ಸಹಾಯವೂ ಇಲ್ಲದೆ ಅರ್ಧ ಇರಾನ್ ನಾಶ ಮಾಡಿದ್ದೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನ್ಯಾಟೋ ಸದಸ್ಯರ ವಿರುದ್ಧ ಹರಿಹಾಯ್ದಿದ್ದಾರೆ.

ಹಾರ್ಮುಜ್ ಜಲಸಂಧಿಯನ್ನು ವಶಪಡಿಸಲು, ಅದನ್ನು ಮೊದಲಿನಂತೆ ಸುರಕ್ಷಿತಗೊಳಿಸಲು ಸಹಾಯ ಮಾಡಬೇಕೆಂಬ ನನ್ನ ಮನವಿಯನ್ನು ನ್ಯಾಟೋ ಮತ್ತದರ ಮೈತ್ರಿಕೂಟದ ರಾಷ್ಟ್ರಗಳು ತಿರಸ್ಕರಿಸಿವೆ. ಜಗತ್ತಿನ ಹಿತಕ್ಕಾಗಿ ಇರಾನ್ ವಿರುದ್ಧದ ಯುದ್ಧಕ್ಕೆ ಬೆಂಬಲಿಸುವಂತೆ ಕೋರಿದ್ದರೂ ನ್ಯಾಟೋ ಮೂರ್ಖತನದ ನಿಲುವು ತೆಗೆದುಕೊಂಡಿದೆ ಎಂದು ಅಧ್ಯಕ್ಷ ಟ್ರಂಪ್ ಮಂಗಳವಾರ ಹತಾಶೆ ವ್ಯಕ್ತಪಡಿಸಿದ್ದಾರೆ. ನಮಗೆ ಯಾರ ಸಹಾಯದ ಅಗತ್ಯವಿಲ್ಲ, ನಮ್ಮಿಂದ ಸಹಾಯ ಪಡೆದವರು ನಮಗೆ ಸಹಾಯ ಮಾಡಲು ಸಿದ್ಧರಿಲ್ಲ, ನಾವು ಅಮೆರಿಕದವರು ವಿಶ್ವದಲ್ಲೇ ಅತ್ಯಂತ ಶಕ್ತಿಶಾಲಿಗಳು. ನಿಮ್ಮ ಸಹಾಯವಿಲ್ಲದೆಯೂ ಇರಾನ್‌ನ ಭಯೋತ್ಪಾದಕ ಆಡಳಿತದ ವಿರುದ್ಧ ಹೋರಾಡುತ್ತೇವೆ. ಇರಾನ್ ಸೇನೆ, ನೌಕಾಪಡೆ, ವಾಯುಪಡೆ, ವಾಯು ರಕ್ಷಣಾ ವ್ಯವಸ್ಥೆ ಮತ್ತು ನಾಯಕತ್ವ ಸೇರಿ ಅರ್ಧ ಇರಾನ್ ನಾಶ ಮಾಡಿದ್ದೇವೆ ಎಂದು ಟ್ರಂಪ್ ಹೇಳಿದ್ದಾರೆ.



ಯುಎಇ ಮೇಲಿನ ದಾಳಿ ಖಂಡಿಸಿದ ಮೋದಿ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಮತ್ತು ಕುವೈತ್ ದೊರೆ ಶೇಖ್ ಸಬಾ ಅಲ್-ಖಲೀದ್ ಅಲ್-ಹಮದ್ ಅಲ್-ಮುಬಾರಕ್ ಅಲ್-ಸಬಾ ಅವರೊಂದಿಗೆ ಮಾತನಾಡಿ, ಪಶ್ಚಿಮ ಏಷ್ಯಾದಲ್ಲಿ ಬದಲಾಗುತ್ತಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು ಮತ್ತು ಪ್ರಾದೇಶಿಕ ಸ್ಥಿರತೆಯ ಬಗ್ಗೆ ಭಾರತದ ನಿಲುವನ್ನು ಪುನರುಚ್ಚರಿಸಿದರು. ಅವರೊಂದಿಗೆ ಪಶ್ಚಿಮ ಏಷ್ಯಾ ಮತ್ತು ಹಾರ್ಮುಜ್ ಜಲಸಂಧಿಯ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಂಗಳವಾರ ಮಾತುಕತೆ ನಡೆಸಿದ್ದಾರೆ.

ತವರಿಗೆ 80,886 ಟನ್ ತೈಲ ಹೊತ್ತ ಜಗ್ ಲಾಡ್ಕಿ



ಅಹಮದಾಬಾದ್: ಫುಜೈರಾ ಬಂದರಿನ ಮೇಲೆ ಇರಾನ್ ದಾಳಿ ಹಿನ್ನೆಲೆ 80,886 ಟನ್ ಕಚ್ಚಾ ತೈಲ ಹೊತ್ತು ಯುಎಇನಿಂದ ಭಾನುವಾರ ಬೆಳಗ್ಗೆ ಹೊರಟಿದ್ದ ಜಗ್ ಲಾಡ್ಕಿ (ವಿಶ್ವದ ಮಗಳು) ತೈಲ ಟ್ಯಾಂಕರ್ ಹಡಗು ಬುಧವಾರ ಗುಜರಾತ್‌ನ ಮುಂದ್ರಾ ಬಂದರನ್ನು ತಲುಪಿದೆ. ಫುಜೈರಾ ಬಂದರಿನ ತೈಲ ಘಟಕಗಳ ಮೇಲೆ ಇರಾನ್ ದಾಳಿ ನಡೆಸಿದ್ದರಿಂದ ಭಾನುವಾರ ಬೆಳಗ್ಗೆ ಜಗ್ ಲಾಡ್ಕಿ ತೈಲ ಟ್ಯಾಂಕರ್ ಹಡಗು ಫುಜೈರಾ ಬಂದರಿನಿಂದ ಭಾರತದತ್ತ ಹೊರಟಿತ್ತು. ಯುಎಇಯಿಂದ ಇರಾನ್‌ನ ಖಾರ್ಗ್ ದ್ವೀಪದಲ್ಲಿನ ತೈಲ ಸಂಸ್ಕರಣಾ ಘಟಕಗಳ ಮೇಲೆ ಅಮೆರಿಕ ನಡೆಸಿದ ದಾಳಿಗೆ ಪ್ರತೀಕಾರವಾಗಿ ಮಾ.14ರ ಶನಿವಾರ ಫುಜೈರಾ ಬಂದರಿನ ತೈಲ ಘಟಕಗಳ ಮೇಲೆ ಇರಾನ್ ಪ್ರತಿದಾಳಿ ನಡೆಸಿದ್ದಾಗಿ ಒಪ್ಪಿಕೊಂಡಿದೆ. ಇದರಿಂದ ಫುಜೈರಾದಲ್ಲಿ ಕಚ್ಚಾ ತೈಲ ತುಂಬಿಸಿಕೊಳ್ಳುತ್ತಿದ್ದ ಭಾರತೀಯ ತೈಲ ಹಡಗು ಜಗ್ ಲಾಡ್ಕಿ ಭಾನುವಾರ ಬೆಳಗ್ಗೆ ಭಾರತದತ್ತ ಹೊರಟಿತ್ತು. 80,886 ಟನ್‌ಗಳಷ್ಟು ಮುರ್ಬನ್ ಕಚ್ಚಾ ತೈಲವನ್ನು ಹೊತ್ತ ಜಗ್ ಲಾಡ್ಕಿ ಹೊರ್ಮುಜ್ ಜಲಸಂಧಿಯನ್ನು ದಾಟಿ ಬಂದಿದೆ. ಹೊರ್ಮುಜ್ ಜಲಸಂಧಿಯನ್ನು ನಿರಾಯಾಸವಾಗಿ ದಾಟಿ ಭಾರತ ತಲುಪಿದ ಮೂರನೇ ತೈಲ ಹಡಗು ಇದಾಗಿದೆ.

ನಾನು ಜೀವಂತವಾಗಿದ್ದೇನೆ: ನೆತನ್ಯಾಹು

ಹೌದು ಮೈಕ್, ನಾನು ಜೀವಂತವಾಗಿದ್ದೇನೆ ಹೀಗೆಂದು ಇನ್ನೊಂದು ವಿಡಿಯೋ ಹರಿಯಬಿಟ್ಟಿದ್ದಾರೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು. ವಿಡಿಯೋದಲ್ಲಿ ನೆತನ್ಯಾಹು ತಾವು ಜೀವಂತವಾಗಿ ಇರುವುದನ್ನು ಸಾಬೀತುಪಡಿಸಿದ್ದು ಮಾತ್ರವಲ್ಲದೆ,



ತಮ್ಮಲ್ಲೊಂದು ಪಂಚ್ ಕಾರ್ಡ್ ಇದೆ. ಅದರಲ್ಲಿ ಇನ್ನೂ ಹಲವು ಇರಾನ್ ನಾಯಕರ ಹೆಸರುಗಳಿವೆ. ಅವರನ್ನು ಹತ್ಯೆಗೊಳಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇರಾನ್ ನಾಯಕ ಅಲಿ ಲರಿಜಾನಿ, ರಾಷ್ಟ್ರೀಯ ಭದ್ರತಾ ಸಮಿತಿ ಮತ್ತು ಇರಾನ್ ಪಡೆಯ ಕಮಾಂಡರ್ ಘೋಲಮ್‌ರೆಜಾ ಸೊಲೈಮಾನಿ ಅವರ ಹತ್ಯೆ ನಡೆಸಿರುವುದಾಗಿ ನೆತನ್ಯಾಹು ಮಂಗಳವಾರ ಹೇಳಿದ್ದರು. ಇಸ್ರೇಲ್‌ನಲ್ಲಿನ ಅಮೆರಿಕ ರಾಯಭಾರಿ ಮೈಕ್ ಹಕ್ಕಬೀ ಅವರ ಜತೆಗಿನ ಮಾತುಕತೆ ವಿಡಿಯೋವನ್ನು ನೆತನ್ಯಾಹು ಹಂಚಿಕೊಂಡಿದ್ದಾರೆ.

ನೆತನ್ಯಾಹುರನ್ನು ವಿಚಾರಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶಿಸಿದ್ದರೆಂಬ ಮೈಕ್ ಮಾತಿಗೆ, ಹೌದು ಮೈಕ್, ನಾನು ಜೀವಂತವಾಗಿದ್ದೇನೆ. ನಾವು ಐದು ಬೆರಳುಗಳಿರುವ ಕೈಗಳಿಂದ ಹಸ್ತಲಾಘವ ಮಾಡಿದ್ದೇವೆ ಎಂದು ನೆತನ್ಯಾಹು ವ್ಯಂಗ್ಯ ಮಾಡಿದ್ದಾರೆ.

ಇದಾದ ನಂತರ ತಮ್ಮ ಜೇಬಿನಿಂದ ಕಾರ್ಡ್‌ವೊಂದನ್ನು ತೆಗೆದ ನೆತನ್ಯಾಹು, ನಾನು ಜೀವಂತವಾಗಿದ್ದೇನೆ, ನನ್ನಲ್ಲಿ ಈ ಪಂಚ್ ಕಾರ್ಡ್ ಇದೆ. ಇದರಿಂದ ಇಬ್ಬರ ಹೆಸರನ್ನು ಅಳಿಸಿಹಾಕಿದ್ದೇನೆ. ಇನ್ನೂ ಹಲವರ ಹೆಸರು ಇದರಲ್ಲಿದೆ ಎಂದು ಇನ್ನೂ ಹಲವು ಇರಾನ್ ನಾಯಕರ ಹತ್ಯೆ ನಡೆಯಲಿದೆ ಎಂದು ಇರಾನ್‌ಗೆ ಎಚ್ಚರಿಕೆ ಸಂದೇಶವನ್ನು ರವಾನಿಸಿದ್ದಾರೆ.

ಕಿರುಸುದ್ದಿ

ನೀತಾ ಅಂಬಾನಿಗೆ ಕಳಿಂಗ ಮಾನವೀಯ ಪ್ರಶಸ್ತಿ

ಮುಂಬೈ: ರಿಲಯನ್ಸ್ ಫೌಂಡೇಷನ್ ಸ್ಥಾಪಕಿ ಹಾಗೂ ಅಧ್ಯಕ್ಷೆ ಆದ ನೀತಾ ಅಂಬಾನಿ ಅವರಿಗೆ ಪ್ರತಿಷ್ಠಿತ ಕಳಿಂಗ ಇನ್ ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (ಕಿಸ್) ಹ್ಯುಮಾನಿಟೇರಿಯನ್ ಪ್ರಶಸ್ತಿ 2025ಕ್ಕೆ ಭಾಜನರಾಗಿದ್ದಾರೆ. ಕಳಿಂಗ ಇನ್ ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ ಕ್ಯಾಂಪಸ್ ನಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ನೊಬೆಲ್ ಪ್ರಶಸ್ತಿ ವಿಜೇತರಾದ ಶ್ರೀಲಂಕಾದ ಪ್ರೊ .ಮೋಹನ್ ಮುನಸಿಂಘೆ ಅವರು ಈ ಪ್ರಶಸ್ತಿಯನ್ನು ನೀತಾ ಅಂಬಾನಿಯವರಿಗೆ ನೀಡಿದರು.

ಇರಾನ್‌ಗೆ ವೈದ್ಯಕೀಯ ನೆರವು ರವಾನೆ

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಸಂಘರ್ಷ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ ಭಾರತ ಇರಾನ್‌ಗೆ ತನ್ನ ಮೊದಲ ಹಂತದ ಮಾನವೀಯ ವೈದ್ಯಕೀಯ ನೆರವನ್ನು ರವಾನಿಸಿದೆ. ಕಷ್ಟ ಕಾಲದಲ್ಲಿ ಬೆಂಬಲ ನೀಡಿದ ಭಾರತದ ಜನತೆಗೆ ಟೆಹ್ರಾನ್ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದೆ. ಸಾರ್ವಜನಿಕ ದೇಣಿಗೆಗಳನ್ನು ಸುಲಭಗೊಳಿಸಲು ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿ ಅಧಿಕೃತ ಬ್ಯಾಂಕ್ ಖಾತೆ ಸಂಖ್ಯೆಯನ್ನು ಸಹ ಬಿಡುಗಡೆ ಮಾಡಿದೆ.

ಬೋರ್ಡೋಲಾಯಿ ಬಿಜೆಪಿಗೆ ಸೇರ್ಪಡೆ

ಗುವಾಹಟಿ: ಅಸ್ಸಾಂ ವಿಧಾನಸಭಾ ಚುನಾವಣೆಗೆ ಬರೇ 20 ದಿನಗಳು ಉಳಿದಿರುವಂತೆ, ಕಾಂಗ್ರೆಸ್ ಸಂಸದ ಪ್ರದ್ಯುತ್ ಬೋರ್ಡೋಲಾಯಿ ಪಕ್ಷಕ್ಕೆ ರಾಜೀನಾಮೆ ನೀಡಿ, ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ದಿಲೀಪ್ ಸೈಕಿಯಾ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

ಚುನಾವಣೆ ಕಾವಿನ ಮಧ್ಯೆ ಅಸ್ಸಾಂನಲ್ಲಿ ಕಾಂಗ್ರೆಸ್ ಹೊಡೆತ

ಮಿತಿಮೀರಿದ ಬೇಸರದಿಂದ ತಾನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಎಲ್ಲಾ ಹುದ್ದೆಗಳು, ಬಾಧ್ಯತೆಗಳು ಮತ್ತು ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಬೋರ್ಡೋಲಾಯಿ, ಖರ್ಗೆ ಅವರಿಗೆ ಸಲ್ಲಿಸಿರುವ ಒಂದು ವಾಕ್ಯದ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಭೂಪೇನ್ ಕುಮಾರ್ ಬೋರಾ ಎಪಿಸಿಸಿ ಅಧ್ಯಕ್ಷ ಗಾದಿಗೆ ರಾಜೀನಾಮೆ ನೀಡಿ ಆಳುವ ಬಿಜೆಪಿಗೆ ಸೇರಿದ ವಿದ್ಯಮಾನದ ಬೆನ್ನಲ್ಲೇ, ತಿಂಗಳವಧಿಯಲ್ಲಿ ಬೋರ್ಡೋಲಾಯಿ ಅವರೂ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ. ಎಪಿಸಿಸಿಯ ಇನ್ನೋರ್ವ ಹಿರಿಯ ನಾಯಕ , ಬೋರ್ಡೋಲಾಯಿ ಅವರ ನಿಕಟವರ್ತಿ ನಬಜ್ಯೋತಿ ತಾಲುಕ್‌ದಾರ್ ಕೂಡ ಮಂಗಳವಾರ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ. ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೊಗೊಯ್-ಜೋರ್ಹಟ್, ಬೋರ್ಡೋಲಾಯಿ ಮತ್ತು ರಕಿಬುಲ್ ಹುಸೇನ್ ಅಸ್ಸಾಂನಲ್ಲಿ ಕಾಂಗ್ರೆಸ್ ಹೊಂದಿರುವ ಮೂವರು ಸಂಸದರು. ಇದೀಗ ಬೋರ್ಡೋಲಾಯಿ ರಾಜೀನಾಮೆಯಿಂದ ಅಸ್ಸಾಂನಲ್ಲಿ ಕಾಂಗ್ರೆಸ್ ಸಂಸದ ಬಲ ಎರಡಕ್ಕಿಳಿದಿದೆ.

ಇಡಿ ದಾಳಿ ವೇಳೆ ಸಿಎಂ ನುಗ್ಗಿದರೆ ಕಥೆ ಏನು?

ಹೊಸದಿಲ್ಲಿ: ಐಪ್ಯಾಕ್ ಕಚೇರಿ ಮೇಲಿನ ದಾಳಿ ವೇಳೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನುಗ್ಗಿ ಹೋದ ಘಟನೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಮುಂದೆ ಬೇರೊಬ್ಬ ಮುಖ್ಯಮಂತ್ರಿಯೂ ಇದೇ ರೀತಿ ನುಗ್ಗಿ ಹೋದರೆ ಏನು ಮಾಡುವುದು ಎಂದು ಪ್ರಶ್ನಿಸಿದೆ.

ಮಮತಾ-ಐಪ್ಯಾಕ್ ಪ್ರಕರಣದಲ್ಲಿ ಸುಪ್ರೀಂ ಗಂಭೀರ ಪ್ರಶ್ನೆ


ಇದು ಖುಷಿಯ ಸಂಗತಿ ಅಲ್ಲವೇ ಅಲ್ಲ ಎಂದಿರುವ ಕೋರ್ಟ್, ಇಂಥ ಅಸಾಮಾನ್ಯ ಸಂದರ್ಭಗಳಲ್ಲಿ ಕೇಂದ್ರ ತನಿಖಾ ಸಂಸ್ಥೆ ಏನು ಮಾಡಬೇಕು ಎಂಬಂಥ ಸ್ಥಿತಿ ಉದ್ಭವವಾಗಲಿದೆ ಎಂದಿದೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಎನ್.ವಿ. ಅಂಜಾರಿಯಾ ಅವರ ಪೀಠವು, 'ನಾಳೆ ಮತ್ತೊಬ್ಬ ಮುಖ್ಯಮಂತ್ರಿ ಇದೇ ರೀತಿಯಲ್ಲಿ ದಾಳಿಗೆ ನುಗ್ಗಿದರೆ ಏನು? ಆಗ ಇಡಿ ಕೈಕಟ್ಟಿ ಕುಳಿತುಕೊಳ್ಳಬೇಕೇ?' ಎಂದು ಗಂಭೀರವಾಗಿ ಪ್ರಶ್ನಿಸಿತು.

ಇಡಿ ತನ್ನ ಅರ್ಜಿಯಲ್ಲಿ, ಐಪ್ಯಾಕ್ ಮುಖ್ಯಸ್ಥ ಪ್ರತೀಕ್ ಜೈನ್ ನಿವಾಸ ಮತ್ತು ಕಚೇರಿಗಳಲ್ಲಿ ನಡೆದ ದಾಳಿಯ ವೇಳೆ ಮುಖ್ಯಮಂತ್ರಿ ಬ್ಯಾನರ್ಜಿ ಲ್ಯಾಪ್‌ಟಾಪ್, ಮೊಬೈಲ್ ಮತ್ತು ಕೆಲವು ದಾಖಲೆಗಳನ್ನು ತೆಗೆದುಕೊಂಡು ಹೊರಟಿದ್ದಾರೆ ಎಂದು ಆರೋಪಿಸಿದೆ. ಇದನ್ನು ಅಧಿಕಾರದ ದುರುಪಯೋಗ ಎಂದು ಇಡಿ ಆಪಾದಿಸಿದೆ. ಈ ವೇಳೆ ಮುಖ್ಯಮಂತ್ರಿ ಕೇಂದ್ರ ಸಂಸ್ಥೆಯ ಕಾರ್ಯಕ್ಕೆ ಅಡ್ಡಿಯಾದರೆ ಅದರ ಪರಿಹಾರ ಯಾರು ನೀಡುತ್ತಾರೆ?'' ಎಂದು ನ್ಯಾಯಮೂರ್ತಿ ಮಿಶ್ರಾ ಪ್ರಶ್ನಿಸಿದ್ದಾರೆ. ಮುಂದಿನ ವಿಚಾರಣೆಯನ್ನು ಮಾ.24ಕ್ಕೆ ಮುಂದೂಡಲಾಗಿದೆ.

ರಾಷ್ಟ್ರಪತಿ ಸ್ವಾಗತಕ್ಕೆ ಸಜ್ಜಾದ ರಾಮ ನಗರಿ

ಅಯೋಧ್ಯೆಗೆ ಇಂದು ಮುರ್ಮು ಭೇಟಿ

ಅಯೋಧ್ಯೆ: ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದ ದ್ವಿತೀಯ ಮಹಡಿಯಲ್ಲಿ ಶ್ರೀ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸಲಿದ್ದಾರೆ. ಗುರುವಾರ ಬೆಳಗ್ಗೆ 9 ಗಂಟೆಗೆ ದಿಲ್ಲಿಯಿಂದ ಹೊರಟು 10:15 ಕ್ಕೆ ಅಯೋಧ್ಯೆಯ ಮಹರ್ಷಿ ವಾಲ್ಮೀಕಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದು, ಅಲ್ಲಿಂದ ನೇರವಾಗಿ ಶ್ರೀ ರಾಮ ಜನ್ಮಭೂಮಿ ಮಂದಿರಕ್ಕೆ ತೆರಳಲಿದ್ದಾರೆ. ಶ್ರೀ ರಾಮರ ವಿಶೇಷ ದರ್ಶನ ಮತ್ತು ಆರತಿಯ ನಂತರ ಶ್ರೀ ರಾಮ ಜನ್ಮಭೂಮಿಯ ಆವರಣದಲ್ಲಿರುವ ಮಂದಿರಗಳ ದರ್ಶನವನ್ನು ಪಡೆಯಲಿದ್ದಾರೆ. ದ್ವಿತೀಯ ಮಹಡಿಯಲ್ಲಿ ಶ್ರೀ ರಾಮ ಯಂತ್ರ ಸ್ಥಾಪಿಸಿದ ನಂತರ ಪ್ರಥಮ ಮಹಡಿಯಲ್ಲಿರುವ ರಾಮ ಪರಿವಾರದ ಆರತಿ ದರ್ಶನ ಪಡೆದು, ಮಧ್ಯಾಹ್ನ 12:30 ರಿಂದ 1:15 ರವರಗೆ ಶ್ರೀ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ಆಗಮಿಸಿದ ವಿಶೇಷ ಆಹ್ವಾನಿತರ ಸಭೆಯಲ್ಲಿ ಭಾಗವಹಿಸಿದ ನಂತರ ಸಪ್ತ ಮಂದಿರಗಳ ದರ್ಶನವನ್ನು ಪಡೆದು ಅಯೋಧ್ಯೆಯಿಂದ ನಿರ್ಗಮಿಸಲಿದ್ದಾರೆ ಎಂದು ಜಿಲ್ಲಾಡಳಿತ ತಿಳಿಸಿದೆ.



ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರು: ಉತ್ತರ ಪ್ರದೇಶ ಹಾಗೂ ಉತ್ತರಾಖಂಡನ ಸಂಘ ಪರಿವಾರದ ಹಿತೈಷಿಗಳು,ಕರಸೇವಕರು, ಶ್ರೀ ರಾಮ ಜನ್ಮಭೂಮಿ ಮಂದಿರದ ನಿರ್ಮಾಣ ಕಾರ್ಯದಲ್ಲಿ ಸೇವೆಯನ್ನು ಸಲ್ಲಿಸಿದ ಕಟ್ಟಡ ಕಾರ್ಮಿಕರು, ಗುತ್ತಿಗೆದಾರರು, ಮಾತಾ ಅಮೃತಾನಂದಮಯಿ ಅವರ ಒಂದು ಸಾವಿರ ಜನ ಶಿಷ್ಯರು ಸೇರಿದಂತೆ ಈ ಕಾರ್ಯದಲ್ಲಿ ಏಳು ಸಾವಿರ ಜನರು ಪಾಲ್ಗೊಳ್ಳಲಿದ್ದಾರೆ.

ವಿಶೇಷ ದರ್ಶನ, ಗಾಲಿ ಕುರ್ಚಿ ವ್ಯವಸ್ಥೆ ಸ್ಥಗಿತ: ಪ್ರತಿ ದಿನದಂತೆ ಸಾರ್ವಜನಿಕ ದರ್ಶನಕ್ಕೆ ಅವಕಾಶವಿದ್ದು, ಬೆಳಗ್ಗೆಯಿಂದ ಸಾಯಂಕಾಲ 5 ಗಂಟೆಯವರೆಗೂ ವಿಶೇಷ ದರ್ಶನ ಹಾಗೂ ಗಾಲಿ ಕುರ್ಚಿ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ತಿಳಿಸಿದೆ.

ರಾಜ್ಯಸಭೆಯಿಂದ ನಿವೃತ್ತ 59 ಸದಸ್ಯರಿಗೆ ಪ್ರಧಾನಿ ಮೋದಿ ಶುಭ ಹಾರೈಕೆ

ಸಂಸತ್ ಮುಕ್ತ ವಿಶ್ವವಿದ್ಯಾಲಯವಿದ್ದಂತೆ

ಹೊಸದಿಲ್ಲಿ: ಸಂಸತ್ತು ಒಂದು ಮುಕ್ತ ವಿಶ್ವವಿದ್ಯಾಲಯವಿದ್ದಂತೆ. ರಾಜನೀತಿಯಲ್ಲಿ ಪೂರ್ಣ ವಿರಾಮ ಎಂಬುದಿಲ್ಲ, ರಾಷ್ಟ್ರೀಯ ಬದುಕಿನಲ್ಲಿ ಸದಾ ಸಕ್ರಿಯರಾಗಿರಿ ಎಂದು ಏಪ್ರಿಲ್-ಜುಲೈ ನಡುವಣ ಅವಧಿಯಲ್ಲಿ ರಾಜ್ಯಸಭೆಯಿಂದ ನಿವೃತ್ತರಾಗಲಿರುವ ಜೆಡಿಎಸ್ ಹಿರಿಯ ನಾಯಕ, ಮಾಜಿ ಪ್ರಧಾನಿ ದೇವೇಗೌಡ, ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ನಾಯಕ ಪವಾರ್ ಸಹಿತ 59 ಸಂಸತ್ ಸದಸ್ಯರಿಗೆ ಪ್ರಧಾನಿ ನರೇಂದ್ರ ಮೋದಿ ಶುಭ ಹಾರೈಸಿದ್ದಾರೆ ಮತ್ತವರ ಕೊಡುಗೆಗಳನ್ನು ರಾಜ್ಯಸಭೆಯಲ್ಲಿನ ದ್ವೈವಾರ್ಷಿಕ ವಿದಾಯಕೂಟದಲ್ಲಿ ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.



ಮೂವರು ಬಲಿಷ್ಠ ನಾಯಕರ ನಿಷ್ಠೆಗೆ ಪ್ರಶಂಸೆ: ತಮ್ಮ ಬದುಕಿನ ಅರ್ಧಕ್ಕೂ ಮೀರಿ ಅವಧಿಯನ್ನು ಸಂಸದೀಯ ಕಲಾಪಗಳಿಗೆ ವ್ಯಯಿಸಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ನಾಯಕ ಶರದ್ ಪವಾರ್ ಬಲಿಷ್ಠ ನಾಯಕರು ಎಂದು ವಿಶೇಷವಾಗಿ ಪ್ರಶಂಸಿಸಿದರು. ತುಂಬು ಸ್ಫೂರ್ತಿ ಮತ್ತು ಸಮರ್ಪಣಾ ಭಾವದಿಂದ ಈ ನಾಯಕರು ಸದನದ ಕಲಾಪಗಳಿಗೆ ನಿರಂತರವಾಗಿ ಹಾಜರಾಗುತ್ತಿದ್ದ ಪರಿ ನಿಜಕ್ಕೂ ಅನುಕರಣೀಯ. ಎಲ್ಲಾ ಹೊಸ ಸಂಸದರಿಗೆ ಪ್ರೇರಣಾದಾಯಿ ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಗೃತಿ ಮೂಡಿಸುತ್ತಿದ್ದ ಹರಿವಂಶ್‌ಗೆ ನಮನ: ರಾಜ್ಯಸಭೆಯ ನಿರ್ಗಮನ ಅಧ್ಯಕ್ಷ ಹರಿವಂಶ್ ಅವರಿಗೆ ಪ್ರಧಾನಿ ಮೋದಿ ನಮನ ಸಲ್ಲಿಸಿದರು.

ಪಕ್ಷ ಭೇದ ಮರೆತು ವಿದಾಯ: ನಿವೃತ್ತರಾಗುತ್ತಿರುವ ತಮ್ಮ ಸಹೋದ್ಯೋಗಿಗಳಿಗೆ ರಾಜ್ಯಸಭಾ ಸದಸ್ಯರು ಬುಧವಾರ ಪಕ್ಷ ಭೇದ ಮರೆತು ವಿದಾಯ ಕೋರಿದರು ಮತ್ತು ನಿರ್ಗಮನ ಸದಸ್ಯರು ಮುಂದೆಯೂ ಸಾರ್ವಜನಿಕ ಬದುಕಲ್ಲಿ ನಿರಂತರ ಸೇವೆ ಸಲ್ಲಿಸಲಿರುವ ಭರವಸೆ ವ್ಯಕ್ತಪಡಿಸಿದರು.ನಿರ್ಗಮನ ಸದಸ್ಯರ ಪೈಕಿ ಬಹುತೇಕರು ತಮ್ಮ ಆರು ವರ್ಷಗಳ ಸೇವಾವಧಿಯಲ್ಲಿ ರಾಜ್ಯಸಭೆಯ ಮೂವರು ಅಧ್ಯಕ್ಷರಾದ ಎಂ.ವೆಂಕಯ್ಯ ನಾಯ್ಡು, ಜಗದೀಪ್ ಧನ್ಕರ್ ಮತ್ತು ಹಾಲಿ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವಧಿಯಲ್ಲೂ ಸೇವೆ ಸಲ್ಲಿಸಿದವರು ಎಂದು ಗಮನ ಸೆಳೆದರು.

ಖರ್ಗೆ ಹೇಳಿಕೆಗೆ ಸದನದಲ್ಲಿ ನಗೆ: ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಬುಧವಾರ ನಿವೃತ್ತಿ ಹೊಂದುತ್ತಿರುವ ಸದಸ್ಯರಿಗೆ ವಿದಾಯ ಹೇಳುವ ಸಂದರ್ಭದಲ್ಲಿ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರ ಬಗ್ಗೆ ಖರ್ಗೆ ಅವರು ಪ್ರೇಮ್ ಹುಮಾರೆ ಸಾಥ್, ಶಾದಿ ಮೋದಿ ಜಿ ಕೆ ಸಾಥ್' (ನಮ್ಮೊಂದಿಗೆ ಪ್ರೀತಿ ಮಾಡಿದರು, ಆದರೆ ಪ್ರಧಾನಿ ಮೋದಿ ಅವರೊಂದಿಗೆ ಮದುವೆಯಾದರು) ಎಂಬ ಹೇಳಿಕೆ ನೀಡಿದ್ದಾರೆ. ಇದು ಇಡೀ ಸದನವನ್ನೇ ನಗೆಗಡಲಲ್ಲಿ ತೇಲುವಂತೆ ಮಾಡಿತು.

ಪ್ರತ್ಯೇಕ ಬೆಂಕಿ ಅವಘಡದಲ್ಲಿ 17 ಮಂದಿ ಸಾವು

ಇಂದೋರ್‌ನಲ್ಲಿ ಇವಿ ಸ್ಫೋಟ: ಭೀಕರ ಬೆಂಕಿಗೆ ಎಂಟು ಬಲಿ

ಇಂದೋರ್: ಮೂರು ಅಂತಸ್ತಿನ ಮನೆಯಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ,. ಮನೆಯ ಹೊರಗೆ ಚಾರ್ಜ್ ಮಾಡಲಾಗುತ್ತಿದ್ದ ಎಲೆಕ್ಟ್ರಿಕ್ ವಾಹನ (ಇವಿ) ಸ್ಫೋಟಗೊಂಡಿದ್ದರಿಂದ ಈ ಬೆಂಕಿ ಕಾಣಿಸಿಕೊಂಡಿದೆ. ಮನೆಯ ಒಳಗಿದ್ದ ಗ್ಯಾಸ್ ಸಿಲಿಂಡರ್ ಕೂಡ ಸ್ಫೋಟಗೊಂಡಿದ್ದರಿಂದ ಜ್ವಾಲೆ ಕ್ಷಣಾರ್ಧದಲ್ಲಿ ಎಲ್ಲಾ ಮಹಡಿಗಳಿಗೆ ವ್ಯಾಪಿಸಿದೆ. ಮನೆಯ ಬಾಗಿಲುಗಳಿಗೆ ಎಲೆಕ್ಟ್ರಾನಿಕ್ ಲಾಕ್‌ಗಳಿದ್ದ ಕಾರಣ ಪೊಲೀಸರು ಒಳ ಪ್ರವೇಶಿಸಲು ಆರಂಭದಲ್ಲಿ ವಿಳಂಬವಾಗಿದೆ. ನಂತರ ಬಾಗಿಲು ಮುರಿದು ಸಿಲುಕಿಕೊಂಡಿದ್ದ ಮೂವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಒಬ್ಬರು ಮೃತಪಟ್ಟಿದ್ದಾರೆ. ಘಟನಾ ಸ್ಥಳದಿಂದ 7 ಮೃತ ದೇಹಗಳನ್ನು ವಶಪಡಿಸಿಕೊಂಡು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

ಘಟನೆಯ ಕುರಿತು ಪ್ರಧಾನಿ ಮೋದಿ ಎಕ್ಸ್ ನಲ್ಲಿ ಪ್ರತಿಕ್ರಿಯಿಸಿದ್ದು, ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು ಎಂದಿದ್ದಾರೆ. ಮೃತರ ಕುಟುಂಬದವರಿಗೆ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50,000 ರೂ.ಗಳ ಪರಿಹಾರ ಘೋಷಿಸಲಾಗಿದೆ. ವಾಹನದಲ್ಲಿ ಉಂಟಾದ ತಾಂತ್ರಿಕ ವೈಫಲ್ಯದ ಬಗ್ಗೆ ಅಧಿಕಾರಿಗಳು ಪ್ರಸ್ತುತ ಸಮಗ್ರ ತನಿಖೆ ನಡೆಸುತ್ತಿದ್ದಾರೆ.

ಕಟ್ಟಡ ಅಗ್ನಿ ಅವಘಡ: ಒಂದೇ ಕುಟುಂಬದ 9 ಮಂದಿ ಸಾವು

ಹೊಸದಿಲ್ಲಿ: ಪಾಲಂ ಪ್ರದೇಶದ ಬಹುಮಹಡಿ ಕಟ್ಟಡವೊಂದರಲ್ಲಿ ಬುಧವಾರ ಸಂಭವಿಸಿದ ಭೀಕರ ಅಗ್ನಿ ಅವಘಡದಲ್ಲಿ 70 ವರ್ಷದ ವೃದ್ಧೆ ಮತ್ತು ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಸದಸ್ಯರು ಮೃತಪಟ್ಟಿದ್ದಾರೆ. ಬೆಂಕಿಯ ಜ್ವಾಲೆಯಿಂದ ತಪ್ಪಿಸಿಕೊಳ್ಳಲು ಕಟ್ಟಡದಿಂದ ಜಿಗಿದ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ. ಜನಜಂಗುಳಿ ಮಾರುಕಟ್ಟೆಯಲ್ಲಿ ಈ ಘಟನೆ ನಡೆದಿದೆ.



ಬೆಳಿಗ್ಗೆ ಸುಮಾರು 6:15ಕ್ಕೆ ಕಟ್ಟಡದ ಕೆಳಮಹಡಿಯಲ್ಲಿದ್ದ ಬಟ್ಟೆ ಮತ್ತು ಸೌಂದರ್ಯವರ್ಧಕ ಮಳಿಗೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ವರದಿಯಾಗಿದೆ. ಅಂಗಡಿಯಲ್ಲಿದ್ದ ಸುಗಂಧ ದ್ರವ್ಯಗಳು ಮತ್ತು ಇತರ ದಹನಕಾರಿ ವಸ್ತುಗಳಿಂದಾಗಿ ಬೆಂಕಿ ವೇಗವಾಗಿ ಮೇಲಿನ ವಸತಿ ಮಹಡಿಗಳಿಗೆ ವ್ಯಾಪಿಸಿದೆ. ಮೆಟ್ಟಿಲುಗಳ ಬಳಿ ಸಂಭವಿಸಿದ ಶಾರ್ಟ್ ಸರ್ಕ್ಯೂಟ್ ಈ ಅವಘಡಕ್ಕೆ ಕಾರಣವಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ.

ವಸತಿರಹಿತರಿಗೆ ಮನೆ: ಸಚಿವ

• **ವಿಧಾನ ಪರಿಷತ್:** ಕಲಬುರಗಿ ಜಿಲ್ಲೆಯಲ್ಲಿ ವಸತಿರಹಿತ ಕುಟುಂಬಕ್ಕೆ ಮುಂದಿನ ಸಂಪುಟದಲ್ಲಿ ಅನುಮೋದಿಸಿ, ಮನೆಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಿದ್ದೇವೆ. ಮುಂಬರುವ ಜೂನ್ ತಿಂಗಳಲ್ಲಿ ನೆಲಮಂಗಲದಲ್ಲಿ ಕಾರ್ಯಕ್ರಮ ಮಾಡಿ, ಆದಷ್ಟು ಶೀಘ್ರದಲ್ಲಿ ಮನೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹ್ಮದ್ ಭರವಸೆ ನೀಡಿದರು.



ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ತಿಪ್ಪಣ್ಣ ಕಮಕನೂರ್ ಅವರು ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ವಸತಿರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲಬುರಗಿಯಲ್ಲಿ ನಮ್ಮ ಇಲಾಖೆ ವತಿಯಿಂದ ನಡೆಸಿದ ಸಮೀಕ್ಷೆ ಪ್ರಕಾರ, ಗ್ರಾಮೀಣ ಭಾಗದಲ್ಲಿ 1,52,089, ನಗರ ಭಾಗದಲ್ಲಿ 8,309 ಮನೆಗಳು ಸೇರಿ ಒಟ್ಟಾರೆ 1,60,398 ವಸತಿರಹಿತರಿದ್ದಾರೆ. ಹಾಗೂ ಗ್ರಾಮೀಣ ಭಾಗದಲ್ಲಿ 4,658 ಹಾಗೂ ನಗರ ಭಾಗದಲ್ಲಿ 18,813 ಸೇರಿದಂತೆ ಒಟ್ಟು 23,471 ನಿವೇಶನರಹಿತರಿರುವ ಮಾಹಿತಿ ಲಭ್ಯವಾಗಿದೆ ಎಂದರು.

1 ಲಕ್ಷ ಮನೆಗಳ ಹೊಸ ಗುರಿ

ಈ ಬಾರಿಯ ಬಜೆಟ್‌ನಲ್ಲಿ ಸರ್ವರಿಗೂ ಸೂರು ಕಲ್ಪಿಸುವ ಉದ್ದೇಶದಿಂದ ರಾಜ್ಯದ ವಿವಿಧ ವಸತಿ ಯೋಜನೆ ಅಡಿಯಲ್ಲಿ ಬಿಎಲ್‌ಸಿ ಆಧಾರಿತ 1 ಲಕ್ಷ ಮನೆಗಳ ಹೊಸ ಗುರಿಯನ್ನು ಘೋಷಿಸಲಾಗಿದೆ. ಈ ಗುರಿ ಅಡಿ ಆಯ್ಕೆಯಾಗುವ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ನೀಡುವ ಸಹಾಯಧನದಲ್ಲಿ ಕೇಂದ್ರ ಸರ್ಕಾರದಿಂದ 1.5 ಲಕ್ಷ ರೂ. ರಾಜ್ಯ ಸರ್ಕಾರದಿಂದಲೂ 1.20 ಲಕ್ಷ ಅನುದಾನ ಸಿಗಲಿದ್ದು, ರಾಜ್ಯದ 1.20 ಲಕ್ಷ ರೂ. ಮೊತ್ತವನ್ನು 2 ಲಕ್ಷ ರೂ.ವರೆಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ 2 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು. ಇದಕ್ಕೆ ಮುಖ್ಯಮಂತ್ರಿಗಳು ಪರಿಶೀಲನಾ ಸಭೆ ಕೈಗೊಂಡು ಅಂತಿಮವಾಗಿ ಸಚಿವ ಸಂಪುಟಕ್ಕೆ ತರಲು ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ಉತ್ಸಾಹ



ಧಾರವಾಡದಲ್ಲಿ ಬುಧವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲು ಉತ್ಸಾಹದಿಂದ ಹೊರಟ ವಿದ್ಯಾರ್ಥಿಗಳು.

ಉತ್ಸವಗಳಿಗೆ ಮಾರ್ಗಸೂಚಿ ರೂಪಿಸಿ

• **ವಿಧಾನಸಭೆ:** ಪ್ರತಿಯೊಂದು ಜಿಲ್ಲೆಯೂ ಉತ್ಸವವನ್ನು ಹೊಂದಿರಬೇಕು. ಈ ಜಿಲ್ಲಾ ಉತ್ಸವಗಳಿಗೆ ಮಾರ್ಗಸೂಚಿಯನ್ನು ರೂಪಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸಲಹೆ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಚನ್ನಬಸಪ್ಪ (ಚೆನ್ನಿ) ಅವರು ಸಹ್ಯಾದ್ರಿ ಉತ್ಸವ ಅಥವಾ ಮಲ್ನಾಡ್ ಉತ್ಸವವನ್ನು ನಿಯಮಿತವಾಗಿ ನಡೆಸಲು ಸರ್ಕಾರದಿಂದ ಅನುದಾನ ನೀಡುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಎಲ್ಲಾ ಜಿಲ್ಲೆಗಳಿಗೂ ತಮ್ಮದೇ ಆದ ಉತ್ಸವಗಳು ಬೇಕು ಎಂಬ ಬೇಡಿಕೆ ಹೆಚ್ಚಾಗುತ್ತಿದ್ದು, ಇದು ನಮಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಉತ್ಸವವು ಆಯಾ ಸ್ಥಳದ ಇತಿಹಾಸಕ್ಕೆ ತಳುಕುಹಾಕಿಕೊಂಡಿರಬೇಕು. ದಸರಾ ಮೊದಲು ಮೈಸೂರು, ಮಡಿಕೇರಿ ಮತ್ತು ಚಾಮರಾಜನಗರಕ್ಕೆ ಮಾತ್ರ ಸೀಮಿತವಾಗಿತ್ತು. ನಂತರ ಶಿವಮೊಗ್ಗವನ್ನೂ ಸೇರಿಸಲಾಯಿತು ಎಂದು ಮಾಹಿತಿ ನೀಡಿದರು.



ಈ ವೇಳೆ ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಪ್ರತಿಯೊಂದು ಜಿಲ್ಲೆಗೂ ಅದರದ್ದೇ ಆದ ಉತ್ಸವ ಇರಬೇಕು. ಇದು ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉತ್ತೇಜಿಸುತ್ತದೆ. ಇಲ್ಲದಿದ್ದರೆ ಮುಂದಿನ ಪೀಳಿಗೆಯ ಮಕ್ಕಳು ನಮ್ಮ ಸಂಸ್ಕೃತಿಯನ್ನು ಸಂಪೂರ್ಣವಾಗಿ ಮರೆತುಬಿಡುತ್ತಾರೆ ಎಂದು ಅಭಿಪ್ರಾಯಪಟ್ಟರು.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ರಾಜ್ಯದಲ್ಲಿ ವರ್ಷಪೂರ್ತಿ ಉತ್ಸವಗಳು ನಡೆಯಬೇಕು. ಅವು ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿರದೇ ಸ್ಥಳೀಯ ಕಲಾವಿದರಿಗೆ ನೆರವಾಗಲು ಆರ್ಥಿಕ ಚಟುವಟಿಕೆಗಳನ್ನು ಸೃಷ್ಟಿಸುವಂತಿರಬೇಕು. ನಾವು ಕೇವಲ ಎರಡು ದಿನದ ಉತ್ಸವಕ್ಕಾಗಿ 20 ಕೋಟಿ ರೂ. ಖರ್ಚು ಮಾಡುತ್ತೇವೆ. ಹಾಗಾದರೆ ಉಳಿದ 363 ದಿನಗಳ ಕಥೆ ಏನು? ಎಂದು ಪ್ರಶ್ನಿಸಿದರು. ಈ ವೇಳೆ ಕಾರ್ಮಿಕ ಸಚಿವ ಸಂತೋಷ್ ಲಾಡ್, ಹೊಸ ಉತ್ಸವಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚವಾಗುತ್ತದೆ. ಏಕೆಂದರೆ ದೊಡ್ಡ ಗಾಯಕರನ್ನು ಆಹ್ವಾನಿಸಲಾಗುತ್ತದೆ. ಗಾಯಕರು ಮತ್ತು ಐಟಂ ಹಾಡುಗಳಿಲ್ಲದೆ ಜನರು ಕಾರ್ಯಕ್ರಮಕ್ಕೆ ಬರುವುದೇ ಇಲ್ಲ, ಇದಲ್ಲದೇ ಬೇರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಿದರೆ ಪ್ರೇಕ್ಷಕರೇ ಇರುವುದಿಲ್ಲ ಎಂದರು.

ಕಿರುಸುದ್ದಿ

ವೈಷ್ಣೋದೇವಿ ಯಾತ್ರಿಗಳಿಗೆ ತಲಾ ₹5 ಸಾವಿರ ಸಹಾಯಧನ

• **ಬೆಂಗಳೂರು:** ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ರೂ. ಸಹಾಯಧನ ಯೋಜನೆ ಜಾರಿ ಮಾಡಲಾಗಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಮಂಜುನಾಥ್ ಪ್ರಶ್ನೆಗೆ ಉತ್ತರ ನೀಡಿದ ಅವರು, ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಭೇಟಿ ನೀಡುವ ಯಾತ್ರಿಗಳಿಗೆ ತಲಾ 5 ಸಾವಿರ ರೂ. ಸಹಾಯಧನ ಯೋಜನೆ ಜಾರಿ ಮಾಡಲಾಗಿದೆ. ಇದಕ್ಕಾಗಿ ಸರ್ಕಾರ 5 ಕೋಟಿ ರೂ. ಹಣ ಮೀಸಲಿರಿಸಲಾಗಿದೆ. 2026-27ನೇ ಸಾಲಿನಿಂದ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದರು. ಅಲ್ಲದೇ, ಕೈಲಾಸ ಮಾನಸ ಸರೋವರ ಯಾತ್ರಿಗಳಿಗೆ 30 ಸಾವಿರ ರೂ. ಚಾರ್ ಧಾಮ್‌ಗೆ 20 ಸಾವಿರ ರೂ. ಮತ್ತು ಕಾಶಿ ಯಾತ್ರಿಗಳಿಗೆ 5 ಸಾವಿರ ರೂ. ಸಹಾಯಧನ ನೀಡಲಾಗುತ್ತದೆ. ಅರ್ಚಕರಿಗೆ ಉಚಿತವಾಗಿ ಯಾತ್ರೆ ಮಾಡಿಸುತ್ತೇವೆ. ವರ್ಷಕ್ಕೆ 2,500 ಅರ್ಚಕರಿಗೆ ಉಚಿತ ಪ್ರವಾಸ ಕೊಡಿಸಲಾಗುತ್ತದೆ. ಯಾತ್ರಿಗಳು ವೈಷ್ಣೋದೇವಿ ಸೇರಿ ಯಾತ್ರೆಗೆ ಹೋಗಿ ಫೋಟೋ ಅಪ್ಲೋಡ್ ಮಾಡಿದರೆ ಸಹಾಯಧನ ಅವರ ಮನೆಗೆ ಕೊಡುತ್ತೇವೆ. ಫಸ್ಟ್ ಕಮ್ ಫಸ್ಟ್ ಸರ್ವೀಸ್ ನೀಡಲಾಗುತ್ತದೆ. ಯಾರು ಬೇಕಾದರೂ ಯಾತ್ರೆಗೆ ಹೋಗಬಹುದು ಎಂದು ಹೇಳಿದರು.

ದೈಹಿಕ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಿ: ನಮೋಶಿ

• **ವಿಧಾನ ಪರಿಷತ್:** ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ದೈಹಿಕ ಹಾಗೂ ವಿಷಯ ಶಿಕ್ಷಕರ ಹುದ್ದೆಗಳು ಸಾವಿರಾರು ಸಂಖ್ಯೆಯಲ್ಲಿ ಖಾಲಿಯಿದ್ದು, ಅವುಗಳ ಭರ್ತಿಗೆ ಸರ್ಕಾರ ಕ್ರಮ ವಹಿಸಬೇಕು ಎಂದು ಬಿಜೆಪಿ ಶಾಸಕ ಶಶಿಲ್ ನಮೋಶಿ ಒತ್ತಾಯಿಸಿದರು. ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ದೈಹಿಕ ಶಿಕ್ಷಕ ಹಾಗೂ ವಿಷಯ ಶಿಕ್ಷಕರ ಹುದ್ದೆಗಳಿಗೆ ಕಳೆದ 15 ವರ್ಷಗಳಿಂದ ನೇಮಕಾತಿಯೇ ನಡೆದಿಲ್ಲ, ಪರಿಣಾಮ ಆಯಾ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆದಿರುವ ಲಕ್ಷಾಂತರ ಜನ ಅಭ್ಯರ್ಥಿಗಳು ಸರ್ಕಾರಿ ನೌಕರರಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಮತ್ತೊಂದೆಡೆ ಪ್ರಾಥಮಿಕ ಹಂತದಿಂದಲೇ ಮಕ್ಕಳು ದೈಹಿಕ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಸಮಸ್ಯೆಯ ಗಂಭೀರತೆಯನ್ನು ಸದನದ ಮುಂದಿಟ್ಟರು. ಅದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಾ.ಜಿ.ಪರಮೇಶ್ವರ್, ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಸದನಕ್ಕೆ ಭರವಸೆ ನೀಡಿದರು.

ಭದ್ರಾ ಅಣೆಕಟ್ಟು ದುರಸ್ತಿಯಲ್ಲಿ ಅಕ್ರಮ

• **ವಿಧಾನ ಪರಿಷತ್:** ಭದ್ರಾ ಜಲಾಶಯದ ಗೇಟ್‌ಗಳ ದುರಸ್ತಿ ಕಾರ್ಯದಲ್ಲಿ ಅಕ್ರಮದ ಆರೋಪ ಕೇಳಿ ಬರುತ್ತಿದ್ದು, ಈ ಕೂಡಲೇ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಶಾಸಕಿ ಬಿಲ್ಕಿಸ್ ಬಾನು ಸರ್ಕಾರಕ್ಕೆ ಒತ್ತಾಯಿಸಿದರು. ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ಭದ್ರಾ ಜಲಾಶಯದ ದುರಸ್ತಿ ಕಾಮಗಾರಿಗೆ ಸರ್ಕಾರ 4 ಕೋಟಿ ರೂ. ಒದಗಿಸಿದೆ. ಆದರೆ, ತುಂಗಭದ್ರಾ ಜಲಾಶಯದಿಂದ ತೆರವುಗೊಳಿಸಿರುವ ಹಳೆಯ ತುಕ್ಕು ಹಿಡಿದ ಕ್ರಸ್ಟ್ ಗೇಟ್‌ಗಳು ಗುಜರಿಗೆ ಸೇರುವಂತಿವೆ. ಅವುಗಳನ್ನು ಇಲ್ಲಿ ಬಿಡಿ ಭಾಗಗಳನ್ನಾಗಿ ಬಳಕೆ ಮಾಡಲಾಗುತ್ತಿದೆ. ನೀರು ಸೋರಿಕೆಯಾಗದಂತೆ ಗೇಟ್‌ಗಳಿಗೆ ಅಳವಡಿಸುವ ರಬ್ಬರ್ ಕಳಪೆಯಾಗುತ್ತಿದೆ ಎಂಬ ಮಾಹಿತಿಯಿದೆ. ಈ ಕೂಡಲೇ ಸರ್ಕಾರ ಗಮನ ಹರಿಸಿ, ತನಿಖೆ ನಡೆಸಬೇಕು ಎಂದು ಕೋರಿದರು.

ಮಹಾನಗರ, ನಗರ ಸ್ಥಳೀಯ ಸಂಸ್ಥೆಗಳಿಗೆ ತಿದ್ದುಪಡಿ ಕಾಯ್ದೆ ಅನ್ವಯ

ಜಾಹೀರಾತು ಮಸೂದೆಗೆ ಅಸ್ತು

• **ವಿಧಾನ ಪರಿಷತ್:** ರಾಜ್ಯಾದ್ಯಂತ ಪುರಸಭೆಗಳು ಹೋರ್ಡಿಂಗ್‌ಗಳು, ಜಾಹೀರಾತು ಫಲಕಗಳ ಶುಲ್ಕದ ಮೇಲೆ ತೆರಿಗೆ ವಿಧಿಸಲು ಅನುವು ಮಾಡಿಕೊಡುವ ತಿದ್ದುಪಡಿ ಮಸೂದೆ ಅಂಗೀಕರಿಸಿದೆ.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧಾನಸಭೆಯಿಂದ ಅಂಗೀಕರಿಸಿದ ಮಸೂದೆಯನ್ನು ಪರಿಷತ್‌ನಲ್ಲಿ ಮಂಡಿಸಿ ಅಂಗೀಕಾರ ಪಡೆದರು. ಇದಕ್ಕೂ ಮುನ್ನ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ಹೊರತುಪಡಿಸಿ ರಾಜ್ಯದ ಇನ್ನುಳಿದ ಮಹಾನಗರ, ನಗರಸಭೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಉದ್ದೇಶಿತ ತಿದ್ದುಪಡಿ ಕಾಯ್ದೆ ಅನ್ವಯವಾಗಲಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಜಾಹೀರಾತು ಹೋರ್ಡಿಂಗ್‌ಗಳನ್ನು ಅಳವಡಿಸಿ ಭಾರೀ ಪ್ರಚಾರ ಪಡೆದುಕೊಳ್ಳುತ್ತಿವೆ. ಹೋರ್ಡಿಂಗ್‌ಗೆ ಜಾಗ ಮಾಡಿಕೊಟ್ಟ ಮನೆ, ನಿವೇಶನ ಮಾಲೀಕರಿಗೆ ಆದಾಯ ಪಡೆಯುತ್ತಿದ್ದಾರೆ. ಆದರೆ, ಆದರಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಆದಾಯವೇ ಇಲ್ಲ. ಜಾಹೀರಾತು ಶುಲ್ಕದಿಂದ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಬಲವರ್ಧನೆಯಾಗಲಿವೆ ಎಂಬುದು ಈ ಮಸೂದೆಯ ಸದುದ್ದೇಶವಾಗಿದೆ. ಈ ಕುರಿತಂತೆ ಶೀಘ್ರವೇ ಡ್ರೋಣ್‌ಗಳ ಮೂಲಕ ಹೋರ್ಡಿಂಗ್ಸ್ ಸಮೀಕ್ಷೆ ನಡೆಸಲಾಗುತ್ತದೆ. ಸ್ವಂತ ಉದ್ಯಮ ಫಲಕಗಳಿಗೆ ಇದರಿಂದ ವಿನಾಯಿತಿ ನೀಡಲಾಗುವುದು ಎಂದರು. ಅದಕ್ಕೆ ಆಕ್ಷೇಪಿಸಿದ ಬಿಜೆಪಿ ಸದಸ್ಯರಾದ ಸಿ.ಟಿ.ರವಿ, ಖಾಸಗಿ ಕಟ್ಟಡಗಳ ಮಾಲೀಕರು ಈಗಾಗಲೇ ಸರ್ಕಾರಕ್ಕೆ ಆಸ್ತಿ ತೆರಿಗೆ, ನೀರಿನ ಕರ, ಕಸದ ತೆರಿಗೆ ಕಟ್ಟುತ್ತಿದ್ದರೂ ಸರ್ಕಾರದ ಹಣದ ದಾಹ ತೀರುತ್ತಿಲ್ಲ. ಹೀಗಾಗಿ ಜಾಹೀರಾತು ಫಲಕಗಳಿಂದ ಜನರಿಗೆ ಬರುವ ಆದಾಯಕ್ಕೂ ಸರ್ಕಾರ ಕನ್ನ ಹಾಕುತ್ತಿದೆ ಎಂಬುದಕ್ಕೆ ಈ ವಿಧೇಯಕ ಸಾಕ್ಷಿ. ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಜಾಹೀರಾತು ಪ್ರದರ್ಶಿಸಲು ಕಂಪನಿಗಳು ದುಡ್ಡು ನೀಡುವುದಲ್ಲದೇ ನಿಮಗೂ ತೆರಿಗೆ ಕಟ್ಟಬೇಕೇ? ಇನ್ನೂ ಯಾವ ಯಾವ ಮೂಲದಿಂದ ತೆರಿಗೆ ಸಂಗ್ರಹಿಸಬೇಕೋ ಹೇಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಪ್ರಚಾರಕ್ಕಾಗಿ ಸುಣ್ಣ ಬಣ್ಣ

ಇದಕ್ಕೆ ಧ್ವನಿಗೂಡಿಸಿದ ಭೋಜೇಗೌಡ, ಮುಖ್ಯ ರಸ್ತೆಯಲ್ಲಿರುವ ಅನೇಕ ಮನೆಗಳ ಗೋಡೆಗಳಿಗೆ ಪ್ಲಾಸ್ಟರಿಂಗ್, ಸುಣ್ಣ ಬಣ್ಣವೂ ಇರುವುದಿಲ್ಲ, ಅಂತಹ ಕಟ್ಟಡಗಳ ಮಾಲೀಕರಿಗೆ ಒಂದಿಷ್ಟು ಹಣ ನೀಡಿ, ತಮ್ಮ ಕಂಪನಿಯ ಪ್ರಚಾರಕ್ಕಾಗಿ ಸುಣ್ಣಬಣ್ಣ ಬರೆಸುವುದಕ್ಕೂ ಈ ವಿಧೇಯಕ ಕೊಡಲಿ ಪೆಟ್ಟಾಗುತ್ತದೆ. ಬಡವರ ಹೊಟ್ಟೆ ಮೇಲೆ ಹೊಡೆದಂತಾಗುತ್ತದೆ ಎಂದು ಎಚ್ಚರಿಸಿದರು. ಆಗ ಮಧ್ಯ ಪ್ರವೇಶಿಸಿದ ಸಭಾಪತಿ ಹೊರಟ್ಟಿ, ಭೋಜೇಗೌಡ ನಾಳೆ ನಾನು ತೋರಿಸುತ್ತೇನೆ ಕೂರು ಎಂದು ನಗೆ ಚಟಾಕಿ ಹಾರಿಸಿದರು.

ಪೊಲೀಸ್ ತಿದ್ದುಪಡಿ ವಿಧೇಯಕ ಅಂಗೀಕಾರ

• **ವಿಧಾನ ಪರಿಷತ್:** ಅಶಿಸ್ತು, ಅನುಚಿತ ವರ್ತನೆ ಹಾಗೂ ಕರ್ತವ್ಯ ಲೋಪ ಎಸಗುವ ಡಿವೈಎಸ್ಪಿಗಿಂತ ಕೆಳ ಹಂತದ ಸಿಬ್ಬಂದಿಗೆ ಅಂಕುಶ ಹಾಕುವ ಉದ್ದೇಶದಿಂದ ಗೃಹಸಚಿವ ಡಾ.ಜಿ.ಪರಮೇಶ್ವರ ಮಂಡಿಸಿದ ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ-2026 ಅನ್ನು ಮೇಲ್ಮನೆಯಲ್ಲಿ ಅಂಗೀಕರಿಸಲಾಯಿತು.

ತಿದ್ದುಪಡಿ ವಿಧೇಯಕವನ್ನು ಮಂಡಿಸಿದ ಸಚಿವ ಡಾ.ಪರಮೇಶ್ವರ್, ಪೊಲೀಸ್ ವರ್ಗಾವಣೆಗೆ ಸಂಬಂಧಿಸಿದ ಈ ಮಸೂದೆಯನ್ನು ಕೆಳಮನೆ ಅಂಗೀಕರಿಸಿದೆ. ಐಪಿಎಸ್, ಡಿವೈಎಸ್ಪಿ ಹಾಗೂ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆಗೆ ಈಗಾಗಲೇ ವ್ಯವಸ್ಥೆಯಿದೆ. ಆದರೆ, ಅಶಿಸ್ತು, ಕರ್ತವ್ಯಲೋಪ ತೋರಿದವರನ್ನು ತಕ್ಷಣ ಅಲ್ಲಿಂದ ವರ್ಗಾವಣೆ ಮಾಡಲು ಈ ವಿಧೇಯಕದಡಿ ಕರ್ನಾಟಕ ಪೊಲೀಸ್ ಎಸ್ಟಾಬ್ಲಿಷ್ಮೆಂಟ್ ಬೋರ್ಡ್ ಸ್ಥಾಪಿಸಲಾಗುತ್ತದೆ. ಡಿಜಿ-ಐಜಿ ಅವರು ಬೋರ್ಡ್‌ನ ಮುಖ್ಯಸ್ಥರಾಗಿರುತ್ತಾರೆ.

ಪೊಲೀಸರ ದುರ್ನಡತೆ ಹೆಚ್ಚಳ

ಅದಕ್ಕೆ ಪ್ರತಿಕ್ರಿಯಿಸಿದ ಜೆಡಿಎಸ್ ಸದಸ್ಯ ಶರವಣ, ಬಿಜೆಪಿ ಸದಸ್ಯೆ ಹೇಮಲತಾ ನಾಯಕ್, ನವೀನ್ ಕೆ.ಎಸ್., ಕಾಂಗ್ರೆಸ್‌ನ ಎಂ.ನಾಗರಾಜು, ಇತ್ತೀಚಿನ ದಿನಗಳಲ್ಲಿ ಪೊಲೀಸ್ ಅಧಿಕಾರಿಗಳ ದುರ್ನಡತೆ ಹೆಚ್ಚುತ್ತಿದೆ. ಸಾರ್ವಜನಿಕರು, ರೈತರು ಮೇಲೆ ಪೊಲೀಸ್ ದರ್ಪಕ್ಕೆ ಕಡಿವಾಣ ಹಾಕಬೇಕು. ವರ್ಗಾವಣೆ ನೆಪದಲ್ಲಿ ಕೆಳ ಸಿಬ್ಬಂದಿಗೆ ಕಿರುಕುಳ ಆಗದಂತೆ ಕಾಯ್ದೆಯಲ್ಲಿ ನಿಯಮಗಳನ್ನು ರೂಪಿಸಿ ಎಂದರು.

ಕೃಷಿ ಇಲಾಖೆಯಲ್ಲಿ 940 ಹುದ್ದೆಗಳ ಭರ್ತಿ: ಸಚಿವ

143 ಹುದ್ದೆಗಳು ಮಂಜೂರು

ಉಡುಪಿ ಜಿಲ್ಲೆ ವ್ಯಾಪ್ತಿಯಲ್ಲಿನ ವಿವಿಧ ಕಚೇರಿಗಳಲ್ಲಿ 143 ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 30 ಹುದ್ದೆಗಳು ಖಾಲಿಯಿವೆ. ಮುಂದಿನ 2-3 ತಿಂಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಉಡುಪಿ ಭಾಗಕ್ಕೂ ನಿಯೋಜಿಸಲಾಗುವುದು ಎಂದು ಸಚಿವರು ತಿಳಿಸಿದರು.

• **ವಿಧಾನಸಭೆ:** ಕೃಷಿ ಇಲಾಖೆಯಲ್ಲಿ ಖಾಲಿ ಇರುವ 940 ಹುದ್ದೆಗಳನ್ನು ಮೂರು ತಿಂಗಳಲ್ಲಿ ಭರ್ತಿ ಮಾಡಲಾಗುವುದು ಎಂದು ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.




ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 2018ರಲ್ಲಿ 370 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 2023ರಲ್ಲಿ 940 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಕೃಷಿ ಇಲಾಖೆಯ ಗ್ರೂಪ್ ಬಿ ಮತ್ತು ಸಿ ವೃಂದದ ಹುದ್ದೆಗಳನ್ನು ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ವೃಂದದಲ್ಲಿ ನೇರ ನೇಮಕಾತಿ ಕೋಟಾದಡಿ 945 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ನಂತರ ಪರಿಶಿಷ್ಟ ಜಾತಿ ಒಳಮೀಸಲಾತಿ ಜಾರಿಗೆ ಬಂದಿದ್ದು, ಸರ್ಕಾರದ ನಿರ್ದೇಶನದನ್ವಯ ಹಿಂದಿನ ನೇಮಕಾತಿ ಅಧಿಸೂಚನೆ ರದ್ದು ಪಡಿಸಲಾಗಿದೆ. ಸರ್ಕಾರದ ಇತ್ತೀಚಿನ ನಿರ್ದೇಶನದಂತೆ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಲು ಕ್ರಮ ವಹಿಸಲಾಗುತ್ತಿದೆ. ಮುಂದಿನ ಮೂರು ತಿಂಗಳಲ್ಲಿ ನೇಮಕಾತಿ ಮಾಡಲಾಗುವುದು ಎಂದರು.

6 ಸಾವಿರ ಹೊಸ ಬಸ್ ಖರೀದಿಗೆ ತೀರ್ಮಾನ

• **ವಿಧಾನ ಪರಿಷತ್:** ನಮ್ಮ ಸರ್ಕಾರ ಬಂದ ಮೇಲೆ ಸುಮಾರು 6 ಸಾವಿರ ಹೊಸ ಬಸ್ ಖರೀದಿ ಮಾಡಲು ತೀರ್ಮಾನಿಸಿದ್ದೇವೆ. ಅವಧಿ ಮೀರಿರುವ ಬಸ್‌ಗಳು ನಮ್ಮಲ್ಲಿ ಇಲ್ಲ, ಹೊಸ ಬಸ್ ಖರೀದಿಗೆ ಟೆಂಡರ್ ಕರೆಯಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.



ಸದಸ್ಯರಾದ ಭಾರತಿ ಶೆಟ್ಟಿ ಹಾಗೂ ಗೋವಿಂದ್ ರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಎಲ್ಲೆಲ್ಲಿ ಕೊರತೆ ಇದೆಯೋ ಅಂತಹ ಕಡೆ ಆದ್ಯತೆ ಮೇರೆಗೆ ಬಸ್‌ಗಳನ್ನು ಒದಗಿಸುತ್ತೇವೆ. ಪ್ರಕ್ರಿಯೆಯಿಂದ ತಡವಾಗಿದೆ. ಮುಖ್ಯಮಂತ್ರಿ ಅವರು 2 ಸಾವಿರ ಕೋಟಿ ರೂ. ಸಾಲ ಕೊಟ್ಟಿದ್ದಾರೆ. ಅದನ್ನು ಕೆಎಸ್‌ಆರ್‌ಟಿಸಿ ತೀರಿಸುತ್ತಿದೆ. ಇಲಾಖೆಯಲ್ಲಿ ಒಟ್ಟು 6 ಸಾವಿರ ಕೋಟಿ ರೂ. ಸಾಲ ಇದೆ. ಇದನ್ನು ಸರ್ಕಾರವೇ ತೀರಿಸಲಿದೆ. ನಾನು ಮಂತ್ರಿ ಆದಾಗ 4,099 ಕೋಟಿ ರೂ. ಸಾಲವಿತ್ತು. ಹಿಂದಿನ ಸರ್ಕಾರ ಬಸ್ ಖರೀದಿ ಮಾಡಿರಲಿಲ್ಲ, ನೇಮಕಾತಿ ಆಗಿರಲಿಲ್ಲ, ನಮ್ಮ ಸರ್ಕಾರ ಬಂದ ನಂತರ ಸುಮಾರು 6 ಸಾವಿರ ಹೊಸ ಬಸ್ ಅನ್ನು ಖರೀದಿಗೆ ತೀರ್ಮಾನಿಸಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಇದಕ್ಕೂ ಮೊದಲು ಸದಸ್ಯೆ ಭಾರತಿ ಶೆಟ್ಟಿ ಅವರು, ಮಹಿಳೆಯರಿಗೆ ಉಚಿತ ಸಾರಿಗೆ ಸೌಲಭ್ಯದ ಶಕ್ತಿ ಯೋಜನೆ ಹಣ ಸರ್ಕಾರದಿಂದ ಬಾಕಿ ಇದೆ. ಇದರಿಂದ ಇಲಾಖೆಗೆ ಆರ್ಥಿಕ ಕೊರತೆ ಉಂಟಾಗಿದೆ. ನಮ್ಮ ಸರ್ಕಾರದಲ್ಲಿ ಬಸ್ ಸರಿಯಾಗಿತ್ತು. ಅದಕ್ಕೆ ಹೊಸ ಬಸ್ ಖರೀದಿ ಮಾಡಿಲ್ಲ, ಈಗ ಸರಿಯಿಲ್ಲ, ಹೊಸ ಬಸ್ ಖರೀದಿ ಮಾಡಿ ಎಂದು ತಿಳಿಸಿದರು. ಸದಸ್ಯ ಗೋವಿಂದ್ ರಾಜ್ ಮಾತನಾಡಿ, ಕೇಂದ್ರದ ಜಿಸಿಸಿ ಬಸ್ ಯಾವಾಗ ಬರುತ್ತದೆ? ಶಕ್ತಿ ಯೋಜನೆಯಿಂದ 4 ಸಾವಿರ ಕೋಟಿ ರೂ. ಬಾಕಿ ಇದೆ. ಶಕ್ತಿ ಯೋಜನೆ ಆತುರವಾಗಿ ಜಾರಿ ಮಾಡಿದ್ದೀರಿ. ಈ ಯೋಜನೆಗೆ ಬಾಕಿ ಹಣ ತೆಗೆದುಕೊಂಡು ಹೊಸ ಬಸ್ ಖರೀದಿ ಮಾಡಬೇಕು. ನೌಕರರ ವೇತನ ಪರಿಷ್ಕರಣೆ ಮಾಡಿ ಎಂದು ಒತ್ತಾಯಿಸಿದರು.

ಸ್ವಯಂಚಾಲಿತವಾಗಿ ಖಾತೆ ಬದಲಾವಣೆ

• **ವಿಧಾನ ಪರಿಷತ್:** ಆಸ್ತಿ ನೋಂದಣಿ ನಂತರ ಖಾತೆ ಬದಲಾವಣೆ ಪೈಕಿ ಪ್ರಸ್ತುತ ಶೇ.98 ರಷ್ಟು ಸ್ವಯಂ ಚಾಲಿತವಾಗಿಯೇ ಖಾತೆ ಬದಲಾವಣೆ ಆಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಳೆದ 1 ವರ್ಷದಿಂದ 2 ಹಂತದಲ್ಲಿ ಸುಧಾರಣೆಗಳನ್ನು ತರಲಾಗಿದೆ. ಹೀಗಾಗಿ ಮೊದಲ ಹಂತದಲ್ಲಿ ಕಳೆದ ವರ್ಷ ಒಟ್ಟು ಖಾತೆ ಬದಲಾವಣೆ ಪೈಕಿ ಶೇ.66 ರಷ್ಟು ಖಾತೆಗಳನ್ನು ಆಟೋ ಮ್ಯುಟೇಶನ್ ಮಾಡುವ ಮೂಲಕ ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆ ಜಾರಿ ಮಾಡಿದ್ದೇವೆ. ಕಳೆದ ತಿಂಗಳು ಮತ್ತೆ ಒಂದು ಹೆಜ್ಜೆ ಮುಂದಿಡಲಾಗಿದೆ ಎಂದರು. ಕೆಲವು ಅರ್ಜಿ ನೀಡಿದ ಕೇವಲ ಮೂರು ಗಂಟೆಗಳಲ್ಲಿ, ಕೆಲವು ಎಂಟನೇ ದಿನ, ಇನ್ನೂ ಕೆಲವು 16ನೇ ದಿನ ಕಾನೂನು ಪ್ರಕಾರವಾಗಿ ಖಾತೆ ಬದಲಾವಣೆ ಆಗುತ್ತವೆ. ಈ ಬಗ್ಗೆ ತಕರಾರು ದಾಖಲಾದರೆ ಮಾತ್ರ ಖಾತೆ ಬದಲಾವಣೆ ವಿಳಂಬವಾಗುತ್ತದೆ. ಇನ್ನುಳಿದಂತೆ ಯಾರನ್ನೂ ಭೇಟಿ ಮಾಡದೆ, ಮಧ್ಯವರ್ತಿಗಳ ಹಾವಳಿ ಇಲ್ಲದೆಯೇ ಸೇವೆಯನ್ನು ಪಡೆಯಬಹುದಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಆರ್‌ಐ ತಮ್ಮ ಕಡೆಯವರಿಂದ ತಕರಾರು ಹಾಕುತ್ತಿದ್ದಾರೆ ಎಂಬ ಬಗ್ಗೆಯೂ ಆರೋಪ ಇತ್ತು. ಹೀಗಾಗಿ ತಕರಾರು ಹಾಕುವವರಿಗೆ ಆಧಾರ್ ಇ-ಕೆವೈಸಿಯನ್ನು ಕಡ್ಡಾಯ ಮಾಡಲಾಗಿದೆ ಎಂದು ತಿಳಿಸಿದರು.

ಬಾಕಿ ಇದ್ದ ಪ್ರಕರಣಗಳು ವಿಲೇವಾರಿ

ತಹಶೀಲ್ದಾರ್ ನ್ಯಾಯಾಲಯದಲ್ಲಿ ನಾವು ಬರುವ ಮೊದಲು ಅವಧಿ ಮೀರಿರುವ 10,774 ತಕರಾರು ಪ್ರಕರಣಗಳು ಬಾಕಿಯಿದ್ದವು. ಇದೀಗ ಪ್ರಸ್ತುತ 137 ಪ್ರಕರಣಗಳು ಮಾತ್ರ ಬಾಕಿ ಉಳಿದಿವೆ. ಎಸಿ ನ್ಯಾಯಾಲಯಗಳಲ್ಲಿ 73,634 ಪ್ರಕರಣಗಳು ಬಾಕಿ ಉಳಿದಿದ್ದ ಈ ಪೈಕಿ ಪ್ರಸ್ತುತ 10,255 ಪ್ರಕರಣಗಳು ಬಾಕಿ ಇವೆ. ಐದು ವರ್ಷಕ್ಕೂ ಮೀರಿದ 32,787 ಪ್ರಕರಣಗಳ ಪೈಕಿ 2894 ಪ್ರಕರಣಗಳು ಮಾತ್ರ ಬಾಕಿ ಇವೆ. ಪ್ರಕರಣ ವಿಲೇವಾರಿಗೆ ಬೆಂಗಳೂರಿಗೆ ಮಾತ್ರ 8 ಜನ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ರಾಜ್ಯಾದ್ಯಂತ 27 ವಿಶೇಷ ಎಸಿಗಳನ್ನು ನೇಮಕ ಮಾಡಲಾಗಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

250 ಹಾಸ್ಟೆಲ್ ನೀಡುವಂತೆ ಮುಖ್ಯಮಂತ್ರಿಗೆ ಮನವಿ

• **ವಿಧಾನಸಭೆ:** ಜಿಲ್ಲಾ ಕೇಂದ್ರಗಳಿಂದ ಹೆಚ್ಚಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಬೇಡಿಕೆ ಬರುತ್ತಿರುವುದರಿಂದ 250 ಹಾಸ್ಟೆಲ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ ಎಂದು ಸಚಿವ ಶಿವರಾಜ ಎಸ್.ತಂಗಡಗಿ ಹೇಳಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ದೊಡ್ಡನಗೌಡ ಹನುಮಗೌಡ ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ರಾಜ್ಯದಲ್ಲಿ 1.41 ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಒದಗಿಲು ಸಾಧ್ಯವಾಗಿಲ್ಲ, ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು 150 ಹಾಸ್ಟೆಲ್ ಕೊಟ್ಟಿದೆ. ಈಗಾಗಲೇ ಮುಖ್ಯಮಂತ್ರಿಗಳು 50 ಹಾಸ್ಟೆಲ್ ನೀಡಿದ್ದಾರೆ. ಬೇಡಿಕೆ ಹೆಚ್ಚಿರುವುದರಿಂದ ಇನ್ನೂ 250 ಹಾಸ್ಟೆಲ್ ನೀಡುವಂತೆ ಮನವಿ ಮಾಡುವುದಾಗಿ ತಿಳಿಸಿದರು. ಕೊಪ್ಪಳ ಜಿಲ್ಲೆಯಲ್ಲಿ 42 ಮೆಟ್ರಿಕ್ ಪೂರ್ವ ಮತ್ತು 48 ಮೆಟ್ರಿಕ್ ನಂತರ ಸೇರಿ ಒಟ್ಟು 90 ಹಾಸ್ಟೆಲ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು. ಈ ವೇಳೆ ಮಧ್ಯ ಪ್ರವೇಶಿಸಿದ ವಿಧಾನಸಭಾಧ್ಯಕ್ಷ ಯು. ಟಿ. ಖಾದರ್ ಉಳ್ಳಾಲ ಕ್ಷೇತ್ರದಲ್ಲಿನ ದೀನ ದಯಾಳ್ ಉಪಾಧ್ಯಾಯ ಹಾಸ್ಟೆಲ್‌ಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವಂತೆ ಸಚಿವರಿಗೆ ತಿಳಿಸಿದರು. ಬಿಜೆಪಿ ಶಾಸಕ ಉಮಾನಾಥ ಕೋಟ್ಯಾನ್, ಮೂಡಬಿದಿರೆ ಮತ್ತು ಮುಲ್ಕಿಗೆ ಹಾಸ್ಟೆಲ್ ಮಂಜೂರು ಮಾಡುವಂತೆ ಮನವಿ ಮಾಡಿದರು.

ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಒತ್ತಾಯ

ಮೀನುಗಾರರ ಪ್ರೋತ್ಸಾಹಧನ ಹೆಚ್ಚಿಸಲಿ

• **ವಿಧಾನ ಪರಿಷತ್:** ಮೀನುಗಾರರಿಗೆ ಮತ್ಸ್ಯಾಶ್ರಯ ಯೋಜನೆಯಡಿ ನೀಡಲಾಗುವ ಧನ ಸಹಾಯವನ್ನು ಕನಿಷ್ಠ 5 ಲಕ್ಷ ರೂ. ಗೆ ಹೆಚ್ಚಿಸಬೇಕು. ಗ್ರಾಮೀಣ ಭಾಗದಲ್ಲಿ ಮನೆ ನಿರ್ಮಾಣಕ್ಕೆ ಗ್ರಾ.ಪಂ. ಯಿಂದಲೇ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ನೀಡುವ ವ್ಯವಸ್ಥೆಯನ್ನು ಮರು ಜಾರಿಗೆ ತರಬೇಕು ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಆಗ್ರಹಿಸಿದರು.

ಮೇಲ್ಮನೆಯಲ್ಲಿ ಪ್ರಶ್ನೋತ್ತರ ವೇಳೆ ಪ್ರಸ್ತಾಪಿಸಿದ ಅವರು, 2022 ರಿಂದ ರಾಜ್ಯದಲ್ಲಿ ಈ ವರೆಗೆ ಒಂದೇ ಒಂದು ಮನೆ ಮಂಜೂರಾಗಿಲ್ಲ, ಮತ್ಸ್ಯಾಶ್ರಯ ಯೋಜನೆಯಡಿ ಗ್ರಾಮೀಣ ಭಾಗದ ಫಲಾನುಭವಿಗಳಿಗೆ 1.20 ಲಕ್ಷ ರೂ., ಪರಿಶಿಷ್ಟ ಜಾತಿ, ಪಂಗಡದವರಿಗೆ 1.75 ಲಕ್ಷ ರೂ. ನೀಡಲಾಗುತ್ತದೆ. ಇತ್ತೀಚೆಗೆ ಎಲ್ಲ ವಸ್ತುಗಳು ದುಬಾರಿಯಾಗಿದ್ದರಿಂದ ಸರ್ಕಾರದ ಅತ್ಯಲ್ಪದ ಸಹಾಯಧನದಲ್ಲಿ ಮನೆ ನಿರ್ಮಾಣ ಸಾಧ್ಯವಾಗದೇ ಪರದಾಡುವಂತಾಗಿದೆ. ಅದರಂತೆ ಈ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಮನೆ ನಿರ್ಮಾಣಕ್ಕೆ ಸ್ಥಳೀಯ ಪಂಚಾಯತ್‌ನಿಂದ ಅನುಮತಿ ನೀಡಲಾಗುತ್ತಿತ್ತು. ಅದನ್ನು ನಗರಾಭಿವೃದ್ಧಿ ಕೋಶಕ್ಕೆ ವರ್ಗಾಯಿಸಿದ್ದರಿಂದ ಜನರು ಪರದಾಡುವಂತಾಗಿದೆ ಎಂದು ದೂರಿದರು. ಅದಕ್ಕೆ ಉತ್ತರಿಸಿದ ಮೀನುಗಾರಿಕೆ ಇಲಾಖೆ ಸಚಿವ ಮಂಕಾಳ ವೈದ್ಯ, ಈಗಿನ ನಿಮಯಗಳಲ್ಲಿ ಸಹಾಯಧನ ಹೆಚ್ಚಿಸಲು ಸಾಧ್ಯವಿಲ್ಲ, ಇಲಾಖೆಯಿಂದ ನೀಡಲಾಗುವ ಸಹಾಯಧನದ ಜೊತೆಗೆ ನರೇಗಾದಿಂದ ನೀಡಲಾಗುವ 30 ಸಾವಿರ ರೂ. ಸೇರಿದರೆ 1.50 ಲಕ್ಷ ರೂ. ಹಾಗೂ ಪರಿಶಿಷ್ಟ ಫಲಾನುಭವಿಗಳಿಗೆ 2 ಲಕ್ಷ ರೂ. ಗಳಾಗುತ್ತವೆ. ಮುಂದಿನ ದಿನಗಳಲ್ಲಿ ಸಹಾಯಧನವನ್ನು 3 ಲಕ್ಷ ರೂ. ಗೆ ಹೆಚ್ಚಿಸಲು ಪ್ರಯತ್ನಿಸಲಾಗುವುದ ಎಂದು ಭರವಸೆ ನೀಡಿದರು.



ಸಹಕಾರ ಸಂಘಗಳ ನೇಮಕಾತಿ ಪಾರದರ್ಶಕವಾಗಲಿ

ಇದೇ ವೇಳೆ ಸಹಕಾರ ಸಂಘಗಳ ನೇಮಕಾತಿಯನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಶಾಸಕ ಎ. ವಸಂತ ಕುಮಾರ್, ಸಹಕಾರ ಸಂಘಗಳ ನೇಮಕಾತಿಯಲ್ಲಿ ರಾಜಕೀಯ ಹಸ್ತಕ್ಷೇಪ ತಡೆಯಬೇಕು. ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿರುವ ಮೂಲಕ ಠೇವಣಿದಾರರ ವಿಶ್ವಾಸವನ್ನು ಗಟ್ಟಿಗೊಳಿಸಬೇಕು. ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಸಿಗುವಂತೆ ಮಾಡಬೇಕು ಎಂದು ಸರ್ಕಾರದ ಗಮನ ಸೆಳೆದರು.

ಶಾಸಕರ ಭವನ ಸುತ್ತಲಿನ ಹೋಟೆಲ್‌ಗಳಲ್ಲಿ ಊಟ-ತಿಂಡಿ ಸಿಗುತ್ತಿಲ್ಲ

ಮೇಲ್ಮನೆಯಲ್ಲೂ ಪ್ರತಿಧ್ವನಿಸಿದ ಅನಿಲ ಕೊರತೆ

• **ವಿಧಾನ ಪರಿಷತ್:** ದೇಶದ ವಿವಿಧೆಡೆ ಉಂಟಾಗಿರುವ ಅಡುಗೆ ಅನಿಲ ಕೊರತೆ ಮೇಲ್ಮನೆಯಲ್ಲೂ ಪ್ರತಿಧ್ವನಿಸಿ ಹಲವಾರು ದಿನಗಳಿಂದ ಸರಿಯಾಗಿ ಊಟ, ತಿಂಡಿ ಸರಿಯಾಗಿ ಸಿಗುತ್ತಿಲ್ಲ ಎಂಬ ಸದಸ್ಯರ ಆಹಾರ ವಿಷಯವು ಕುತೂಹಲ ಮೂಡಿಸಿದೆ.

ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಬಸವರಾಜ್ ಹೊರಟ್ಟಿ ಪ್ರಶ್ನೋತ್ತರ ಕಲಾಪವನ್ನು ಪ್ರಾರಂಭಿಸಲು ಮುಂದಾದರು. ಈ ವೇಳೆ ಕಾಂಗ್ರೆಸ್ ಸದಸ್ಯ ಐವನ್ ಡಿಸೋಜಾ ಈ ವಿಷಯ ಪ್ರಸ್ತಾಪಿಸಿ, ಶಾಸಕರಿಗೆ ಶಾಸಕರ ಭವನ ಮತ್ತು ಸುತ್ತಲಿನ ಹೋಟೆಲ್‌ಗಳಲ್ಲಿ ಇಂದು ಇಡ್ಲಿ-ವಡೆ-ದೋಸೆ ಸೇರಿ ಯಾವುದೇ ಸರಿಯಾದ ಊಟ-ತಿಂಡಿ ಸಿಗುತ್ತಿಲ್ಲ, ಒಂದು ವಾರದಿಂದ ನಾವೆಲ್ಲಾ ಪರದಾಡುವಂತಾಗಿದೆ. ಕೊನೆಗೆ ಇಂದಿರಾ ಕ್ಯಾಂಟೀನ್‌ನಲ್ಲಿ ತಿನ್ನೋಣವೆಂದರೆ ಅಲ್ಲಿಯೂ ಗ್ಯಾಸ್ ಸಮಸ್ಯೆಯಿಂದ ಊಟ-ತಿಂಡಿ ಸಿಗುತ್ತಿಲ್ಲ, ಶಾಸಕರ ಪರಿಸ್ಥಿತಿ ಹೀಗಾದರೆ ಜನರ ಪರಿಸ್ಥಿತಿ ಹೇಗೆ ಸ್ವಾಮಿ. ಶೇ. 50 ರಷ್ಟು ಹೋಟೆಲ್‌ಗಳು ಬಂದ್ ಆಗಿವೆ. ದಯಮಾಡಿ ಸಮಸ್ಯೆಯನ್ನು ಪರಿಹರಿಸಿ ಎಂದು ಮನವಿ ಮಾಡಿದರು. ಈ ವೇಳೆ ಸಭಾಪತಿ ಬಸವರಾಜ್ ಹೊರಟ್ಟಿ ಅವರು, ಅದಕ್ಕೆಲ್ಲ ಸರ್ಕಾರವೇ ಉತ್ತರ ಕೊಡಬೇಕು. 10 ನಿಮಿಷ ಅನುಮತಿ ಕೊಡುತ್ತೇನೆ ತಿಂಡಿ ತಿಂದು ಬಾ ಎಂದು ಡಿಸೋಜಾಗೆ ಹೇಳಿದರು. ಆಗ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಡಿಸೋಜಾ ಅವರು ಹಸಿದು ಬಂದಿದ್ದಾರೆ. ದಯವಿಟ್ಟು ಇಡ್ಲಿ-ವಡಾ ತರಿಸಿಕೊಡಿ ಎಂದು ಹಾಸ್ಯ ಚಟಾಕಿ ಹಾರಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಡಿಸೋಜಾ, ಗ್ಯಾಸ್ ಸಮಸ್ಯೆ ಇದೆ. ಕಟ್ಟಿಗೆಯೇ ಇಲ್ಲ, ಇನ್ನೂ ಇಡ್ಲಿ-ವಡೆ ಎಲ್ಲಿಂದ ತರುವುದು ಎಂದರು.

ಮಾತು ಮುಂದುವರಿಸಿದ ಐವಾನ್ ಡಿಸೋಜಾ, ಎಷ್ಟು ದಿನದೊಳಗೆ ಗ್ಯಾಸ್ ಸಿಗುತ್ತದೆ. 60 ರೂ. ಊಟ 100 ರೂ. ದರ ಹೆಚ್ಚಳ ಮಾಡಿದ್ದಾರೆ. ಜತೆಗೆ ಗ್ಯಾಸ್ ದರವೂ ಹಾಕುತ್ತಿದ್ದಾರೆ. ಆ ಮಟ್ಟಕ್ಕೆ ಇಂದು ಬಂದಿಳಿದಿದೆ ಎಂದರು. ಈ ವೇಳೆ ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು, ಇದು ಕೇಂದ್ರದ ಗ್ಯಾಸ್ ಟ್ರಬಲ್ ಕತೆ ಎಂದು ಪರೋಕ್ಷವಾಗಿ ಪ್ರತಿಪಕ್ಷದ ಸದಸ್ಯರನ್ನು ಕಿಚಾಯಿಸಿದರು.



ವಿಕಪಗಳ ನಡುವೆ ವಾಕಮರ

ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದಾಗಿ ಜಗತ್ತಿನಾದ್ಯಂತ ಅಡುಗೆ ಅನಿಲದ ಕೊರತೆ ಉಂಟಾಗಿದ್ದು, ಇದರ ಎಫೆಕ್ಟ್ ಭಾರತದ ಮೇಲೂ ಬಿದ್ದಿದೆ. ಅದರಲ್ಲೂ ಅಡಿಗೆ ಅನಿಲದ ಬೆಲೆ ಏರಿಕೆಯಿಂದಾಗಿ ಅಡುಗೆ ಅನಿಲದ ಮೇಲೆ ಹೆಚ್ಚು ಅವಲಂಬಿತವಾಗಿರುವ ಮನೆಗಳು ಹಾಗೂ ಹೋಟೆಲ್ ಗಳಿಗೂ ಭಾರಿ ಹೊಡೆತ ಬಿದ್ದಿದ್ದು, ಇದು ವಿಧಾನಪರಿಷತ್‌ನಲ್ಲೂ ದೊಡ್ಡಮಟ್ಟದ ಚರ್ಚೆಯೇ ಉಂಟಾಗಿದ್ದು, ಆಡಳಿತ ಹಾಗೂ ವಿಕ್ಷಪದ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಕಿರುಸುದ್ದಿ

ಬೋರ್ಡ್ ಹಿಡಿದು ರಸ್ತೆ ಬದಿ ನಿಲ್ಲುವ ಶಿಕ್ಷೆ !

ಚಿಕ್ಕಮಗಳೂರು/ಕಡೂರು: ಸಂಚಾರಿ ನಿಯಮಗಳನ್ನು ಪದೇ ಪದೇ ಉಲ್ಲಂಘಿಸಿದ ಆರೋಪಿಗೆ ಕಡೂರು ಜೆಎಂಎಫ್‌ಸಿ ನ್ಯಾಯಾಲಯವು ಬೆಳಗಿನಿಂದ ಸಂಜೆವರೆಗೆ ಟ್ರಾಫಿಕ್ ರೂಲ್ ಇರುವ ಬೋರ್ಡ್ ಹಿಡಿದು ರಸ್ತೆ ಬದಿ ನಿಲ್ಲುವ ಶಿಕ್ಷೆ ವಿಧಿಸಿದೆ.

ಕಡೂರು ತಾಲೂಕಿನ ಬಿಸಿಲೇಹಳ್ಳಿ ಗ್ರಾಮದ ರಂಜಿತ್ ಕುಮಾರ್ ಎಂಬಾತ ಶಿಕ್ಷೆಗೆ ಗುರಿಯಾದ ವ್ಯಕ್ತಿಯಾಗಿದ್ದಾನೆ.

ಮಂಗಳವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ಆತ ಕಡೂರು ಪಟ್ಟಣದ ಮರವಂಜಿ ಸರ್ಕಲ್ ಮತ್ತು ಮಲ್ಲೇಶ್ವರ ಸರ್ಕಲ್‌ನಲ್ಲಿ ಟ್ರಾಫಿಕ್ ರೂಲ್ ಇರುವ ಬೋರ್ಡ್ ಹಿಡಿದು ನಿಂತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಮುದಾಯ ಸೇವೆ ಮಾಡುವ ಮೂಲಕ ನ್ಯಾಯಾಲಯ ಆದೇಶ ಪಾಲಿಸಿದ್ದಾನೆ.

ಆರೋಪಿ ಸಮುದಾಯ ಸೇವೆ ಮಾಡಿದ್ದಾನೋ ಇಲ್ಲವೋ ಎನ್ನುವುದನ್ನು ಖಾತರಿ ಪಡಿಸಿಕೊಂಡು ವರದಿ ನೀಡಬೇಕೆಂದು ನ್ಯಾಯಾಲಯ ಆದೇಶದಲ್ಲಿ ತಿಳಿಸಿದ್ದ ಹಿನ್ನೆಲೆಯಲ್ಲಿ ಇಬ್ಬರು ಪೊಲೀಸರನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು.

ನ್ಯಾಯಾಲಯ ಈ ವಿಶಿಷ್ಟ ರೀತಿಯ ತೀರ್ಪು ಸಾರ್ವಜನಿಕರ ಗಮನ ಸೆಳೆದದ್ದಲ್ಲದೆ, ಪದೇ ಪದೇ ತಪ್ಪು ಮಾಡುವವರಿಗೆ ಇದೊಂದು ಪಾಠವಾಗಿದೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾದವು.



ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವಲ್ಲಿ ಗ್ರಾಪಂ ವಿಫಲ : ಆರೋಪ

ಬಾಳೆಹೊನ್ನೂರು: ಕಳೆದ ಒಂದು ವರ್ಷದಿಂದ ಆಡುವಳ್ಳಿ ಗ್ರಾಪಂ ವ್ಯಾಪ್ತಿಯ ಅಂಡವಾನೆಗದ್ದೆ, ಜೇರುಳ್ಳಿ, ಹೊಟ್ಟಿನಕೂಡಿಗೆ ಹಾಗೂ ರಟ್ಟೆಹಳ್ಳಿ ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುವಲ್ಲಿ ಗ್ರಾಪಂ ವಿಫಲವಾಗಿದೆ ಎಂದು ಪೂರ್ಣೇಶ್ ಅವರು ಆರೋಪಿಸಿದ್ದಾರೆ.

ಕಳೆದ ಮಾರ್ಚ್‌ನಲ್ಲಿ ಪತ್ರಕರ್ತರು ಈ ಗ್ರಾಮಕ್ಕೆ ಭೇಟಿ ನೀಡಿ ವರದಿ ಮಾಡಿದ ಹಿನ್ನಲೆಯಲ್ಲಿ ತಾಪಂ ಇಓ ಕುಗ್ರಾಮಕ್ಕೆ ಭೇಟಿ ಮಾಡಿ ಪರಿಶಿಷ್ಟ ಕಾಲೋನಿಯ ಮುಖಂಡರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದರು.

ಜಲಜೀವನ್ ಮಿಷನ್ ಅಭಿಯಂತರರು ಸ್ಥಳಕ್ಕೆ ಭೇಟಿ ನೀಡಿ ಹೊಸದಾಗಿ ಎರಡು ಕೊಳವೆ ಬಾವಿಯನ್ನು ಕೊರೆಸಿದ್ದು, ಒಂದು ಹನಿ ನೀರು ಬಂದಿರುವುದಿಲ್ಲ. ಹಳ್ಳದ ನೈಸರ್ಗಿಕ ನೀರನ್ನು ಶುದ್ಧಿಕರಿಸಿ ಕೊಡುವುದಾಗಿ ತಿಳಿಸಿದ್ದು,ಇದುವರೆಗೂ ಕ್ರಮಕೈಗೊಂಡಿಲ್ಲವೆಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆದುಕೊಳ್ಳಿ

ಚಿಕ್ಕಮಗಳೂರು: ವಿವಿಧ ಯೋಜನೆಗಳಡಿ ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆದುಕೊಳ್ಳುವಂತೆ ಅಸಂಘಟಿತ ಕಾರ್ಮಿಕರಿಗೆ ಕಾರ್ಮಿಕ ಇಲಾಖೆ ಸೂಚನೆ ನೀಡಿದೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಯೋಜನೆಯಾದ ಡಾ.ಬಿ.ಆರ್. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಹಾಗೂ ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ವಾಹನ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿಯ ಯೋಜನೆಯಡಿ ಅಸಂಘಟಿತ ಕಾರ್ಮಿಕರ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗುವುದು.

ಕಾರ್ಮಿಕ ಅಧಿಕಾರಿಗಳ ಕಚೇರಿ, ಚಿಕ್ಕಮಗಳೂರು ಉಪವಿಭಾಗ, ಇಲ್ಲಿ ಹಾಗೂ ತಾಲ್ಲೂಕಿನಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರುಗಳು ಆಯಾ ತಾಲ್ಲೂಕಿನ ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಯಲ್ಲಿ ಸ್ಮಾರ್ಟ್ ಕಾರ್ಡ್‌ಗಳನ್ನು ಮಾರ್ಚ್ 27 ರೊಳಗೆ ಪಡೆದುಕೊಳ್ಳುವಂತೆ ತಿಳಿಸಲಾಗಿದ್ದು. ಕಾರ್ಮಿಕ ಅಧಿಕಾರಿಗಳಾದ ಬಿ.ಸಿ.ಸುರೇಶ್ (9448617652), ಶಶಿಕಲಾ ಡಿ.ಡಿ. (636130498), ಹಂಸ ಎಂ.ಜಿ.(7406207422), ಹಿರಿಯ ಕಾರ್ಮಿಕ ನಿರೀಕ್ಷಕರ ಕಚೇರಿಯ ಚಿಕ್ಕಮಗಳೂರು 1ನೇ ವೃತ್ತ ಮತ್ತು ಕಡೂರು ವೃತ್ತದ ಪ್ರವೀಣ್ ಕುಮಾರ್ (8792638806), ಚಿಕ್ಕಮಗಳೂರು 2ನೇ ವೃತ್ತ ಹಾಗೂ ತರೀಕೆರೆ ವೃತ್ತದ ಪ್ರಭಾಕರ್ ಹೆಚ್.ಕೆ.(9880663240) ಹಾಗೂ ಕೊಪ್ಪ ವೃತ್ತ ಹಾಗೂ ಮೂಡಿಗೆರೆ ವೃತ್ತದ ಜೀವನ್‌ಕುಮಾರ್ (8073675894) ಅವರನ್ನು ಸಂಪರ್ಕಿಸಬಹುದು.



ಹೋಟೆಲ್ ಹಾಗೂ ಮೆಸ್‌ಗಳು ಬಂದ್

ಶೃಂಗೇರಿ: ಪಟ್ಟಣದ ಕೆಲ ಹೋಟೆಲ್ ಹಾಗೂ ಮೆಸ್‌ಗಳು ಗ್ಯಾಸ್ ದೊರಕದೆ ಬಂದ್ ಆಗಿದ್ದು, ಇನ್ನೂ ಕೆಲ ಹೋಟೆಲ್ ಶೀಘ್ರದಲ್ಲಿ ಬಂದ್ ಆಗುವ ಸಾಧ್ಯತೆ ಇದೆ. ಶ್ರೀ ಶಾರದಾ ಪೀಠದಲ್ಲಿ ಪ್ರತಿ ದಿನವೂ ಸಾವಿರಾರು ಭಕ್ತರಿಗೆ ಮಧ್ಯಾಹ್ನ ಮತ್ತು ರಾತ್ರಿ ಭೋಜನ ನೀಡುತ್ತಿದ್ದು ಇದರೊಂದಿಗೆ ವಿವಿಧ ಶಾಲೆಗಳಿಗೆ ಮಧ್ಯಾಹ್ನದ ಬಿಸಿಯೂಟ ಪೂರೈಸುತ್ತಿದೆ.

ಶ್ರೀಮಠದಲ್ಲಿ ಗ್ಯಾಸ್‌ನೊಂದಿಗೆ, ಸೌದೆ, ಮರದ ಹೊಟ್ಟು, ಡೀಸೆಲ್ ಬಳಸಲಾಗುತ್ತಿದೆ. ಇದರಿಂದ ಅನ್ನ ದಾಸೋಹಕ್ಕೆ ಇದುವರೆಗೂ ತೊಂದರೆಯಾಗಿಲ್ಲ.

ಗೃಹ ಬಳಕೆ ಗ್ಯಾಸ್‌ಗೂ ಬುಕ್ಕಿಂಗ್ ಆಗದೆ ಬಳಕೆದಾರರು ತೊಂದರೆಗೆ ಒಳಗಾಗಿದ್ದಾರೆ.



ಉಡುಪಿ ಚಿಕ್ಕಮಗಳೂರುಲೋಕಸಭಾ ಸದಸ್ಯರಾದ ಕೋಟ ಶ್ರೀನಿವಾಸ್ ಪೂಜಾರಿರವರ ಲೋಕಸಭಾ ನಿಧಿಯ ಅನುದಾನದಲ್ಲಿ ಅಜ್ಜಂಪುರ ತಾಲ್ಲೂಕು ಸಿರಿಗನಹಳ್ಳಿ ಗ್ರಾಮದಲ್ಲಿ 10 ಲಕ್ಷ ರೂಪಾಯಿಯ ಡಾಂಬರು ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಮಾಜಿ ಶಾಸಕರುಗಳಾದ ಡಿ.ಎಸ್.ಸುರೇಶ್ ಹಾಗೂ ಎಸ್.ಎಂ.ನಾಗರಾಜ್ ಗುದ್ದಲಿ ಪೂಜೆಯನ್ನು ನೆರವೇರಿಸಿದರು. ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಕೃಷ್ಣಮೂರ್ತಿ ಶಂಭೈನೂರ್ ಅನಂದಪ್ಪ ಹಾಗೂ ಗ್ರಾಮಸ್ಥರು ಇದ್ದರು.

ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಸೂಚನೆ

ಬೋರ್ ಬಾಡಿಗೆಗೆ ಪಡೆಯಿರಿ

ಚಿಕ್ಕಮಗಳೂರು: ಬೇಸಿಗೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಜಿಲ್ಲೆಗೆ ಸಂಬಂಧಿಸಿದಂತೆ ಕುಡಿಯುವ ನೀರು ಹಾಗೂ ಕಂದಾಯ ವಿಷಯಗಳ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತೀ ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿನ ನೀರಿನ ಘಟಕಗಳಲ್ಲಿ ನಿಯಮಿತವಾಗಿ ಗುಣಮಟ್ಟ ಪರೀಕ್ಷೆ ನಡೆಸಬೇಕು. ನೀರಿನ ಸಮಸ್ಯೆ ಕಂಡು ಬರುವ ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಬೇಕು. ಖಾಸಗಿ ಬೋರ್‌ವೆಲ್‌ಗಳು ದೊರೆಯದಿದ್ದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಕ್ರಮ ವಹಿಸಬೇಕು ಎಂದ ಅವರು, ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ತಿಳಿಸಿದರು.

ಮಳೆಗಾಲದ ಸಂದರ್ಭದಲ್ಲಿ ಯಾವುದೇ ಅನಾಹುತಗಳಿಗೆ ಆಸ್ಪದವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಇದಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಅಗತ್ಯ ಪೂರ್ವ ತಯಾರಿ ಮಾಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಬಾಕಿ ಉಳಿದಿರುವ ಪೋಡಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸಬೇಕು. ಭೂ ಸುರಕ್ಷಾ ಯೋಜನೆಯಡಿ ಭೂ ದಾಖಲೆಗಳ ಡಿಜಿಟಲೀಕರಣವನ್ನು ಪೂರ್ಣಗೊಳಿಸಬೇಕು ಎಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿಗಳು, ಎಲ್ಲಾ ತಾಲೂಕುಗಳ ತಹಶೀಲ್ದಾರರು, ಭೂ ದಾಖಲೆಗಳ ಉಪನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು ಹಾಜರಿದ್ದರು.



> ಜಿಲ್ಲೆಯಲ್ಲಿ ಹೊಸದಾಗಿ ಕಂದಾಯ ಗ್ರಾಮಗಳಿಗೆ ಸಂಬಂಧಿಸಿದಂತೆ ಮೊದಲ ಹಾಗೂ ಎರಡನೆಯ ಹಂತದಲ್ಲಿ 117 ಗ್ರಾಮಗಳನ್ನು, ಮೂರನೆಯ ಹಂತದಲ್ಲಿ 257 ಗ್ರಾಮಗಳು ಸೇರಿದಂತೆ ಒಟ್ಟು 374 ಗ್ರಾಮಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 213 ಗ್ರಾಮಗಳಿಗೆ ಪ್ರಾಥಮಿಕ ಅಧಿಸೂಚನೆಯಾಗಿದ್ದು, 89 ಪ್ರಕರಣಗಳು ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, 38 ಅನ್ನು ಹಿಂದಿರುಗಿಸಿವೆ. 34 ಪ್ರಾಥಮಿಕ ಅಧಿಸೂಚನೆಗೆ ಬಾಕಿ ಉಳಿದಿದೆ.
>
> ■ ಎಸ್.ಎಂ. ನಾಗರಾಜ್, ಜಿಲ್ಲಾಧಿಕಾರಿ

ಕಾರ್ಮಿಕರ ನಿಧಿಯ ಬಳಕೆ ಪ್ರಸ್ತಾಪ ಕೈಬಿಡಿ: ಒತ್ತಾಯ

ಚಿಕ್ಕಮಗಳೂರು: ಸರ್ಕಾರದ ಯೋಜನೆಗಳಿಗೆ ಕಟ್ಟಡ ಕಾರ್ಮಿಕರ ನಿಧಿಯ ಬಳಕೆಯ ಪ್ರಸ್ತಾಪಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ಬುಧವಾರ ನಗರದ ಆಜಾದ್‌ಪಾರ್ಕ್ ವೃತ್ತದಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ವಸಂತ್ ಕುಮಾರ್ ಈ ಚಳಿಗಾಲದ ಅಧಿವೇಶನದ ಬಜೆಟ್‌ನಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ರೂ. 600 ಕೋಟಿ ರೂ. ವೆಚ್ಚದಲ್ಲಿ ಜಿಟಿಟಿಸಿ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿರುವುದನ್ನು ನಮ್ಮ ಸಂಘಟನೆ ತೀವ್ರವಾಗಿ ವಿರೋಧಿಸುತ್ತದೆ ಎಂದರು.

ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು ರಾಜ್ಯಸರ್ಕಾರದ ಕೆಲಸ ಜೊತೆಗೆ ಈ ತರಬೇತಿ ಕೇಂದ್ರಗಳಲ್ಲಿ ಕೇವಲ ಕಟ್ಟಡ ಕಾರ್ಮಿಕರ ಮಕ್ಕಳು ಮಾತ್ರವಲ್ಲದೇ ಎಲ್ಲರಿಗೂ ಪ್ರವೇಶಾವಕಾಶವಿದೆ. ಹೀಗಿರುವಾಗ ಕಲ್ಯಾಣ ಮಂಡಳಿ 600 ಕೋಟಿ ರೂ. ವೆಚ್ಚ ಮಾಡುವ ನಿರ್ಧಾರವು ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಬಗೆಯುವ ದ್ರೋಹವಾಗಿದೆ ಎಂದು ಹೇಳಿದರು.

ಶ್ರಮಿಕ ವಸತಿ ಶಾಲೆಗಳ ನಿರ್ಮಾಣ ಹಾಗೂ ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕೌಶಲ್ಯ ಅಭಿವೃದ್ಧಿ ಅಕಾಡೆಮಿಗಳನ್ನು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ನಿಧಿಯನ್ನು ಬಳಸಿ ನಿರ್ಮಾಣ ಮಾಡುವ ಬಜೆಟ್ ಪ್ರಸ್ತಾಪವು 1996ರ ಕಟ್ಟಡ ಕಾರ್ಮಿಕರ ಕಾಯ್ದೆಯ ಉದ್ದೇಶವನ್ನು ಬುಡಮೇಲು ಮಾಡುವುದಾಗಿದೆ ಎಂದರು.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಹಣವು ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವುದು. ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಶಿಕ್ಷಣದ ಅಗತ್ಯತೆಗಳಿಗಾಗಿ ಬಳಸಬೇಕು. ಇದನ್ನು ಕಟ್ಟಡ ಕಾರ್ಮಿಕರ ಕಲ್ಯಾಣ ಯೋಜನೆಗಳಿಗೆ ಹೊರತುಪಡಿಸಿ ಇತರೆ ಯಾವುದೇ ಉದ್ದೇಶಗಳಿಗೆ ಬಳಸಬಾರದೆಂದು ಕಾಯ್ದೆ ಹೇಳುತ್ತಿದ್ದು, ಸುಪ್ರೀಂ ಕೋರ್ಟ್ ಕೂಡಾ ಇದನ್ನು ಎತ್ತಿಹಿಡಿದಿದೆ ಎಂದು ತಿಳಿಸಿದರು.

ಸಂಘದ ಜಿಲ್ಲಾಧ್ಯಕ್ಷ ಜಿ.ರಘು ಮಾತನಾಡಿ, ರಾಜ್ಯ ಸರ್ಕಾರವು ಕೂಡಾ ಸಾವಿರಾರು ಕೋಟಿ ರೂ.ಗಳಲ್ಲಿ ಕಾರ್ಮಿಕರ ಅನುಪಯುಕ್ತ ಸ್ಕೀಮ್‌ಗಳಿಗೆ ವ್ಯಯ ಮಾಡಿರುವುದರಿಂದ ಈಗ ಮಂಡಳಿಯಲ್ಲಿ ಸದಸ್ಯತ್ವ ಹೊಂದಿರುವ ಕಟ್ಟಡ ಕಾರ್ಮಿಕರ ಮಕ್ಕಳು ಕನಿಷ್ಟ ಮಟ್ಟದ ಶೈಕ್ಷಣಿಕ ಧನಸಹಾಯವನ್ನು ಪಡೆಯಲು ಸೀಮಿತರಾಗಿದ್ದು ಧನಸಹಾಯ ಹೆಚ್ಚಿಸಲು ಕೇಳಿದರೆ, ಮಂಡಳಿ ಕಡಿಮೆಯಿದೆ ಎಂದು ಶೈಕ್ಷಣಿಕ ಧನಸಹಾಯ ಹೆಚ್ಚಿಸುತ್ತಿಲ್ಲ ಎಂದು ದೂರಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಜಯಕುಮಾರ್, ತಾಲೂಕು ಉಪಾಧ್ಯಕ್ಷರಾದ ಸಿ.ಸಿ. ಮಂಜೇಗೌಡ, ಕುಪ್ಪನ್, ಎಂ.ಎಸ್. ಜಾನಕಿ, ಸಮಿತಿ ಸದಸ್ಯರಾದ ಸಿ.ಮಂಜುನಾಥ್, ಎ. ಶ್ರೀಧರ್, ಸಲೀಂ, ಚಂದ್ರಚಾರ್, ಗೀತಾ, ಫಾತಿಮಾ ಮತ್ತಿತರರಿದ್ದರು.



ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಸುತ್ತಲೂ ಬೆಂಕಿ ರೇಖೆ ನಿರ್ಮಾಣ

ಚಿಕ್ಕಮಗಳೂರು: ಮುತ್ತೋಡಿ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಸುತ್ತಲೂ ಬೆಂಕಿ ರೇಖೆಯನ್ನು ನಿರ್ಮಾಣ ಮಾಡಿದ್ದು, ಬೆಂಕಿ ಹರಡದಂತೆ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಭದ್ರಾ ವನ್ಯ ಜೀವಿ ಅರಣ್ಯ ವಲಯದ ನಿರ್ದೇಶಕ ಪುಲಕಿತ್ ಮೀನಾ ತಿಳಿಸಿದ್ದಾರೆ.

ಅರಣ್ಯಕ್ಕೆ ಬೆಂಕಿ ಹಚ್ಚುವವರನ್ನು ಪತ್ತೆಹಚ್ಚಲು ದೈನಂದಿನ ಗಸ್ತು ಕಾರ್ಯವನ್ನು ಮತ್ತಷ್ಟು ಚುರುಕುಗೊಳಿಸಲಾಗಿದೆ. ಕೆಲವು ಜನರಲ್ಲಿ ಮೂಢ ನಂಬಿಕೆ ಇದ್ದು, ಸುತ್ತಮುತ್ತಲ ಗ್ರಾಮಗಳಿಗೆ ತೆರಳಿ, ಬೆಂಕಿ ಹಚ್ಚದಂತೆ ಜಾಗೃತಿ ಮೂಡಿಸಲಾಗಿರುತ್ತದೆ. ಅರಣ್ಯದೊಳಗೆ ಸಂಚರಿಸುವವರಿಂದಲೂ ಕಾಡಿಗೆ ಬೆಂಕಿ ಬೀಳದಂತೆ ಎಚ್ಚರಿಕೆ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಮತ್ತೋಡಿಗೆ ಹೊಂದಿಕೊಂಡಿರುವ ಶಿರವಾಸೆ ಸರ್ವೇ ನಂಬರ್ 198 ಮತ್ತು 226 ರ ಹಾಳು ಬಿದ್ದ ಹಿಡುವಳಿ ಜಮೀನಿನಲ್ಲಿ ಬೆಳೆದಿದ್ದ ಗಿಡಗಂಟಿ, ಹುಲ್ಲಿಗೆ ಉದ್ದೇಶಪೂರ್ವಕವಾಗಿ ಯಾರೋ ಬೆಂಕಿ ಇಟ್ಟಿದ್ದು, ಈ ಬೆಂಕಿ ಪರಿಭಾವಿತ ಅರಣ್ಯ ಪ್ರದೇಶದ ಕೆಲ ಭಾಗಕ್ಕೆ ಹಾನಿ ಉಂಟು ಮಾಡಿದೆ. ಕೂಡಲೇ ಪ್ರಾದೇಶಿಕ ವಿಭಾಗ ಮತ್ತು ವನ್ಯಜೀವಿ ವಿಭಾಗದ ಸಿಬ್ಬಂದಿ ಜೊತೆಗೂಡಿ ಬೆಂಕಿಯನ್ನು ಹತೋಟಿಗೆ ತಂದಿದ್ದಾರೆ ಎಂದು ತಿಳಿಸಿದ್ದಾರೆ.

ಕಾಡಿನ ಸಮೀಪ ಬೆಂಕಿ ಹಚ್ಚಿದವರ ಪತ್ತೆಗೆ ಶ್ವಾನದಳ, ಥರ್ಮಲ್ ಡ್ರೋನ್, ಬಾಹ್ಯಾಕಾಶ ಚಿತ್ರಗಳನ್ನು ಬಳಸಲಾಗುತ್ತಿದ್ದು, ತನಿಖೆ ಚುರುಕುಗೊಂಡಿದೆ. ತಪ್ಪಿತಸ್ಥರಿಗೆ ಕಾನೂನು ರೀತ್ಯ ಶಿಕ್ಷೆ ವಿಧಿಸಲು ಕ್ರಮ ವಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಮೇ.10ರಂದು 6ನೇ ಸಾಹಿತ್ಯ ಸಮ್ಮೇಳನ

ಚಿಕ್ಕಮಗಳೂರು: ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆರನೇ ಸಾಹಿತ್ಯ ಸಮ್ಮೇಳನವನ್ನು ಮೇ.10ರಂದು ಭಾನುವಾರ ನಗರದ ಜಯನಗರ ಅಥವಾ ದಂಟರಮಕ್ಕಿ ಬಡಾವಣೆಯಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸೂರಿ ಶ್ರೀನಿವಾಸ್ ತಿಳಿಸಿದರು.

ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಸಂಬಂಧ ಸಮ್ಮೇಳನದ ಪೂರ್ವಭಾವಿ ಸಭೆ ನಡೆಸಿ ದಿನಾಂಕವನ್ನು ನಿಗದಿಪಡಿಸಲಾಗಿದ್ದು, ಸಮ್ಮೇಳನಕ್ಕೆ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಭಾನುಮುಸ್ತಾಕ್‌ರವರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಈವರೆಗೆ 19 ಸಾಹಿತ್ಯ ಸಮ್ಮೇಳನಗಳಾಗಿದ್ದು, ಜಿಲ್ಲಾ ಕೇಂದ್ರವಾದ ನಗರದಲ್ಲಿ ಐದು ಸಾಹಿತ್ಯ ಸಮ್ಮೇಳನಗಳು ನಡೆದಿವೆ ಎಂದ ಅವರು, ಮುಖ್ಯ ಅತಿಥಿಗಳಾಗಿ ಜಯಂತ್ ಕಾಯ್ಕಿಣಿ, ಅಕಾಡೆಮಿ ಪ್ರಶಸ್ತಿ ಪುರಸ್ಕೃತ ದತ್ತಾತ್ರಿ, ಸಾಹಿತಿಗಳಾದ ಸತ್ಯನಾರಾಯಣ, ಬೆಳವಾಡಿ ಮಂಜುನಾಥ್ ಮತ್ತಿತರರನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಸಮ್ಮೇಳನಗಳಿಗೆ ರಾಜ್ಯಸರ್ಕಾರ ಅನುದಾನ ಬಿಡುಗಡೆ ಮಾಡಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದ ಅವರು, ಜಿಲ್ಲೆಯಲ್ಲಿ ಕನ್ನಡದ ಮನಸ್ಸುಗಳಿಗೆ ಕನ್ನಡ ಸೇವೆ ಮಾಡುವ ಸಂಕಲ್ಪ ಇಚ್ಛೆ ಇದ್ದು, ಇಂತಹ ದಾನಿಗಳಿಂದ ವಂತಿಗೆ ಸಂಗ್ರಹಿಸಿ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲಾಗುವುದೆಂದು ತಿಳಿಸಿದರು.

ಸಮ್ಮೇಳನ ನಡೆದ 15 ದಿನಗಳ ಒಳಗಾಗಿ ಲೆಕ್ಕಪತ್ರ ಮಂಡನೆ ಮಾಡಿ, ಸ್ವಾಗತ ಸಮಿತಿಯನ್ನು ವಿಸರ್ಜಿಸುತ್ತೇವೆ. ಉದಯೋನ್ಮುಖ ಬರಹಗಾರರನ್ನು ಪರಿಚಯಿಸುವ ಜೊತೆಗೆ ಪ್ರತಿಭೆಗಳ ಅನಾವರಣಕ್ಕಾಗಿ ಸಮ್ಮೇಳನಗಳನ್ನು ಆಚರಿಸಲಾಗುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ತಾಲ್ಲೂಕು ಅಧ್ಯಕ್ಷ ದಯಾನಂದ ಮಾವಿನಕೆರೆ, ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ವಿಜಯಲಕ್ಷ್ಮಿ, ನಗರ ಘಟಕದ ಅಧ್ಯಕ್ಷೆ ರೂಪಾ ನಾಯಕ್, ಪದಾಧಿಕಾರಿಗಳಾದ ಬಸವರಾಜ್, ಡಾ. ಸತೀಶ್, ಮಾಸ್ತೇಗೌಡ, ಡಿ. ರಘು ಉಪಸ್ಥಿತರಿದ್ದರು.

ಮೊದಲ ದಿನ ಕನ್ನಡ ಪರೀಕ್ಷೆಗೆ 241 ಮಂದಿ ಗೈರು

ಚಿಕ್ಕಮಗಳೂರು: ಜಿಲ್ಲೆಯಾದ್ಯಂತ ಬುಧವಾರ ಆರಂಭಗೊಂಡ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರವಾಗಿ ನಡೆದಿದ್ದು, ಮೊದಲ ದಿನ ಕನ್ನಡ ಪರೀಕ್ಷೆಗೆ 241 ಮಂದಿ ಗೈರು ಹಾಜರಾಗಿದ್ದಾರೆ.

8 ಬ್ಲಾಕ್‌ಗಳ 52 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, ಒಟ್ಟು 12542 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದರು. ಈ ಪೈಕಿ 241 ಮಂದಿ ಗೈರು ಹಾಜರಾಗಿದ್ದು, 12301 ಮಂದಿ ಪರೀಕ್ಷೆ ಬರೆದಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಬ್ಲಾಕ್ ವಾರು ವಿವರ: ಬೀರೂರು ಬ್ಲಾಕ್‌ನಲ್ಲಿ 1125 ವಿದ್ಯಾರ್ಥಿಗಳ ಪೈಕಿ 25 ಮಂದಿ ಪರೀಕ್ಷೆಗೆ ಗೈರು ಹಾಜರಾಗಿದ್ದಾರೆ.

ಚಿಕ್ಕಮಗಳೂರು ಬ್ಲಾಕ್‌ನಲ್ಲಿ 3475 ವಿದ್ಯಾರ್ಥಿಗಳ ಪೈಕಿ 47 ಮಂದಿ ಗೈರು ಹಾಜರಾಗಿದ್ದಾರೆ.

ಕಡೂರು ಬ್ಲಾಕ್‌ನಲ್ಲಿ 2369 ವಿದ್ಯಾರ್ಥಿಗಳ ಪೈಕಿ 70 ವಿದ್ಯಾರ್ಥಿಗಳು ಗೈರು ಹಾಜಾರಾಗಿದ್ದಾರೆ.

ಕೊಪ್ಪ ಬ್ಲಾಕ್‌ನಲ್ಲಿ 1006 ವಿದ್ಯಾರ್ಥಿಗಳ ಪೈಕಿ 11 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಮೂಡಿಗೆರೆಬ್ಲಾಕ್‌ನಲ್ಲಿ 1316 ವಿದ್ಯಾರ್ಥಿಗಳ ಪೈಕಿ 10 ಮಂದಿ ಗೈರು ಹಾಜರಾಗಿದ್ದಾರೆ.

ನ.ರಾ.ಪುರ ಬ್ಲಾಕ್‌ನಲ್ಲಿ 836 ವಿದ್ಯಾರ್ಥಿಗಳ ಪೈಕಿ 19 ಮಂದಿ ಗೈರು ಹಾಜರಾಗಿದ್ದಾರೆ.

ಶೃಂಗೇರಿ ಬ್ಲಾಕ್‌ನಲ್ಲಿ 589 ವಿದ್ಯಾರ್ಥಿಗಳ ಪೈಕಿ 10 ಮಂದಿ ಗೈರು ಹಾಜರಾಗಿದ್ದಾರೆ.

ತರೀಕೆರೆ ಬ್ಲಾಕ್‌ನ 1826 ವಿದ್ಯಾರ್ಥಿಗಳ ಪೈಕಿ 49 ಮಂದಿ ಗೈರು ಹಾಜರಾಗಿದ್ದಾರೆ.



ಆರೋಗ್ಯದ ಬಗ್ಗೆ ಮಹಿಳೆಯರು ಗಮನಹರಿಸಿ

ಶೃಂಗೇರಿ: ಆರೋಗ್ಯದ ಬಗ್ಗೆ ಮಹಿಳೆಯರು ಹೆಚ್ಚು ಗಮನಹರಿಸಬೇಕು. ಪೌಷ್ಟಿಕಯುಕ್ತ ಆಹಾರದೊಂದಿಗೆ ಪ್ರತಿದಿನವೂ ಬೆಳಗ್ಗೆ ಮತ್ತು ಸಂಜೆ ನಡಿಗೆ ಅಭ್ಯಾಸ ಮಾಡಿಕೊಳ್ಳಬೇಕು ಎಂದು ವೈದ್ಯೆ ಡಾ. ಅರ್ಚನಾ ಹೇಳಿದರು.

ರಾಜಾನಗರದ ವಿದ್ಯಾಭಾರತೀ ಸಭಾಭವನದಲ್ಲಿ ಬುಧವಾರ ಏರ್ಪಡಿಸಿದ್ದ ವಿಪ್ರ ಮಹಿಳಾ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಯುವತಿಯರು ಇತ್ತೀಚಿನ ದಿನಗಳಲ್ಲಿ ಆರೋಗ್ಯಕ್ಕೆ ಹಾನಿಕರವಾದ ಫಾಸ್ಟ್ ಫುಡ್, ಜಂಕ್ ಫುಡ್, ಕರಿದ ಪದಾರ್ಥಗಳಿಗೆ ಮೊರೆ ಹೋಗುತ್ತಿದ್ದಾರೆ. ಮನೆಯಲ್ಲಿ ತಯಾರಿಸುವ ಆಹಾರವನ್ನು ಹೆಚ್ಚು ಉಪಯೋಗಿಸಬೇಕು. ಮೊಬೈಲ್ ನಲ್ಲಿ ಹೆಚ್ಚು ವೀಕ್ಷಣೆ ಮಾಡುವುದು ರಾತ್ರಿ ತಡವಾಗಿ ಮಲಗುವುದು ನಮ್ಮ ಆರೋಗ್ಯಕ್ಕೆ ಹಾನಿಕರ, ನಮ್ಮ ದಿನಚರಿಯನ್ನು ಬದಲಿಸಿಕೊಂಡು ಆರೋಗ್ಯ ಪೂರ್ಣ ಜೀವನ ನಡೆಸಬೇಕು ಎಂದರು.

ಕೊಪ್ಪದ ಗಾಡಿಕೆರೆ ಗೌತಮಿ ಮಧುಕರ್ ಉಪನ್ಯಾಸ ನೀಡಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಇದ್ದರೂ ಈಗಲೂ ಸಾಕಷ್ಟು ಜನರು ತಮ್ಮ ದೈನಂದಿನ ವ್ಯವಹಾರಕ್ಕೆ ಪುರುಷರಿಗೆ ಅವಲಂಬನೆಯಾಗಿದ್ದಾರೆ. ಬ್ಯಾಂಕ್ ವ್ಯವಹಾರ, ಸಂಚಾರಕ್ಕಾಗಿ ಕನಿಷ್ಟ ದ್ವಿಚಕ್ರ ವಾಹನದ ಚಾಲನೆ ಮಾಡುವ ಸಾಮರ್ಥ್ಯ, ಹಣಕಾಸು ನಿರ್ವಹಣೆಯನ್ನು ಕಲಿತಿರಬೇಕು ಎಂದರು.

ಮಹಿಳಾ ಘಟಕದ ಅಧ್ಯಕ್ಷೆ ಸುಮಂಗಲ ಆನಂದಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶೈಲಜಾ ಶ್ರೀಧರಮೂರ್ತಿ, ನಾಗರತ್ನ ಈಶ್ವರ ಹೆಗ್ಡೆ, ಬಿ.ಎಲ್. ರವಿಕುಮಾರ್, ಎ.ಎಂ. ಶ್ರೀಧರರಾವ್, ನಾಗಮಣಿ ಮುರುಳಿಕೃಷ್ಣ, ಮಹಾಬಲ ಭಿಡೆ, ಕವನ ಶ್ಯಾಂಸುಂದರ್, ವಿದ್ಯಾ ಅನಂತ, ಸೌಮ್ಯ, ಕವಿತ ಇತರರು ಇದ್ದರು. ಇದೇ ಸಂದರ್ಭದಲ್ಲಿ ಮಹಿಳೆಯರಿಗೆ ವಿವಿಧ ಸ್ಪರ್ಧೆ ಏರ್ಪಡಿಸಲಾಗಿತ್ತು.



ಉದ್ಯಾನವನದ ನಿರ್ವಹಣೆಗೆ ಸಾರ್ವಜನಿಕ ಆಕ್ಷೇಪಣೆ ಆಹ್ವಾನ

ಚಿಕ್ಕಮಗಳೂರು: ನಗರಸಭೆ ವ್ಯಾಪ್ತಿಯ ವಾರ್ಡ್ ನಂ. 19ರ ತಮಿಳು ಕಾಲೋನಿ ಮಾರ್ಕೆಟ್ ರಸ್ತೆಯಲ್ಲಿರುವ ಶ್ರೀ ಕರುಮಾರಿಯಮ್ಮ ದೇವಸ್ಥಾನದ ಎದುರಿನ ಉದ್ಯಾನವನದ ನಿರ್ವಹಣೆಗೆ ಸಂಬಂಧಿಸಿದಂತೆ ನಗರಸಭೆ ಸಾರ್ವಜನಿಕ ಆಕ್ಷೇಪಣೆ ಆಹ್ವಾನಿಸಿದೆ.

ಆಕ್ಷೇಪಣೆ ಸಲ್ಲಿಸಲು ಒಂದು ತಿಂಗಳು ಕಾಲಾವಕಾಶ ನೀಡಲಾಗಿದ್ದು, ಖುದ್ದಾಗಿ ನಗರಸಭೆ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆಗಳಿಲ್ಲ ಎಂದು ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೌರಾಯುಕ್ತರು ತಿಳಿಸಿದ್ದಾರೆ.

ಶ್ರೀಕರುಮಾರಿಯಮ್ಮ ದೇವಸ್ಥಾನದ ಸಮಿತಿಯು 2023ರ ಜುಲೈ 6 ರಂದು ನಗರಸಭೆಗೆ ಮನವಿ ಸಲ್ಲಿಸಿ ದೇವಸ್ಥಾನದ ಎದುರಿನ ಖಾಲಿ ಜಾಗದಲ್ಲಿ ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ ಉದ್ಯಾನವನದ ನಿರ್ವಹಣೆಗೆ ಕ್ರಮಕೈಗೊಳ್ಳಬೇಕೆಂದು ಕೋರಿತ್ತು. ಈ ಸಂಬಂಧ ಮಾರ್ಚ್ 1 ರಂದು ನಡೆದ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಆಕ್ಷೇಪಣೆ ಕೋರಲು ತೀರ್ಮಾನಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಬೆಂಗಳೂರು ಚಲೋ ಬೃಹತ್ ಪ್ರತಿಭಟನಾ ಸಮಾವೇಶ

ಚಿಕ್ಕಮಗಳೂರು: ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಒಳ ಮೀಸಲಾತಿ ರೋಸ್ಟರ್ ಹಂಚಿಕೆ ವಿರೋಧಿಸಿ, ಹಳೇಯ ಮೀಸಲಾತಿ ನಿಯಮದಂತೆ ತ್ವರಿತ ನೇಮಕಾತಿ ನಡೆಸಲು ಆಗ್ರಹಿಸಿ ಮಾ.24 ರಂದು ಫ್ರೀಡಂ ಪಾರ್ಕ್‌ನಲ್ಲಿ ಬೆಂಗಳೂರು ಚಲೋ ಬೃಹತ್ ಪ್ರತಿಭಟನಾ ಸಮಾವೇಶ ಆಯೋಜಿಸಲಾಗಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಂಜಾರ ಸಮಾಜದ ಜಿಲ್ಲಾಧ್ಯಕ್ಷ ಲಕ್ಷ್ಮಣ್ ನಾಯ್ಕ ಟಿ.ಬಿ ಅವರು, ಹಳೇಯ ಮೀಸಲಾತಿ ನಿಯಮ ಶೇ.50 ರನ್ವಯ ನೇಮಕಾತಿ ಮತ್ತು ಶೈಕ್ಷಣಿಕ ಪ್ರವೇಶ ಪ್ರಕ್ರಿಯೆಯನ್ನು ಮುಂದುವರೆಸುವುದಾಗಿ ರಾಜ್ಯಸರ್ಕಾರ ಆದೇಶ ಹೊರಡಿಸಿರುವುದನ್ನು ಸ್ವಾಗತಿಸಿ, ತ್ವರಿತವಾಗಿ ನೇಮಕಾತಿ ಅಧಿಸೂಚನೆ ಹೊರಡಿಸಿ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಬೇಕೆಂದು ಒತ್ತಾಯಿಸಿದರು.

ದೇಶವ್ಯಾಪಿ ನಡೆಯುತ್ತಿರುವ ಜನಗಣತಿ ಸಮಗ್ರ ದತ್ತಾಂಶ ಬರುವವರೆಗೆ ಒಳ ಮೀಸಲಾತಿ ಕುರಿತು ಏಕಪಕ್ಷೀಯ ನಿರ್ಧಾರ ಕೈಗೊಳ್ಳಬಾರದು. ರಾಜ್ಯದಲ್ಲಿ ಒಳ ಮೀಸಲಾತಿ ಹಂಚಿಕೆ ಪ್ರಕ್ರಿಯೆ ಆರಂಭಿಸುವ ಮುನ್ನ ಈ ಸಮುದಾಯಗಳ ಮುಖಂಡರೊಂದಿಗೆ ಸಮಾಲೋಚನಾ ಸಭೆ ನಡೆಸಬೇಕೆಂದು ಮನವಿ ಮಾಡಿದರು.



ಮೂಲ ಮೀಸಲಾತಿಯ ಸಂರಕ್ಷಣೆಗಾಗಿ ನಾಡಿದ ಬಂಜಾರ, ಭೋವಿ, ಚರ್ಮಕಾರ, ಸಮಗಾರ, ಕೊರಚ, ಕೊರಮ, ಬಲಗೈ ಛಲವಾದಿ, ಅಲೆಮಾರಿ ಸೂಕ್ಷ್ಮ ಸಮುದಾಯಗಳು ಜಂಟಿಯಾಗಿ ಆಯೋಜಿಸಿರುವ ಈ ಐತಿಹಾಸಿಕ ಹೋರಾಟದಲ್ಲಿ ಜಿಲ್ಲೆಯ ಎಲ್ಲಾ ಗ್ರಾಮ, ತಾಲ್ಲೂಕು ಬಂಧುಗಳು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸುವಂತೆ ವಿನಂತಿಸಿದರು.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯ ಅಂಕಿಅಂಶಗಳು ಅಸ್ಪಷ್ಟ ಮತ್ತು ಸಾಲು ಸಾಲು ತಪ್ಪುಗಳಿಂದ ಕೂಡಿದ್ದು, ತಕ್ಷಣ ಈ ಸಮೀಕ್ಷೆಯನ್ನು ತಾಲ್ಲೂಕುವಾರು ಸಮಗ್ರ ದತ್ತಾಂಶ ಮಾಹಿತಿಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಪರಿಶಿಷ್ಟರಿಗೆ ಮೀಸಲಾಗಿರುವ ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಅನ್ಯ ಯೋಜನೆಗಳಿಗೆ ಬಳಸದಂತೆ ಕಾನೂನು ತಿದ್ದುಪಡಿ ಮಾಡಬೇಕೆಂದು ತಿಳಿಸಿದ ಅವರು, ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದ್ದು, ಸರ್ಕಾರಕ್ಕೆ ಕಳುಹಿಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಭೋವಿ ಸಮಾಜದ ಜಿಲ್ಲಾಧ್ಯಕ್ಷ ಕೊಲ್ಲಾ ಭೋವಿ, ಬಂಜಾರ ಸಮಾಜದ ಗೌರವಾಧ್ಯಕ್ಷ ಬಿ.ಟಿ ಗಂಗಾಧರ್ ನಾಯಕ್, ಕೊರಚ ಕೊರಮ ಸಮಾಜದ ಜಿಲ್ಲಾಧ್ಯಕ್ಷ ಗಿರೀಶ್, ಮುಖಂಡರಾದ ಮಂಜುನಾಥ್ ಕೆ.ವಿ, ರಾಜನಾಯ್ಕ, ನಾಗರಾಜ, ಶ್ರೀನಿವಾಸ್ ನಾಯ್ಕ, ದಿಲೀಪ್, ಜಯಂತ್, ರಘು, ರವಿ, ಪ್ರದೀಪ್, ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಕಲ್ಲು ಗಣಿಗಾರಿಕೆ ಕಂಪನಿ ಕೂಡಲೇ ನಿಲ್ಲಿಸಿ

ಮೊಳಕಾಲ್ಮೂರು: ರೈತರೇ ಈ ದೇಶದ ಬೆನ್ನೆಲುಬು ಎಂದು ಹೇಳುತ್ತಾ ಅದೇ ರೈತರಿಗೆ ಬೆನ್ನಿಗೆ ಚೂರಿ ಹಾಕುತ್ತಿದ್ದಾರೆ ಎಂದು ಸಮಾಜ ಪರಿವರ್ತನಾ ವೇದಿಕೆಯ ಮುಖಂಡ ಎಸ್. ಪರಮೇಶ್ ಮೌರ್ಯ ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಬುಧವಾರ ತಾಲೂಕು ಆಡಳಿತ ಸೌಧದಲ್ಲಿ ಸಮಾಜ ಪರಿವರ್ತನಾ ವೇದಿಕೆ ಹಾಗೂ ಕರ್ನಾಟಕ ಪ್ರಾಂತ್ಯ ರೈತ ಸಂಘ ಹಾಗೂ ಮರ್ಲಹಳ್ಳಿ ಗ್ರಾಮಸ್ಥರು ಸೇರಿ ಶಿವಶಕ್ತಿ ಬಿಲ್ಡಿಂಗ್ ಸ್ಟೋನ್ ಕಂಪನಿ ಗಣಿಗಾರಿಕೆ ನಡೆಸುತ್ತಿರುವುದನ್ನು ನಿಲ್ಲಿಸಬೇಕು. ಅದರ ಅನುಮತಿಯನ್ನು ರದ್ದು ಪಡಿಸಬೇಕು ಎಂದು ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.

ಆಂಧ್ರ ಮೂಲದ ಗುಂಡಾಗಳು ಕಲ್ಲುಗಣಿಗಾರಿಕೆಯನ್ನು ಪ್ರಾರಂಭಿಸಿದ್ದಾರೆ. ಡ್ರೋನ್ ಕ್ಯಾಮೆರಾಗಳ ಮೂಲಕ ವಿಡಿಯೋ ಚಿತ್ರೀಕರಣ ಮಾಡುತ್ತಾ ಸುತ್ತಮುತ್ತಲಿನ ಜಮೀನುಗಳು ಮಾಲೀಕರಿಗೆ ಮತ್ತು ಸುತ್ತಮುತ್ತಲಿನ ರೈತರಿಗೆ ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ. ಸರ್ವೇ ನಂಬರ್ 67 ರಲ್ಲಿ ಕಂಪನಿ ಅವರು ಭಯಾನಕ ಬಾಂಬುಗಳನ್ನು ಸ್ಪೋಟಿಸುವುದರಿಂದ ಕಲ್ಲಿನ ತುಂಡಗಳು ವೇಗವಾಗಿ ತೋಟಗಳ ಮನೆಗಳಿಗೆ ಹಾಗೂ ಗ್ರಾಮದ ಸಮೀಪಕ್ಕೆ ನುಗ್ಗುತ್ತವೆ. ಆದ್ದರಿಂದ ಸಾರ್ವಜನಿಕರು ಹೋರಾಡಲು ಭಯಭೀತರಾಗಿದ್ದಾರೆ. ಅದೇ ರೀತಿ ದನ, ಕರುಗಳಿಗೆ ಮೇವಿನ ಸಂಪತ್ತು ತುಂಬಿದ ಪ್ರದೇಶವಾಗಿದ್ದು ಜಾನುವಾರುಗಳ ಜೀವನಾಡಿಯಾಗಿದೆ. ಆದ್ದರಿಂದ ರೈತರುಗಳಿಗೆ ಕೂಲಿ ಕಾರ್ಮಿಕರಿಗೆ ಜಾನುವಾರುಗಳಿಗೆ ತುಂಬಾ ತೊಂದರೆ ಉಂಟಾಗುತ್ತದೆ ಈ ಕೂಡಲೇ ಇದನ್ನು ರದ್ದುಪಡಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ನೇರ್ಲಹಳ್ಳಿ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಪಾಪಣ್ಣ, ಗ್ರಾಮ ಪಂಚಾಯಿತಿ ಸದಸ್ಯರಾದ, ಬಂಗಿ ಸೂರಯ್ಯ, ತಿಪ್ಪೇಸ್ವಾಮಿ ತಿಪ್ಪಯ್ಯ, ರಾಜು,ಓ. ತಿಪ್ಪೇಶ್, ನಾಗಸಮುದ್ರ ಮರಿಸ್ವಾಮಿ,ಗ್ರಾಮದ ಮುಖಂಡರಾದ ಮಂಜುನಾಥ ಬೋರಯ್ಯ ಪೆದ್ದಯ್ಯ ನಾಗೇಶ್, ಓಬಣ್ಣ, ಚಿದಾನಂದ, ಬೊಮ್ಮಣ್ಣ, ಸಣ್ಣ ಪಾಲಯ್ಯ, ಮಲ್ಲಯ್ಯ ಇನ್ನು ಹಲವರು ಉಪಸ್ಥಿತರಿದ್ದರು.



ದೇವಸ್ಥಾನದ ಬಾಗಿಲಿಗೆ ಬೆಂಕಿಹಚ್ಚಿ ಕಳ್ಳತನಕ್ಕೆ ಯತ್ನಿಸಿದ್ದ ಆರೋಪಿಗೆ ಶಿಕ್ಷೆ ಪ್ರಕಟ

ಹೊಸದುರ್ಗ: ತಾಲೂಕಿನ ಕಾರೇಹಳ್ಳಿ ಸಮೀಪದ ಹರಿಹರೇಶ್ವರಸ್ವಾಮಿ ದೇವಸ್ಥಾನದ ಬಾಗಿಲಿಗೆ ಬೆಂಕಿಹಚ್ಚಿ, ಕಳ್ಳತನಕ್ಕೆ ಯತ್ನಿಸಿದ್ದ ಆರೋಪಿಗೆ ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕಠಿಣ ಶಿಕ್ಷೆ ವಿಧಿಸಿದೆ.

2023 ರ ಡಿಸೆಂಬರ್‌ನಲ್ಲಿ ಶ್ರೀ ಹರಿಹರೇಶ್ವರ ದೇವಸ್ಥಾನಕ್ಕೆ ನುಗ್ಗಿದ ಆರೋಪಿ ಖಲಂದರ್ ಸಾವೆಲ್ ಹುಂಡಿ ಕಳವು ಮಾಡಲು ಯತ್ನಿಸಿದ್ದ. ಅದು ಸಾಧ್ಯವಾಗದಿದ್ದಾಗ, ದೇವಸ್ಥಾನದ ಮುಖ್ಯದ್ವಾರದ ಮರದ ಬಾಗಿಲಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದು, ಸುಮಾರು 50 ಸಾವಿರ ರೂ. ಮೌಲ್ಯದ ಬಾಗಿಲಿಗೆ ಹಾನಿಯಾಗಿತ್ತು.

ಈ ಕುರಿತು ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇನ್ಸ್ಪೆಕ್ಟರ್ ಪಿ.ಬಿ.ಮಧು ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ರೋಣಾ ವಾಸುದೇವ್ ಅವರು ಆರೋಪಿಯ ಮೇಲಿನ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ 7 ವರ್ಷ ಸಾದಾ ಶಿಕ್ಷೆ ಮತ್ತು 50,000 ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಪ್ರಧಾನ ಸರ್ಕಾರಿ ಅಭಿಯೋಜಕರಾದ ಎಸ್.ಎಸ್.ಮಲ್ಲಯ್ಯ ವಾದ ಮಂಡಿಸಿದ್ದರು.

480 ವಿದ್ಯಾರ್ಥಿಗಳು ಗೈರು

ಚಿತ್ರದುರ್ಗ: ಜಿಲ್ಲೆಯಲ್ಲಿ ಮಾರ್ಚ್ 18ರಂದು ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಪ್ರಥಮ ಭಾಷೆ ವಿಷಯದ ಪರೀಕ್ಷೆಗೆ 480 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಪ್ರಥಮ ಭಾಷೆ ವಿಷಯದ ಪರೀಕ್ಷೆಗೆ 23049 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ 22569 ವಿದ್ಯಾರ್ಥಿಗಳು ಹಾಜರಾಗಿ, 480 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಜಿಲ್ಲೆಯ 84 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.



ಶಾಸಕ ರಘುಮೂರ್ತಿ ಅವರಿಂದ ಸಚಿವ ಗಡ್ಕರಿ ಅವರಿಗೆ ಮನವಿ

ಚಳ್ಳಕೆರೆ: ಚಳ್ಳಕೆರೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಟಿ. ರಘುಮೂರ್ತಿ ಅವರು ದೆಹಲಿಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವರಾದ ನಿತೀನ್ ಗಡ್ಕರಿ ಅವರನ್ನು ಭೇಟಿ ಮಾಡಿ, ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಗಾಗಿ ಸಿಐಆರ್‌ಎಫ್ ಅಡಿಯಲ್ಲಿ 2,000 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಲಾಯಿತು. ಇದೇ ವೇಳೆ, ಬಾಗಲಕೋಟೆ ರಾಯಚೂರು ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆಯಲ್ಲಿರುವ ಸಮಸ್ಯೆಗಳ ಬಗ್ಗೆ ಸ್ಥಳೀಯ ಸಂಸದರು ಮತ್ತು ಶಾಸಕರೊಂದಿಗೆ ಸುದೀರ್ಘ ಚರ್ಚೆ ನಡೆಸಿ, ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಕೋರಲಾಯಿತು.

ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ, ಸಂಸದರಾದ ಜಿ. ಕುಮಾರ್ ನಾಯಕ, ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ, ಶಾಸಕರಾದ ಬಸನಗೌಡ ದದ್ದಲ, ಡಾ. ಶೀನಿವಾಸ ಉಪಸ್ಥಿತರಿದ್ದರು.

ಕ್ರೀಡಾಕೂಟಕ್ಕೆ ಸತೀಶ್ ಕುಮಾರ್ ಆಯ್ಕೆ

ಚಿತ್ರದುರ್ಗ: ಪಂಜಾಬ್‌ನ ಗುರುಕಾಶಿ ವಿಶ್ವವಿದ್ಯಾನಿಲಯದ ಭಟಿಂಡ ಕ್ರೀಡಾಂಗಣದಲ್ಲಿ ಮಾ.14 ರಿಂದ 16 ರವರೆಗೆ ಮೂರು ದಿನಗಳ ಕಾಲ ನಡೆದ 45 ನೆ ರಾಷ್ಟ್ರಮಟ್ಟದ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕ್ರೀಡಾಕೂಟದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಸತೀಶ್‌ಕುಮಾರ್ ಯು. ನೂರು ಮೀಟರ್ ಓಟದಲ್ಲಿ ಎರಡನೆ ಸ್ಥಾನ, ಇನ್ನೂರು ಮೀ. ಓಟದಲ್ಲಿ ಮೊದಲ ಸ್ಥಾನ ಪಡೆದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.



ಚಿತ್ರದುರ್ಗದಲ್ಲಿ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿರುವ ಸತೀಶ್‌ಕುಮಾರ್ ಯು. ಐವತ್ತು ವರ್ಷದೊಳಗಿನ ಮೇಲ್ಪಟ್ಟವರಿಗಾಗಿ ನಡೆದ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಐದು ಪ್ರಶಸ್ತಿ ಪದಕಗಳನ್ನು ಬಾಚಿಕೊಂಡು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಕೋಟೆನಾಡಲ್ಲಿ ಮನೆ ಮಾಡಿದ ಹಬ್ಬದ ಸಂಭ್ರಮ

ಹಬ್ಬದ ಖರೀದಿ ಜೋರು

» ಎಂ.ಜಿ.ತಿಪ್ಪೇಸ್ವಾಮಿ

ಚಿತ್ರದುರ್ಗ: ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಎಂಬಂತೆ ಈ ಬಾರಿಯೂ ಯುಗಾದಿ ಹಬ್ಬ ಬಂದಿದೆ. ಬಯಲುಸೀಮೆ ಚಿತ್ರದುರ್ಗದಲ್ಲಿ ಬಿಸಿಲಿನ ಬೇಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲೇ ಯುಗಾದಿ ಹಬ್ಬ ಬಂದಿದ್ದು, ಸುಡುಬಿಸಿಲನ್ನು ಲೆಕ್ಕಿಸದೆ ಜನರು ಹಬ್ಬದ ಖರೀದಿಗೆ ಮುಗಿ ಬಿದ್ದಿದ್ದಾರೆ. ಹಬ್ಬಕ್ಕೆ ಹೊಸ ಬಟ್ಟೆ ಖರೀದಿಸಲು ಜನರು ಬಟ್ಟೆ ಅಂಗಡಿಗಳಿಗೆ ದಾಂಗುಡಿ ಇಡುತ್ತಿದ್ದಾರೆ. ಇದರಿಂದಾಗಿ ಬಟ್ಟೆ ಅಂಗಡಿಗಳು ತುಂಬಿ ತುಳುಕುತ್ತಿವೆ. ಹಬ್ಬಕ್ಕೆ ಬೇಕಿರುವ ಬಟ್ಟೆ-ಬರೆ ಮತ್ತಿತರ ವಸ್ತುಗಳ ಖರೀದಿ ಭರಾಟೆ ಜೋರಾಗಿದೆ.

ಈ ಬಾರಿ ಯುಗಾದಿ ಹಾಗೂ ರಂಜಾನ್ ಹಬ್ಬ ಎರಡೂ ಒಟ್ಟಿಗೆ ಬಂದಿದ್ದು, ಹಬ್ಬದ ಪ್ರಯುಕ್ತ ಬಟ್ಟೆ ಖರೀದಿ ಜೋರಾಗಿದೆ. ಹಿಂದೂಗಳಿಗೆ ಯುಗಾದಿ ಅಂದರೆ ಹೊಸ ವರ್ಷ ಹಾಗಾಗಿ ಕುಟುಂಬ ಹಾಗೂ ವ್ಯಯಕ್ತಿಕವಾಗಿ ಎಷ್ಟೇ ಸಮಸ್ಯೆ, ತೊಂದರೆಗಳಿದ್ದರೂ ಜನರಲ್ಲಿ ಯುಗಾದಿ, ರಂಜಾನ್ ಹಬ್ಬಗಳ ಉತ್ಸಾಹ ಕಡಿಮೆಯಾಗುವುದಿಲ್ಲ. ಮನೆ ಮಂದಿಯೆಲ್ಲ ಸೇರಿ ಲವಲವಿಕೆಯಿಂದ ಅಂಗಡಿಗಳಿಗೆ ತೆರಳಿ ಬಟ್ಟೆ ಖರೀದಿಯಲ್ಲಿ ತೊಡಗುತ್ತಾರೆ. ಇದರಿಂದಾಗಿ ನಗರದ ವಿವಿಧೆಡೆಗಳಲ್ಲಿರುವ ಬಟ್ಟೆ ಅಂಗಡಿಗಳಲ್ಲಿ ಜನ ಜಂಗುಳಿ ಹೆಚ್ಚಾಗಿದೆ.

ಒಂದೆಡೆ ಯುಗಾದಿ ಹಾಗೂ ರಂಜಾನ್ ಈ ಎರಡು ಹಬ್ಬಗಳ ಆಚರಣೆ. ಇದರ ನಡುವೆ ಮದುವೆ, ಮತ್ತಿತರ ಶುಭ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿವೆ. ಇದರಿಂದಾಗಿ ಒಡವೆ, ಬಟ್ಟೆ, ಹೊಸ ಉಡುದಾರ ಸೇರಿದಂತೆ ಮತ್ತಿತರ ಅಗತ್ಯ ವಸ್ತುಗಳನ್ನು ಖರೀದಿಸಬೇಕಾದ ಅನಿವಾರ್ಯತೆ ಇರುತ್ತದೆ. ಹಾಗಾಗಿ ನಗರದ ವಿವಿಧ ಅಂಗಡಿಗಳಲ್ಲಿ ವ್ಯಾಪಾರ ವಹಿವಾಟು ಭರ್ಜರಿಯಾಗಿಯೇ ನಡೆಯುತ್ತಿದೆ. ಉರಿ ಬಿಸಿಲನ್ನೂ ಲೆಕ್ಕಿಸದೆ ಜನರು ಹಬ್ಬ, ಮದುವೆ ಮತ್ತಿತರ ಸಮಾರಂಭಗಳಿಗೆ ಉತ್ಸುಕತೆಯಿಂದ ಖರೀದಿ ಮಾಡುತ್ತಿದ್ದಾರೆ.



> **ಯುಗಾದಿ ಹಬ್ಬ ಎಂದರೆ ವ್ಯಾಪಾರ ಇದ್ದೇ ಇರುತ್ತೆ. ಅದರಲ್ಲೂ ನಮ್ಮ ಚಿತ್ರದುರ್ಗ ಜಿಲ್ಲೆ ಅಂದರೆ ವಿಶೇಷ. ಚಿತ್ರದುರ್ಗ, ತುಮಕೂರು, ಬಳ್ಳಾರಿ, ಶಿವಮೊಗ್ಗ ಜಿಲ್ಲೆಗಳಲ್ಲಿ ವ್ಯಾಪಾರ ಚೆನ್ನಾಗಿ ನಡೆಯುತ್ತದೆ. ಬೇರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ ಈ ಬಾರಿ ಚಿತ್ರದುರ್ಗ ಜಿಲ್ಲೆಯಲ್ಲಿ ಉತ್ತಮ ವ್ಯಾಪಾರ ನಡೆಯುತ್ತಿದೆ. ಜನರು ಉತ್ಸಾಹದಿಂದ ಖರೀದಿ ಮಾಡುತ್ತಿದ್ದಾರೆ.**
>
> ■ ಬಟ್ಟೆ ಅಂಗಡಿ ಉದ್ಯೋಗಿ ಪಾಪಣ್ಣ, ಲಕ್ಷ್ಮೀ ಬಜಾರ್‌ನ ಸತೀಶ್ ಗಾರ್ಮೆಂಟ್ಸ್

ನಗರದ ಲಕ್ಷ್ಮಿಬಜಾರ್, ವಾಸವಿ ಮಹಲ್ ರಸ್ತೆ, ಹಳೆ ರೂಪವಾಣಿ ಚಿತ್ರಮಂದಿರದ ರಸ್ತೆ, ಬಿ.ಡಿ. ರಸ್ತೆ, ಮೆದೇಹಳ್ಳಿ ರಸ್ತೆ, ಕನ್ನಕಾ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳು ಸೇರಿದಂತೆ ಇನ್ನಿತರೆ ಪ್ರದೇಶಗಳ ಬಟ್ಟೆ ಅಂಗಡಿಗಳಲ್ಲಿ ನಾಗರಿಕರು ಹೊಸ ಉಡುಪು ಖರೀದಿಯಲ್ಲಿ ತೊಡಗಿದ್ದಾರೆ. ಬಹುತೇಕ ಎಲ್ಲಾ ಅಂಗಡಿ ಮುಂಗಟ್ಟುಗಳಲ್ಲಿ ಜನ ಜಂಗುಳಿಯಿಂದ ತುಂಬಿವೆ. ಕಳೆದ ಒಂದು ತಿಂಗಳಿನಿಂದ ಈ ಪ್ರದೇಶಗಳಲ್ಲಿ ಬಟ್ಟೆ ಸೇರಿದಂತೆ ಮತ್ತಿತರ ವಸ್ತುಗಳನ್ನು ಖರೀದಿಸಲು ಇದೇ ರೀತಿಯ ವಾತಾವರಣ ಇದೆ.

ನಗರದ ವಿವಿಧೆಡೆಗಳಲ್ಲಿರುವ ಬಟ್ಟೆ ಅಂಗಡಿಗಳಲ್ಲಿ ಜನರು ತಮ್ಮ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಬಟ್ಟೆ ಖರೀದಿ ಮಾಡುತ್ತಿದ್ದಾರೆ. ಕೆಲವರು ದೊಡ್ಡ ಅಂಗಡಿಗಳಲ್ಲಿ ಖರೀದಿಸಿದರೆ, ಮಧ್ಯಮ ವರ್ಗದ ಜನರು ಚಿಕ್ಕಪುಟ್ಟ ಅಂಗಡಿಗಳಲ್ಲಿ ಖರೀದಿ ಮಾಡುತ್ತಿದ್ದಾರೆ. ಪ್ರತಿ ಬಾರಿ ಯುಗಾದಿ ಸಮಯದಲ್ಲಿ ತಮಿಳುನಾಡಿನಿಂದ ಅನೇಕ ಬಟ್ಟೆ ವ್ಯಾಪಾರಿಗಳು ಜಿಲ್ಲೆಗೆ ಆಗಮಿಸುತ್ತಾರೆ. ಸೈಕಲ್ ಗಾಡಿಗಳಲ್ಲಿ ಬಟ್ಟೆ ಇಟ್ಟುಕೊಂಡು ವಿವಿಧ ಪ್ರದೇಶಗಳಿಗೆ ತೆರಳಿ ವ್ಯಾಪಾರ ಮಾಡುತ್ತಿದ್ದಾರೆ. ಬಡಬಗ್ಗರು ಇಂತಹ ವ್ಯಾಪಾರಿಗಳ ಬಳಿ ಚೌಕಾಸಿ ಮಾಡಿ ಬಟ್ಟೆ ಖರೀದಿಸಿ ಹಬ್ಬ ಆಚರಣೆಗೆ ಮುಂದಾಗಿದ್ದಾರೆ.

ಅಧಿಕಾರ ಇದ್ದಾಗ ಜನೋಪಯೋಗಿ ಕೆಲಸ ಮಾಡಬೇಕು: ಡಾ. ಚಂದ್ರಪ್ಪ

ಚಿತ್ರದುರ್ಗ: ಅಧಿಕಾರದಲ್ಲಿರಲಿ ಬಿಡಲಿ, ಹತ್ತು ಜನಕ್ಕೆ ಉಪಯೋಗವಾಗುವಂತ ಕೆಲಸ ಮಾಡಿದರೆ ಜೀವನ ಸಾರ್ಥಕವಾಗುತ್ತದೆ. ಇಂತಹ ಆಲೋಚನೆ ಇಟ್ಟುಕೊಂಡು ಕ್ಷೇತ್ರದ ಅಭಿವೃದ್ದಿಗೆ ಹಗಲಿರುಳು ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ಎಂಎಲ್‌ಎ ನಾನು ಎಂದು ಶಾಸಕ ಡಾ. ಎಂ. ಚಂದ್ರಪ್ಪ ಹೇಳಿದರು.

ಹೊಳಲ್ಕೆರೆ ಪಟ್ಟಣದಲ್ಲಿ 30 ಲಕ್ಷ ರೂ. ವಚ್ಚದಲ್ಲಿ ಶುದ್ದ ಕುಡಿಯುವ ನೀರಿನ ಘಟಕ ಮತ್ತು 40 ಲಕ್ಷ ರೂ.ವೆಚ್ಚದಲ್ಲಿ ಹೊಳಲ್ಕೆರೆ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಆರು ಸಾವಿರ ಲೀ. ಸಾಮರ್ಥ್ಯವುಳ್ಳ ಎರಡು ಶುದ್ದ ಕುಡಿಯುವ ನೀರಿನ ವಾಹನಳಿಗೆ ಬುಧವಾರ ಚಾಲನೆ ನೀಡಿ ಮಾತನಾಡಿದರು.

ಯಾರು ಗೆದ್ದು ನಿಮ್ಮ ಪರವಾಗಿ ಕೆಲಸ ಮಾಡುತ್ತಾರೋ ಅಂತಹವರಿಗೆ ಗೌರವ ಕೊಡುವ ಪ್ರಜ್ಞೆ ನಿಮ್ಮಲ್ಲಿರಬೇಕು. ಎಂ.ಎಂ. ಸರ್ಕಾರಿ ಪ್ರೌಢಶಾಲೆಯನ್ನು ಕೆಡವಿ ದೊಡ್ಡ ಕಟ್ಟಡ ಕಟ್ಟಿಸಿರುವುದರಿಂದ 1650 ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಎಲ್.ಕೆ.ಜಿ.ಯಿಂದ ಪಿ.ಯು.ಸಿ.ವರೆಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುವುದು. ದ್ವಿತೀಯ ಪಿ.ಯು.ಸಿ.ಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದರೆ ವೈದ್ಯಕೀಯ ಹಾಗೂ ಇಂಜಿನಿಯರಿಂಗ್‌ಗೆ ಪ್ರವೇಶ ಪಡೆಯುವ ಅವಕಾಶವಿರುತ್ತದೆ. ಕಾನ್ವೆಂಟ್ ಶಾಲೆಗಿಂತ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ ಎಂದರು.

ಗುಣಮಟ್ಟದ ಸಿ.ಸಿ. ರಸ್ತೆ, ಶಾಲಾ - ಕಾಲೇಜು, ಚೆಕ್‌ಡ್ಯಾಂ, ಪಾಲಿಟೆಕ್ನಿಕ್ ಕಾಲೇಜು, ಡಿಪ್ಲೊಮಾ, ಐ.ಟಿ.ಐ. ಕಾಲೇಜು, ಫಾರೆಸ್ಟ್ ಗೆಸ್ಟ್ ಹೌಸ್, ನ್ಯಾಯಾಧೀಶರುಗಳಿಗೆ ವಸತಿ ಗೃಹ, ಕಿತ್ತೂರುರಾಣಿ ಚೆನ್ನಮ್ಮ ಶಾಲೆ, ಕಸ್ತೂರಬಾಶಾಲೆ, ಮುರಾರ್ಜಿ ದೇಸಾಯಿ ಶಾಲೆಗಳನ್ನು ಕೊಟ್ಟಿದ್ದೇನೆ. ಸರ್ಕಾರಿ ಶಾಲೆಗೆ ಬರುವ ಬಡ ಮಕ್ಕಳಿಗೆ ತೊಂದರೆಯಾಗಬಾರದೆಂದು ಉಚಿತ ಬಸ್‌ಗಳನ್ನು ಬಿಟ್ಟಿದ್ದೇನೆ. ಪ್ರತಿದಿನ ಮನೆಗಳಿಗೆ ಹೋಗಿ ಮಕ್ಕಳನ್ನು ಕರೆತಂದು ಉಚಿತ ಪಠ್ಯಪುಸ್ತಕ, ಮಧ್ಯಾಹ್ನದ ಬಿಸಿಯೂಟ, ಹಾಲು, ಬಾಳೆಹಣ್ಣು, ಮೊಟ್ಟೆ, ಪೌಷ್ಠಿಕಾಂಶವುಳ್ಳ ಕಾಳುಗಳು, ಶೂ, ಸಾಕ್ಸ್ ನೀಡಲಾಗುವುದು. ನಂತರ ಸಂಜೆ ಮಕ್ಕಳನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಮನೆಗೆ ತಲುಪಿಸಲಾಗುವುದು ಎಂದು ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಉಮೇಶ್, ಪುರಸಭೆ ಮಾಜಿ ಅಧ್ಯಕ್ಷ ಆರ್.ಎ. ಅಶೋಕ್, ಮಾಜಿ ಸದಸ್ಯರುಗಳಾದ ಪಿ.ಹೆಚ್. ಮುರುಗೇಶ್, ಮಲ್ಲಿಕಾರ್ಜುನ ಸ್ವಾಮಿ, ಗೀತಾ ಕೃಷ್ಣಮೂರ್ತಿ, ಬಸವರಾಜ್ ಯಾದವ್, ರಾಜಣ್ಣ, ಡಿ.ಸಿ.ಮೋಹನ್ ಹಾಗೂ ಗ್ರಾಮಸ್ಥರು ಈ ಸಂದರ್ಭದಲ್ಲಿ ಹಾಜರಿದ್ದರು.

ಹೊಳಲ್ಕೆರೆ ಪಟ್ಟಣಕ್ಕೆ ಹೊಂದಿಕೊಂಡಿರುವ ಕಂಬದೇವರಹಟ್ಟಿ ಹಾಗೂ ಚೀರನಹಳ್ಳಿ ಗ್ರಾಮಗಳಿಗೂ ಶುದ್ದ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಯಿತು.



ಶಾಂತಿ ಮತ್ತು ಸೌಹಾರ್ದತೆಯಿಂದ ಹಬ್ಬ ಆಚರಿಸಿ: ಸತ್ಯನಾರಾಯಣ ರಾವ್

ಚಳ್ಳಕೆರೆ : ಯುಗಾದಿ ಮತ್ತು ರಂಜಾನ್ ಹಬ್ಬಗಳು ಒಂದೇ ಅವಧಿಯಲ್ಲಿ ಬರುತ್ತಿರುವ ಹಿನ್ನೆಲೆ, ಶಾಂತಿ ಮತ್ತು ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿಕೊಳ್ಳಬೇಕು ಎಂದು ಡಿವೈಎಸ್ಪಿ ಸತ್ಯನಾರಾಯಣ ರಾವ್ ಹಿಂದೂ ಹಾಗೂ ಮುಸ್ಲಿಂ ಬಾಂಧವರಿಗೆ ಮನವಿ ಮಾಡಿಕೊಂಡರು.

ಇವರು ನಗರದ ಪೊಲೀಸ್ ಠಾಣೆಯಲ್ಲಿ ಯುಗಾದಿ ಹಾಗೂ ರಂಜಾನ್ ಹಬ್ಬದ ಪ್ರಯುಕ್ತ ಶಾಂತಿ ಸಭೆ ಉದ್ದೇಶಿಸಿ ಮಾತನಾಡಿದರು,

ಎಲ್ಲ ಸಮುದಾಯದ ಜನರು ಪರಸ್ಪರ ಸಹಕಾರದಿಂದ ಶಾಂತಿಯುತವಾಗಿ ಹಬ್ಬಗಳನ್ನು ಆಚರಿಸಬೇಕು. ಈ ಬಾರಿ ಯುಗಾದಿ ಮತ್ತು ರಂಜಾನ್ ಹಬ್ಬಗಳು ಒಂದೇ ಅವಧಿಯಲ್ಲಿ ಬಂದಿರುವುದು ಸೌಹಾರ್ದತೆಯ ಸಂಕೇತವಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಅನಾಹುತಗಳಿಗೆ ಅವಕಾಶ ಕೊಡದೆ ಶಾಂತಿ ಕಾಪಾಡಬೇಕು. ಹಬ್ಬಗಳು ಸಂತೋಷ ಮತ್ತು ನೆಮ್ಮದಿಗಾಗಿ ಬಂದಂತ ಹಬ್ಬಗಳಾಗಿರುತ್ತವೆ. ಈ ನಿಟ್ಟಿನಲ್ಲಿ ಯಾವುದೇ ತರದ ಜೂಜಾಟ ಅಥವಾ ಜಾತಿಯ ಸಂಘರ್ಷವನ್ನು ಇಟ್ಟುಕೊಂಡು ಗಲಾಟೆ ಗದ್ದಲಗಳು ಹಾಗೂ ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ಹಬ್ಬದ ಹೆಸರಿನಲ್ಲಿ ಜೂಜಾಟದ ಚಟುವಟಿಕೆಗಳು ಕಂಡು ಬಂದಲ್ಲಿ ಅಂತಹ ವ್ಯಕ್ತಿಗಳ ಮೇಲೆ ಕಾನೂನು ಪ್ರಕಾರ ಶಿಕ್ಷಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.



ಶಾಂತಿ ಸಭೆಯಲ್ಲಿ ಪಿಎಸ್‌ಐ ಕೆ. ಕುಮಾರ್, ಮಾಜಿ ನಗರಸಭೆ ಸದಸ್ಯ ಪ್ರಸನ್ನ ಕುಮಾರ್, ಮುಜೀಬುಲ್ಲ, ವೆಂಕಟೇಶ ಆಚಾರ್, ಯಾಮಿಯ ಮಸೂದಿಯ ಅಧ್ಯಕ್ಷ ಯಾಕೂಬ್ ಅಲಿ, ಆತಿಕ್ ರೆಹಮಾನ್ ಸೇರಿದಂತೆ ಹಿಂದೂ ಹಾಗೂ ಮುಸ್ಲಿಂ ಬಾಂಧವರು ಭಾಗಿಯಾಗಿದ್ದರು.

ರೆಡ್‌ಕ್ರಾಸ್‌ಗೆ ಎಕ್ಸಲೆನ್ಸ್ ಪುರಸ್ಕಾರ



ಚಿತ್ರದುರ್ಗ: ಜೀವ ಉಳಿಸುವ ಮಾನವೀಯ ಸೇವೆ ಮತ್ತು ರಕ್ತದಾನ ಅಭಿಯಾನದಲ್ಲಿ ತೋರಿದ ಗಮನಾರ್ಹ ಸಾಧನೆಗಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಚಿತ್ರದುರ್ಗ ಜಿಲ್ಲಾ ಶಾಖೆಗೆ ನ್ಯಾಷನಲ್ ಸೋಷಿಯಲ್ ಇಂಪ್ಯಾಕ್ಟ್ ಪ್ರಶಸ್ತಿ ಹಾಗೂ ಅಂತರ ರಾಷ್ಟ್ರೀಯ ಮಟ್ಟದ ವರ್ಲ್ಡ್ ರೆಕಾರ್ಡ್ ಆಫ್ ಎಕ್ಸಲೆನ್ಸ್ ಪುರಸ್ಕಾರ ದೊರೆತಿದೆ.

ಬೆಂಗಳೂರಿನ ಗಾಂಧಿ ಭವನದಲ್ಲಿ ನ್ಯಾಷನಲ್ ಇಂಟಿಗ್ರೇಟೆಡ್ ಫೋರಮ್ ಆಫ್ ಆರ್ಟಿಸ್ಟ್ಸ್ ಅಂಡ್ ಆಕ್ಟಿವಿಸ್ಟ್ಸ್ (ಎನ್‌ಐಎಫ್‌ಎಎ) ವತಿಯಿಂದ ಇತ್ತೀಚೆಗೆ ಹಮ್ಮಿಕೊಳ್ಳಲಾಗಿದ್ದ ಸಂವೇದನಾ-2 ರಕ್ತದಾನ ಪ್ರಶಸ್ತಿ ಸಮಾರಂಭದಲ್ಲಿ ಪ್ರಶಂಸಾ ಪತ್ರ ನೀಡಿ ಗೌರವಿಸಲಾಯಿತು.

ಭಾರತೀಯ ರೆಡ್ ಕ್ರಾಸ್ ಜಿಲ್ಲಾ ಶಾಖೆಯ ಉಪ ಸಭಾಪತಿ ಅರುಣ್ ಕುಮಾರ್, ಕಾರ್ಯದರ್ಶಿ ಮಜಹರ್ ಉಲ್ಲಾ ಹಾಗೂ ನಿರ್ದೇಶಕ ಎಸ್.ವಿ. ಗುರುಮೂರ್ತಿ ಅವರು ಗಣ್ಯರಿಂದ ಪ್ರಶಸ್ತಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತ ಡಾ. ಸಿ.ಆರ್. ಚಂದ್ರಶೇಖರ್, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕುಲಪತಿ ಡಾ. ಗೋವಿಂದಪ್ಪ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಎನ್‌ಐಎಂಎ ರಾಜ್ಯಾಧ್ಯಕ್ಷ ಡಾ. ಸಿದ್ಧಪ್ಪ, ಬಿಎಸ್‌ಎಫ್‌ನ ಡಾ. ಗುರುಮೂರ್ತಿ, ಬೆಂಗಳೂರು ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿ ಎ.ಬಿ. ಶೆಟ್ಟಿ ಹಾಗೂ ವರ್ಲ್ಡ್ ರೆಕಾರ್ಡ್ ಆಫ್ ಎಕ್ಸಲೆನ್ಸ್‌ನ ಪ್ರಧಾನ ಕಾರ್ಯದರ್ಶಿ ಅಂಬಾಸಿಡರ್ ಡಾ. ನೀಲಿಮಾ ಉಪಸ್ಥಿತರಿದ್ದರು. ಎನ್ ಐಎಫ್‌ಎಎ ರಾಷ್ಟ್ರೀಯ ಅಧ್ಯಕ್ಷೆ ಡಾ. ಅಶ್ವಿನಿ ಎಸ್. ಶೆಟ್ಟಿ ಅವರ ಸಮ್ಮುಖದಲ್ಲಿ ಪ್ರಶಸ್ತಿ ವಿತರಿಸಲಾಯಿತು.

ಹೂವು ನೀಡಿ ಆತ್ಮಸ್ಥೈರ್ಯ ತುಂಬಿದ ಪಿಎಸ್‌ಐ

ನಾಯಕನಹಟ್ಟಿ: ವಿದ್ಯಾರ್ಥಿಗಳು ಶಾಲೆಗೆ ಮತ್ತು ಹೆತ್ತವರಿಗೆ ಕೀರ್ತಿ ತರುವ ಹಾಗೆ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚಿನ ಅಂಕ ಪಡೆಯಬೇಕು ಎಂದು ನಾಯಕನಟ್ಟಿ ಪೊಲೀಸ್ ಠಾಣೆಯ ಪಿಎಸ್‌ಐ ಪಾಂಡುರಂಗಪ್ಪ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬುಧವಾರ ಪಟ್ಟಣದ ಮಯೂರ ಇಂಟನ್ಯಾಷನಲ್ ಸ್ಕೂಲ್‌ನಲ್ಲಿ ಎಸ್‌ಎಸ್ ಎಲ್‌ಸಿ ಪರೀಕ್ಷೆ ಬರೆಯಲು ಆಗಮಿಸಿದ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಡಾ. ವಾಸುದೇವ ಮೇಟಿ ಬಣ ನಾಯಕನಹಟ್ಟಿ ಘಟಕ ವತಿಯಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಗುಲಾಬಿ ಹೂವು ನೀಡಿ ಧೈರ್ಯ ತುಂಬಿ ಶುಭ ಹಾರೈಸಿ ಮಾತನಾಡಿದ ಅವರು, ನಾನು ಸಹ ಎಸ್ ಎಸ್‌ಎಲ್‌ಸಿಯಲ್ಲಿ ಫೇಲಾಗಿ ಮತ್ತೆ ಪರೀಕ್ಷೆ ಕಟ್ಟಿಕೊಂಡು ಪಾಸಾಗಿ ಹೆಚ್ಚಿನ ಶಿಕ್ಷಣ ಪಡೆದು ಪಿಎಸ್‌ಐ ಆಗಿದ್ದೇನೆ. ವಿದ್ಯಾರ್ಥಿಗಳು ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದರೆ ಮುಂದೆ ನಿಮ್ಮ ಭವಿಷ್ಯ ಉತ್ತಮವಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆಯಬೇಕು. ಉನ್ನತ ಶಿಕ್ಷಣಕ್ಕೆ ಅಣಿಯಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮಯೂರ ಇಂಟನ್ಯಾಷನಲ್ ಸ್ಕೂಲ್, ಕಾರ್ಯದರ್ಶಿ ಡಾ. ಎಂ. ಮೈಲಾರ ಸ್ವಾಮಿ, ಮುಖ್ಯಶಿಕ್ಷಕ ಟಿ. ಮಹಾಂತೇಶ್, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಡಾ. ವಾಸುದೇವ ಮೇಟಿ ಬಣದ ಹೋಬಳಿ ಘಟಕ ಅಧ್ಯಕ್ಷ ಡಾ. ನಾಗರಾಜ್ ಮೀಸೆ ಕಾರ್ಯದರ್ಶಿ ಕೆ.ಎಂ. ಮಂಜುನಾಥ್ ಗೌರವಾಧ್ಯಕ್ಷ ಎಂ. ಮಂಜುನಾಥ್ ಗೌಡಗೆರೆ, ನವೀನ್ ಮದಕರಿ, ಪಾಪಣ್ಣ, ಬಸವನಂದ ಜಮೀನ್ದಾರ್, ಓಬಯ್ಯನಹಟ್ಟಿ ಆಟೋ ತಿಪ್ಪೇಸ್ವಾಮಿ, ಎಸ್.ಎಮ್.ಮಂಜುನಾಥ್, ಉದಯ್ ತೇಜ ಚಿತ್ರಕಾರ ಇದ್ದರು.



ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ

ಒಳ ಮೀಸಲಾತಿ ಜಾರಿ ನಂತರ ನೇಮಕಾತಿ ಮಾಡಿ

ಚಿತ್ರದುರ್ಗ: ರೋಸ್ಟರ್ ಬಿಂದುಗಳನ್ನು ಮೊದಲು ಸರಿಪಡಿಸಿ ಒಳ ಮೀಸಲಾತಿಯನ್ನು ಜಾರಿಗೊಳಿಸಿದ ನಂತರವೇ 56,432 ಹುದ್ದೆಗಳನ್ನು ನೇಮಕ ಮಾಡುವಂತೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವರಾಜ್ ಬೊಮ್ಮಾಯಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಪರಿಶಿಷ್ಟ ಜಾತಿಗೆ ಶೇ.15 ರಿಂದ 17 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.3 ರಿಂದ 7 ಪರ್ಸೆಂಟ್ ಮೀಸಲಾತಿಯನ್ನು ತರಾತುರಿಯಲ್ಲಿ ಹೆಚ್ಚಿಸಿ ಶೇ.24 ರಷ್ಟು ಮೀಸಲಾತಿಯನ್ನು ಹೆಚ್ಚಿಸಲಾಗಿದೆ ಎಂದು ಹೇಳಿಕೊಂಡರೆ ವಿನಃ ರಾಜ್ಯದಿಂದ ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಹೆಚ್ಚುವರಿ ಮೀಸಲಾತಿಯನ್ನು ಷೆಡ್ಯೂಲ್-9ಕ್ಕೆ ಸೇರಿಸಬೇಕಿತ್ತು. ಅದನ್ನು ಬಿಟ್ಟು ಕಾಂಗ್ರೆಸ್ ಮೇಲೆ ಬಿಜೆಪಿ. ಗೂಬೆ ಕೂರಿಸುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಚಿತ್ರದುರ್ಗ ಸಂಸದ ಗೋವಿಂದ ಎಂ.ಕಾರಜೋಳ, ಮಾಜಿ ಸಂಸದ ಎ.ನಾರಾಯಣಸ್ವಾಮಿ, ಛಲವಾದಿ ನಾರಾಯಣಸ್ವಾಮಿ, ಬಸವರಾಜ್ ಬೊಮ್ಮಾಯಿ ಇವರುಗಳು ಒಳ ಮೀಸಲಾತಿ ಜಾರಿಗಾಗಿ ಚಿತ್ರದುರ್ಗದಿಂದ ಪಾದಯಾತ್ರೆ ಹೊರಟು ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದಾಗಿ ಹೇಳಿದ್ದು, ಕೇವಲ ಭರವಸೆಯಾಗಿ ಉಳಿದಿದೆ ಎಂದು ಟೀಕಿಸಿದರು.



24 ಪರ್ಸೆಂಟ್ ಮೀಸಲಾತಿ ನೀಡಿದ್ದೇವೆಂದು ಬಿಜೆಪಿ ಆತುರಾತುರವಾಗಿ ಘೋಷಿಸಿತು. ಈಗಿನ ರಾಜ್ಯ ಸರ್ಕಾರ ಒಳ ಮೀಸಲಾತಿ ನಿಯಮವಿಲ್ಲದೆ 56,432 ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಿರುವುದು ಅತ್ಯಂತ ಖಂಡನೀಯ. ರೋಸ್ಟರ್ ಬಿಂದು ನಿಗಧಿಪಡಿಸುವಾಗ 101 ಪರಿಶಿಷ್ಟ ಜಾತಿಗಳಿಗೂ ಅವರವರ ಜನಸಂಖ್ಯೆಗಳನ್ನು ನಿಗಧಿಪಡಿಸಿ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಎಂ.ಗುರುಮೂರ್ತಿ ಆಗ್ರಹಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಒಕ್ಕೂಟದ ಅಧ್ಯಕ್ಷ ಶ್ರೀಧರ ಕಲಿವೀರ ಮಾತನಾಡಿ ಒಳ ಮೀಸಲಾತಿಯಿಲ್ಲದೆ 56,432 ಹುದ್ದೆಗಳನ್ನು ತುಂಬುತ್ತೇವೆನ್ನುವ ರಾಜ್ಯ ಸರ್ಕಾರದ ಕ್ರಮ ಅವೈಜ್ಞಾನಿಕ. ಛಲವಾದಿ ಜಾತಿಗಳು ತಕರಾರು ಎತ್ತಿರುವುದರಿಂದ ರೋಸ್ಟರ್ ಬಿಂದುಗಳಲ್ಲಿನ ದೋಷವನ್ನು ಸರಿಪಡಿಸಿ ಸುಪ್ರೀಂಕೋರ್ಟ್ ತೀರ್ಪಿಗೆ ಬದ್ದರಾಗಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು. ಇಲ್ಲವಾದಲ್ಲಿ ಸಂವಿಧಾನ ವಿರೋಧಿಯಾಗುತ್ತಾರೆ ಎಂದರು.

ಶೇ.56 ಮೀಸಲಾತಿಯನ್ನು ಸಂವಿಧಾನದ 9 ನೇ ಷೆಡ್ಯುಲ್‌ಗೆ ಸೇರಿಸುವುದರಿಂದ ಎಲ್ಲವೂ ಸರಿ ಹೋಗುತ್ತದೆ. ನಾಗಮೋಹನ್‌ದಾಸ್ ವರದಿಯನ್ನು ಮುಖ್ಯಮಂತ್ರಿ ತಿರಸ್ಕರಿಸಿದ್ದಾರೆ. ರೋಸ್ಟರ್ ಬಿಂದು ಸರಿಪಡಿಸಿ 50 ಪರ್ಸೆಂಟ್ ಮೀಸಲಾತಿ ಕೊಡಿ ಎಂದು ಮನವಿ ಮಾಡಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರಗಲ್, ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಕೆಂಗುಂಟೆ ಜಯಪ್ಪ, ಗದಗ ಜಿಲ್ಲಾ ಸಂಚಾಲಕ ದುರುಗೇಶ್, ಸುಂದರಮೂರ್ತಿ ಇವರುಗಳು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಶಿಕ್ಷಣದ ಜೊತೆಗೆ ಮೌಲ್ಯಗಳ ಅಗತ್ಯವಿದೆ : ಗೋವಿಂದಪ್ಪ

ಹೊಸದುರ್ಗ: ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳಿಗೆ ಪಾಠ್ಯ ಜ್ಞಾನ ಮಾತ್ರವಲ್ಲದೆ ನೈತಿಕ ಮೌಲ್ಯಗಳನ್ನೂ ಬೋಧಿಸುವ ಅಗತ್ಯವಿದೆ ಎಂದು ಶಾಸಕ ಬಿ.ಜಿ. ಗೋವಿಂದಪ್ಪ ಹೇಳಿದರು.

ತಾಲೂಕಿನ ಮದುರೆ ದಿಬ್ಬದ ಸಂದೀಪನಿ ಇಂಡಿಯನ್ ಇಂಟನ್ಯಾಷನಲ್ ಶಾಲೆಯಲ್ಲಿ ನಡೆದ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಂದೆ-ತಾಯಿ, ಗುರುಗಳು ಹಾಗೂ ದೇಶದ ಮೇಲಿನ ಪ್ರೀತಿ ಬೆಳೆಸುವ ಶಿಕ್ಷಣ ಅತ್ಯಂತ ಮುಖ್ಯವಾಗಿದೆ. ಕೇವಲ ಹಣ ಸಂಪಾದನೆಗಾಗಿ ಸಂದೀಪನಿ ಶಾಲೆ ಸ್ಥಾಪನೆಯಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಬಡ ಮಕ್ಕಳ ಭವಿಷ್ಯಕ್ಕೆ ಬುನಾದಿ ಹಾಕುವ ಉದ್ದೇಶದಿಂದ ತಾಳಿಕಟ್ಟೆ ಲೋಕೇಶ್ ಅವರು ಈ ಶಿಕ್ಷಣ ಸಂಸ್ಥೆಯನ್ನು ನಿರ್ಮಿಸಿದ್ದಾರೆ ಎಂದು ಪ್ರಶಂಸಿಸಿದರು.

ಸಂದೀಪನಿ ಶಾಲೆ ಶಿಕ್ಷಣ ನೀಡುವುದು ಒಂದು ಮಹತ್ವದ ಸೇವೆಯಾಗಿದ್ದು, ಪೋಷಕರು ತಮ್ಮ ಮಕ್ಕಳನ್ನು ವಿಶ್ವಾಸದಿಂದ ಶಾಲೆಗೆ ಕಳುಹಿಸುತ್ತಿದ್ದಾರೆ. ಶಿಕ್ಷಕರು ಕೂಡ ಅದೇ ಗೌರವದಿಂದ ಮಕ್ಕಳ ಭವಿಷ್ಯ ರೂಪಿಸಲು ಶ್ರಮಿಸುತ್ತಿದ್ದಾರೆ. ಅಂಕಪಟ್ಟಿಗಳಿಗಷ್ಟೇ ಸೀಮಿತವಾಗದೆ, ಸಮಾಜಕ್ಕೆ ಕೊಡುಗೆ ನೀಡುವ ಶಿಕ್ಷಣವೇ ಜೀವನವನ್ನು ಸಾರ್ಥಕಗೊಳಿಸುತ್ತದೆ. ತಾಯಿ-ತಂದೆಯನ್ನು ಗೌರವಿಸುವ ಮೌಲ್ಯಗಳನ್ನು ಕಲಿತವನೇ ಒಳ್ಳೆಯ ನಾಗರಿಕನಾಗಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಸಂದೀಪನಿ ಇಂಟನ್ಯಾಷನಲ್ ಶಾಲೆಯ ಅಧ್ಯಕ್ಷ ತಾಳಿಕಟ್ಟೆ ಲೋಕೇಶ್ ಮಾತನಾಡಿ, ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸಬೇಕೆಂಬ ಉದ್ದೇಶದಿಂದ ಸಿಬಿಎಸ್‌ಇ ಶಾಲೆಯನ್ನು ಪ್ರಾರಂಭಿಸಲಾಗಿದೆ. ಇದರಿಂದ ಸಾವಿರಾರು ಮಕ್ಕಳಿಗೆ ಜೀವನದಲ್ಲಿ ಬೆಳವಣಿಗೆಗೆ ದಾರಿ ಸಿಕ್ಕಿದೆ. ಹಳ್ಳಿಗಳ ವಿದ್ಯಾರ್ಥಿಗಳೇ ವಿಶ್ವ ಮಟ್ಟದಲ್ಲಿ ಸಾಧನೆ ಮಾಡಿರುವ ಇತಿಹಾಸವಿದೆ. ಕೇವಲ ಅಂಕಪಟ್ಟಿಯ ಶಿಕ್ಷಣ ಮಾತ್ರವಲ್ಲದೆ, ಬೌದ್ಧಿಕ ಹಾಗೂ ಜೀವನ ಕೌಶಲ್ಯ ಅಭಿವೃದ್ಧಿಗೆ ನಮ್ಮ ಶಾಲೆಯಲ್ಲಿ ಗಮನ ನೀಡಲಾಗುತ್ತಿದೆ ಎಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಚಂದ್ರಕಲಾ ಲೋಕೇಶ್, ಇಸಿಓ ಶಿಪ್ಪಿರ್ದ, ಸಿಆರ್‌ಪಿ ಮಂಜಪ್ಪ, ವಿಜಯಕುಮಾರ್, ಪ್ರಾಚಾರ್ಯ ಪ್ರಸನ್ನ ಕುಮಾರ್, ಮಮತಾ, ಸಮಾಜ ಸೇವಕ ತುಂಬಿನಕೆರೆ ಬಸವರಾಜ್ ಹಾಗೂ ಶಿಕ್ಷಕರು ಗೀತಾ, ತಸ್ನೀಮ್, ಪೂಜಾ, ಪುರುಷೋತ್ತಮ್, ಶೀಲಾ, ರಮೇಶ್, ತನುಜಾ ಉಪಸ್ಥಿತರಿದ್ದರು.

ಕಿರುಸುದ್ದಿ

ರಾಷ್ಟ್ರೀಯ ಕಾನೂನು ಕಾಲೇಜಿಗೆ ಆಯ್ಕೆ



• **ದಾವಣಗೆರೆ:** ನಗರದ ರೇವತಿ ನಾಯಕ್ ಬೆಂಗಳೂರಿನ ಪ್ರತಿಷ್ಠಿತ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಲು ಅರ್ಹತೆ ಪಡೆದಿದ್ದಾರೆ. ರಾಷ್ಟ್ರ ಮಟ್ಟದ ಕ್ಲ್ಯಾಟ್ ಪ್ರವೇಶ ಪರೀಕ್ಷೆಯಲ್ಲಿ ರೇವತಿ ನಾಯಕ್ 99ನೇ ರ್‍ಯಾಂಕ್ ಪಡೆಯುವ ಮೂಲಕ ಈ ಸಾಧನೆ ಮಾಡಿದ್ದಾರೆ. ಏಷ್ಯಾದಲ್ಲೇ ನಂಬರ್ ಒನ್ ಕಾನೂನು ವಿಶ್ವವಿದ್ಯಾಲಯವೆಂದು ಹೆಸರು ವಾಸಿಯಾಗಿರುವ ಬೆಂಗಳೂರಿನ ಎನ್.ಎಲ್.ಎಸ್.ಐ.ಯು ನಲ್ಲಿ ಪ್ರವೇಶ ಪಡೆಯುತ್ತಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ. ಇವರಿಗೆ ದಾವಣಗೆರೆಯ ಸುರೇಶ್ ಶಾಸ್ತ್ರಿ ತರಬೇತಿ ನೀಡಿದ್ದರು.

ಇಂದು ಕಾಳಿಕಾದೇವಿ ರಥೋತ್ಸವ

• **ದಾವಣಗೆರೆ:** ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಮಾರ್ಚ್ 19ರಂದು ಯುಗಾದಿ ಪಾಡ್ಯ ಪ್ರಯುಕ್ತ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಮ್ಮನವರಿಗೆ ಬೆಳಗ್ಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಮಂಗಳಾರತಿ ಜರುಗಲಿದೆ. ಸಂಜೆ 6.30ಕ್ಕೆ ಶ್ರೀ ಕಾಳಿಕಾದೇವಿ ರಥೋತ್ಸವ ನೆರವೇರಿಸಲಾಗುವುದು. ನಂತರ ಮಹಾ ಮಂಗಳಾರತಿ, ಬೇವು-ಬೆಲ್ಲ ವಿತರಿಸಲಾಗುವುದು ಎಂದು ದೇವಸ್ಥಾನ ಆಡಳಿತ ಸಮಿತಿ ಟ್ರಸ್ಟ್ ತಿಳಿಸಿದೆ.

ಒಂದು ನಾಮಪತ್ರ ಸ್ವೀಕೃತಿ

• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಬುಧವಾರ ಒಂದು ನಾಮಪತ್ರ ಮಾತ್ರ ಸಲ್ಲಿಕೆಯಾಗಿದೆ. ಸುಭಾನ್ ಖಾನ್ ಎಂಬುವರು ಪಕ್ಷೇತರ ಸಾಮಾನ್ಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ವಾಸುದೇವ ರಾಯ್ಕರ್ ಆಯ್ಕೆ

• **ದಾವಣಗೆರೆ:** ಶ್ರೀಗಾಯತ್ರಿ ಪರಿವಾರದ 2026-28ನೇ ಸಾಲಿನ ನೂತನ ಅಧ್ಯಕ್ಷರಾಗಿ ವಾಸುದೇವ ಲಕ್ಷ್ಮಣ್ ರಾಯ್ಕರ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಮಹಾಸಭೆಯಲ್ಲಿ ಇವರನ್ನು ಆಯ್ಕೆ ಮಾಡಲಾಗಿದೆ. ಇನ್ನುಳಿದಂತೆ, ಗೌರವ ಅಧ್ಯಕ್ಷರಾಗಿ ಕೆ.ಹೆಚ್. ಮಂಜುನಾಥ್, ಡಾ. ಸುಶೀಲಮ್ಮ, ಕೋಶಾಧ್ಯಕ್ಷರಾಗಿ ಪುರುಷೋತ್ತಮ ಪಟೇಲ್, ಉಪಾಧ್ಯಕ್ಷರಾಗಿ ಎಂ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿಯಾಗಿ ಸಾಲಿಗ್ರಾಮ ಗಣೇಶ್ ಶೆಣೈ, ಸಂಚಾಲಕರಾಗಿ ಭಾವನ್ನಾರಾಯಣ, ಸಹ ಸಂಚಾಲಕರಾಗಿ ಆರ್.ಎಂ. ಸತೀಶ್, ಸಮಿತಿ ಸದಸ್ಯರಾಗಿ ಎಂ.ಎಸ್. ಪ್ರಸಾದ್, ವಿ. ಕೃಷ್ಣಮೂರ್ತಿ, ಗುರುಮೂರ್ತಿ, ಕೆ.ಸಿ. ಉಮೇಶ್, ಬಿ. ಸತ್ಯನಾರಾಯಣ ಮೂರ್ತಿ ಆಯ್ಕೆಯಾದರು.

ಪಡಿತರ ಹಂಚಿಕೆ

• **ದಾವಣಗೆರೆ:** ಮಾರ್ಚ್ ತಿಂಗಳಿಗೆ ಅನ್ವಯವಾಗುವಂತೆ ವಿವಿಧ ವರ್ಗದ ಪಡಿತರ ಚೀಟಿದಾರರಿಗೆ ಪಡಿತರ ಹಂಚಿಕೆ ಮಾಡಲಾಗಿದೆ. ಅಂತ್ಯೋದಯ ಕಾರ್ಡ್ ದಾರರಿಗೆ 1ರಿಂದ 3 ಸದಸ್ಯರಿರುವ ಕಾರ್ಡಿಗೆ 35 ಕೆ.ಜಿ ಅಕ್ಕಿ, 4 ಸದಸ್ಯರಿರುವ ಪ್ರತಿ ಕಾರ್ಡಿಗೆ 40 ಕೆ.ಜಿ ಅಕ್ಕಿ, 5 ಸದಸ್ಯರಿರುವ ಪ್ರತಿ ಕಾರ್ಡಿಗೆ 50 ಕೆ.ಜಿ ಅಕ್ಕಿ, 6 ಸದಸ್ಯರಿರುವ ಪ್ರತಿ ಕಾರ್ಡಿಗೆ 60 ಕೆ.ಜಿ ಅಕ್ಕಿ, 7 ಸದಸ್ಯರಿರುವ ಪ್ರತಿ ಕಾರ್ಡಿಗೆ 70 ಕೆ.ಜಿ ಅಕ್ಕಿ, 8 ಸದಸ್ಯರಿರುವ ಪ್ರತಿ ಕಾರ್ಡಿಗೆ 80 ಕೆ.ಜಿ ಅಕ್ಕಿ, 9 ಸದಸ್ಯರಿರುವ ಪ್ರತಿ ಕಾರ್ಡಿಗೆ 90 ಕೆ.ಜಿ, 10 ಸದಸ್ಯರಿರುವ ಪ್ರತಿ ಕಾರ್ಡಿಗೆ 100 ಕೆ.ಜಿ ಅಕ್ಕಿ ನೀಡಲಾಗುವುದು. ಯಾವುದೇ ಅಂತರ್ ರಾಜ್ಯ ಅಥವಾ ಜಿಲ್ಲೆಯ ಪಡಿತರ ಚೀಟಿಗಳಿಗೆ ಯಾವುದೇ ನ್ಯಾಯಬೆಲೆ ಅಂಗಡಿಗಳಲ್ಲಿ ಉಚಿತವಾಗಿ ಪಡೆಯಲು ಅವಕಾಶವಿರುತ್ತದೆ ಎಂದು ತಿಳಿಸಿದ್ದಾರೆ.



ದಾವಣಗೆರೆ ನಗರದ ಜಿ.ಎಂ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಸಬಲೀಕರಣ ಕೋಶದ ವತಿಯಿಂದ ವಾಯ್ಸ್ ಆಫ್ ವುಮನ್ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೋಶದ ಅಧ್ಯಕ್ಷೆ ಡಾ. ಶ್ವೇತಾ ಮರೀಗೌಡರ್ ಮತ್ತಿತರರಿದ್ದರು.



ಹೊನ್ನಾಳಿ ಪಟ್ಟಣದ ಶ್ರೀಚನ್ನಪ್ಪಸ್ವಾಮಿ ವಿದ್ಯಾಪೀಠದಲ್ಲಿ ಬುಧವಾರ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಹೋಗುತ್ತಿರುವುದು.



ದಾವಣಗೆರೆ: ತಿಂಗಳ ಅಂಗಳ ಸಾಹಿತ್ಯ ಸಾಂಸ್ಕೃತಿಕ ಬಳಗ ಹಾಗೂ ದಾವಣಗೆರೆ ವಿ-ಒನ್ ಕಾವ್ಯಧಾರೆಯ ಸಹಯೋಗದೊಂದಿಗೆ ಮನೆಯಂಗಳದಲ್ಲಿ ಸಾಹಿತ್ಯೋತ್ಸವ ಕಾರ್ಯಕ್ರಮ ಇತ್ತೀಚೆಗೆ ಚೈತ್ರದ ಚಿಗುರು ಶೀರ್ಷಿಕೆಯಡಿ ನಗರದ ಹೊಂಡದ ಸರ್ಕಲ್ ಸಮೀಪದ ಪತ್ರಕರ್ತ ಎ.ಬಿ. ರುದ್ರಮ್ಮನವರ ನಿವಾಸದಲ್ಲಿ ಜರುಗಿತು. ಬಳಗದ ಸಂಚಾಲಕ ಗಂಗಾಧರ ಬಿ.ಎಲ್. ನಿಟ್ಟೂರು, ಹಿರಿಯ ಲೇಖಕ ಜೆ.ಕೆ. ಕುಲಕರ್ಣಿ, ಗಾಯಕರಾದ ನಾಗೇಶ್, ಸುಜಾತಮ್ಮ, ಮಲ್ಲಮ್ಮ ನಾಗರಾಜ್, ಸುಧಾರಾಣಿ ಇದ್ದರು.

ಜಿಲ್ಲಾ ಚುನಾವಣಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ

ಸಿಬ್ಬಂದಿ ಕೊರತೆ ಆಗದಂತೆ ಕ್ರಮ ವಹಿಸಿ



• **ದಾವಣಗೆರೆ:** ಎಸ್ಸೆಸ್ಸೆಲ್ಸಿ ಪರೀಕ್ಷೆ, ಜನಗಣತಿ ಹಾಗೂ ಪಿಯುಸಿ ಮೌಲ್ಯಮಾಪನ ಕಾರ್ಯಗಳ ನಡುವೆಯೂ ಉಪಚುನಾವಣೆಗೆ ಸಿಬ್ಬಂದಿ ಕೊರತೆ ಉಂಟಾಗದಂತೆ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಗಂಗಾಧರಸ್ವಾಮಿ ತಿಳಿಸಿದರು.



ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಚುನಾವಣೆಗೆ ಸಂಬಂಧಿಸಿದಂತೆ ಇವಿಎಂ ಯಂತ್ರಗಳ ಮೊದಲ ಹಂತದ ರ್‍ಯಾಂಡಮೈಸೇಶನ್ ಪ್ರಕ್ರಿಯೆಯನ್ನು ಚುನಾವಣಾ ಆಯೋಗ ನೇಮಿಸಿದ ಇಂಜಿನಿಯರ್‌ಗಳು ತಪಾಸಣೆ ನಡೆಸಿ ಪ್ರಮಾಣೀಕರಿಸಿದ್ದಾರೆ. ಎಲ್ಲಾ ಪ್ರಕ್ರಿಯೆಗಳನ್ನು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಪಾರದರ್ಶಕವಾಗಿ ನಡೆಸಲಾಗಿದೆ ಎಂದರು.


284 ಮತಗಟ್ಟೆಗಳಿಗಾಗಿ ತಲಾ 570 ಬಿಯು, ಸಿಯು ಮತ್ತು ವಿವಿ ಪ್ಯಾಟ್ ಯಂತ್ರಗಳನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ತರಬೇತಿಗಾಗಿ ಶೇ.10ರಷ್ಟು ಯಂತ್ರಗಳನ್ನು ಮೀಸಲಿಡಲಾಗಿದೆ. ರ್‍ಯಾಂಡಮೈಸೇಶನ್ ಪ್ರಕ್ರಿಯೆಯ ನಂತರ ಯಂತ್ರಗಳನ್ನು ಪೊಲೀಸ್ ಭದ್ರತೆಯಲ್ಲಿ ಡಿ.ಆರ್.ಆರ್ ಶಾಲೆಯಲ್ಲಿನ ಭದ್ರತಾ ಕೊಠಡಿಯಲ್ಲಿ ಇರಿಸಲಾಗುವುದು. ಮುಂದಿನ ಹಂತದಲ್ಲಿ ಎರಡನೇ ರ್‍ಯಾಂಡಮೈಸೇಶನ್ ಪ್ರಕ್ರಿಯೆ ನಡೆಯಲಿದ್ದು, ಆ ಸಂದರ್ಭದಲ್ಲಿ ಅಭ್ಯರ್ಥಿಗಳ ಪಟ್ಟಿ ಮತ್ತು ಬ್ಯಾಲೆಟ್ ಪೇಪರ್ ಅಳವಡಿಸುವ ಕಾರ್ಯ ನಡೆಯಲಿದೆ ಎಂದು ಅವರು ತಿಳಿಸಿದರು.

ಜಿಲ್ಲೆಗೆ ಸುಮಾರು 361 ಪಿ.ಆರ್.ಒ, 341 ಎ.ಪಿ.ಆರ್.ಒ ಸೇರಿದಂತೆ ಒಟ್ಟು 1,364 ಚುನಾವಣಾ ಸಿಬ್ಬಂದಿಯ ಅಗತ್ಯವಿದೆ. ಜಗಳೂರು, ಹರಿಹರ, ಚನ್ನಗಿರಿ ತಾಲೂಕುಗಳ ಉಪನ್ಯಾಸಕರನ್ನು ಸಹ ಬಳಸಿಕೊಳ್ಳಲಾಗುತ್ತಿದೆ. ಈವರೆಗೆ 20,500 ರೂ. ಮೌಲ್ಯದ ಒಟ್ಟು 20.8 ಲೀಟರ್ ಅಕ್ರಮ ಮದ್ಯ ವಶಪಡಿಸಿಕೊಳ್ಳಲಾಗಿದೆ. ಚುನಾವಣೆಯ ಸಾಮಾನ್ಯ ವೀಕ್ಷಕರನ್ನಾಗಿ ಕುಮಾರ್ ರಮಣಿಕಾಂತ್ ಅವರನ್ನು ಚುನಾವಣಾ ಆಯೋಗ ನೇಮಿಸಿದೆ. ಉಪಚುನಾವಣೆಗೆ ಸಂಬಂಧಿಸಿದ ದೂರುಗಳಿದ್ದಲ್ಲಿ ದಾವಣಗೆರೆ ಸರ್ಕ್ಯೂಟ್ ಹೌಸ್ ಕೊಠಡಿ ಸಂಖ್ಯೆ 1ರಲ್ಲಿ ಅಥವಾ ದೂ:63609 02060 ಸಂಪರ್ಕಿಸುವಂತೆ ಅವರು ಮನವಿ ಮಾಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಗಿತ್ತೆ ಮಾಧವ ವಿಠಲರಾವ್ ಮಾತನಾಡಿ, ಕಳೆದ ಚುನಾವಣೆಯಲ್ಲಿ ಶೇ.70ರಷ್ಟು ಮತದಾನವಾಗಿದ್ದು, ನಗರ ಪ್ರದೇಶದಲ್ಲಿ ಶೇ.49ರಷ್ಟು ಮಾತ್ರ ಮತದಾನವಾಗಿದೆ. ಈ ಬಾರಿ ನಗರ ಪ್ರದೇಶದಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು ಬಸ್ ನಿಲ್ದಾಣ, ಕಾಲೇಜು ಮತ್ತು ಜನಸಂದಣಿ ಇರುವ ಕಡೆ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಉಪ ಚುನಾವಣೆಯಲ್ಲಿ ಶೇ.90-95ರಷ್ಟು ಮತದಾನ ಪ್ರಮಾಣವನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

> **ಮಾರ್ಚ್ 19ರಂದು ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಪಿಯುಸಿ ಉಪನ್ಯಾಸಕರಿಗೆ ಚುನಾವಣಾ ತರಬೇತಿ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಉಪನ್ಯಾಸಕರು ಮತ್ತು ಸಿಬ್ಬಂದಿಗಳು ತರಬೇತಿಗೆ ಕಡ್ಡಾಯವಾಗಿ ಹಾಜರಾಗಬೇಕು. ಸಣ್ಣಪುಟ್ಟ ಕಾರಣ ನೀಡಿ ಚುನಾವಣೆ ಕರ್ತವ್ಯದಿಂದ ನುಣುಚಿಕೊಳ್ಳಲು ಪ್ರಯತ್ನಿಸಿದರೆ ಶಿಸ್ತು ಕ್ರಮ ಜರುಗಿಸಲಾಗುವುದು ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು ವಿಶೇಷಚೇತನರಿಗೆ ಮಾತ್ರ ನಿಯಮಾನುಸಾರ ವಿನಾಯಿತಿ ನೀಡಲಾಗುವುದು.**
>
> ■ **ಜಿ.ಎಂ. ಗಂಗಾಧರಸ್ವಾಮಿ, ಡಿಸಿ**



ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭ

• **ದಾವಣಗೆರೆ:** ಜಿಲ್ಲೆಯಾದ್ಯಂತ ಬುಧವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭವಾಗಿದ್ದು, ಮೊದಲ ದಿನದ ಪ್ರಥಮ ಭಾಷೆ ಕನ್ನಡ ವಿಷಯದ ಪರೀಕ್ಷೆಗೆ 20,744 ವಿದ್ಯಾರ್ಥಿಗಳು ಹಾಜರಾಗಿದ್ದರು.

ಜಿಲ್ಲೆಯ ಒಟ್ಟು 81 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗೆ ನೋಂದಾಯಿಸಿಕೊಂಡವರಲ್ಲಿ ಶೇ.98.98ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರೆ, 226 ವಿದ್ಯಾರ್ಥಿಗಳು ಅಂದರೆ ಶೇ.1.08ರಷ್ಟು ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು.

ನಗರದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪ್ರಥಮ ಭಾಷೆಯ ಪರೀಕ್ಷೆ ಬಿಗಿ ಭದ್ರತೆಯಲ್ಲಿ ಆರಂಭವಾಯಿತು. ಪರೀಕ್ಷೆಗೆ ಆಗಮಿಸಿದ ವಿದ್ಯಾರ್ಥಿಗಳನ್ನು ಪ್ರವೇಶದ ವೇಳೆ ಪರಿಶೀಲನೆ ನಡೆಸಿ, ಪರೀಕ್ಷಾ ಕೊಠಡಿಗಳಿಗೆ ಕಳುಹಿಸಲಾಯಿತು. ನಿಯಮಾನುಸಾರ ವಿದ್ಯಾರ್ಥಿಗಳ ಬ್ಯಾಗ್‌ಗಳನ್ನು ಪರೀಕ್ಷಾ ಕೇಂದ್ರದ ಹೊರಗಡೆ ಇಡಲು ಸೂಚಿಸಲಾಯಿತು. ಕೆಲ ವಿದ್ಯಾರ್ಥಿಗಳು ತಂದಿದ್ದ ಮೊಬೈಲ್ ಫೋನ್‌ಗಳನ್ನು ಅಧಿಕಾರಿಗಳು ವಶಕ್ಕೆ ಪಡೆದರು.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಯಾವುದೇ ಅಕ್ರಮಗಳಿಗೆ ಅವಕಾಶವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಪರೀಕ್ಷಾ ಕೇಂದ್ರಗಳ ಚಲನವಲನ ವೀಕ್ಷಿಸಲು ನಗರದ ಸ್ಮಾರ್ಟ್ ಸಿಟಿ ಆಡಳಿತ ಕಚೇರಿಯಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅಕ್ರಮ ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ಮಲೆಬೆನ್ನೂರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವೈದ್ಯೆ ಡಾ. ಲಕ್ಷ್ಮೀದೇವಿ ಅವರು ವರ್ಗಾವಣೆಗೊಂಡ ಹಿನ್ನೆಲೆ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ಡಾ. ಪ್ರಶಾಂತ್, ಡಾ. ರಮೇಶ್ ಹಾಗೂ ಸಿಬ್ಬಂದಿಗಳಿದ್ದರು.

ಮಳೆಯನ್ನು ಲೆಕ್ಕಿಸದೆ ಮಾರುಕಟ್ಟೆಯಲ್ಲಿ ಹಬ್ಬದ ಖರೀದಿ ಜೋರು

ನೂತನ ಸಂವತ್ಸರ ಸ್ವಾಗತಕ್ಕೆ ಭರದ ಸಿದ್ಧತೆ

▸ **ಪವಮಾನ ಐರಣಿ**

• **ದಾವಣಗೆರೆ:** ನೂತನ ಸಂವತ್ಸರ ಯುಗಾದಿ ಹಿನ್ನೆಲೆ ಆಚರಣೆಗೆ ಜಿಲ್ಲೆಯಲ್ಲಿ ಭರದ ಸಿದ್ಧತೆ ನಡೆದಿದ್ದು, ಬುಧವಾರ ಮಾರುಕಟ್ಟೆಯಲ್ಲಿ ಹಬ್ಬದ ಖರೀದಿ ಭರಾಟೆ ಜೋರಾಗಿತ್ತು.

ಹಿಂದೂ ಸಂಪ್ರದಾಯದ ಹೊಸ ವರ್ಷದ ಹಬ್ಬವಾದ ಯುಗಾದಿ ಅಂಗವಾಗಿ ನಗರದಲ್ಲಿ ಹಬ್ಬದ ಸಂಭ್ರಮ ಕಳೆಗಟ್ಟಿದೆ. ಕಳೆದೆರೆಡು ದಿನಗಳಿಂದ ಸಂಜೆ ಸಮಯದಲ್ಲಿ ಮಳೆ ಸುರಿಯುತ್ತಿರುವ ಕಾರಣ ಜನರು ಮುಂಜಾಗ್ರತೆಯಾಗಿ ಹಬ್ಬದ ಖರೀದಿಯಲ್ಲಿ ತೊಡಗಿದ್ದರು. ಮಾರುಕಟ್ಟೆಯಲ್ಲಿ ಹೂವು-ಹಣ್ಣುಗಳ ಮಾರಾಟ ಭರ್ಜರಿಯಾಗಿ ನಡೆಯಿತು. ನಗರದ ಗಡಿಯಾರ ಕಂಬ, ಮಂಡಿಪೇಟೆ, ಚೌಕಿಪೇಟೆ, ಕೆ.ಆರ್ ಮಾರುಕಟ್ಟೆ, ಹದಡಿ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಹೂವು-ಹಣ್ಣಿನ ವ್ಯಾಪಾರಿಗಳು ವಹಿವಾಟಿನಲ್ಲಿ ತೊಡಗಿದ್ದರು. ಮಧ್ಯಾಹ್ನದ ಬಿರುಬಿಸಿಲಿನ ಸಮಯ ಹೊರತುಪಡಿಸಿ ಬೆಳಗ್ಗೆ ಹಾಗೂ ಸಂಜೆ ವೇಳೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಮಾರುಕಟ್ಟೆಯತ್ತ ಮುಖ ಮಾಡಿದ್ದರು.

ಹಬ್ಬದ ಹಿನ್ನೆಲೆಯಲ್ಲಿ ಹೂವಿನ ಮಾರುಕಟ್ಟೆಯಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಹಬ್ಬಕ್ಕೆ ಬೇಕಾದ ದಿನಸಿ ಪದಾರ್ಥ, ಹೂವು, ಹಣ್ಣು, ಮಾವಿನ ತೋರಣ, ಬೇವಿನ ಸೊಪ್ಪು, ಪೂಜೆ ಸಾಮಗ್ರಿ ಸಹಿತ ಅಗತ್ಯ ವಸ್ತುಗಳನ್ನು ಖರೀದಿಸಿದರು. ಹೊಸ ವರ್ಷಕ್ಕೆ ಹೊಸ ಬಟ್ಟೆ ಕೊಳ್ಳುವ ಸಂಪ್ರದಾಯ ಇರುವುದರಿಂದ ಬಟ್ಟೆಯಂಗಡಿಗಳಲ್ಲಿ ಜನದಟ್ಟಣೆ ಹೆಚ್ಚಾಗಿತ್ತು. ಗಂಡುಮಕ್ಕಳು ಹೊಸ ವರ್ಷಕ್ಕೆ ಉಡದಾರ ಬದಲಿಸುವುದರಿಂದ ಅಲ್ಲಲ್ಲಿ ಉಡದಾರ ವ್ಯಾಪಾರಿಗಳು ಕಂಡುಬಂದರು. ಸಂಜೆ ನಂತರ ಮೋಡ ಕವಿದ ವಾತಾವರಣ, ಆಗಾಗ ಗುಡುಗು-ಸಿಡಿಲಿನ ಸದ್ದಿನಿಂದಾಗಿ ಮಳೆ ಬರುವ ಲಕ್ಷಣವಿದ್ದ ಕಾರಣ ಮಾರುಕಟ್ಟೆ ಥಂಡಾ ಹೊಡೆದಿತ್ತು.

ಯುಗಾದಿ ಪ್ರಯುಕ್ತ ಮಾರುಕಟ್ಟೆಯಲ್ಲಿ ಹೂವು-ಹಣ್ಣುಗಳ ಬೆಲೆಯಲ್ಲಿ ಕೊಂಚ ಏರಿಕೆಯಾಗಿತ್ತು. ಚೆಂಡು ಹೂವು ಹೊರತುಪಡಿಸಿ ಬಹುತೇಕ ಹೂವುಗಳು ಪ್ರತಿ ಮಾರಿಗೆ 80-100 ರೂ. ಬೆಲೆ ಕಂಡುಕೊಂಡಿದ್ದವು. ಇನ್ನುಳಿದಂತೆ ಬಹುತೇಕ ಹಣ್ಣುಗಳ ಬೆಲೆಯೂ ಪ್ರತಿ ಕೆ.ಜಿ ಗೆ 100ರ ಆಸುಪಾಸಿನಲ್ಲಿತ್ತು. ಪ್ರತಿ ಮಾರು ಸೇವಂತಿ 80 ರೂ., ಚೆಂಡು ಹೂವು 30 ರೂ., ಮಲ್ಲಿಗೆ 120 ರೂ., ಪ್ರತಿ ಕೆ.ಜಿ ಬಟನ್ ರೋಸ್ 400 ರೂ., ಸೇಬು, ಸೀತಾಫಲ ತಲಾ 100 ರೂ., ಬಾಳೆಹಣ್ಣು 100 ರೂ., ದಾಳಿಂಬೆ 150 ರೂ., ಕಿತ್ತಳೆ, ಮೋಸಂಬಿ ಮತ್ತು ಸಪೋಟ 80 ರೂ., ದ್ರಾಕ್ಷಿ 120 ರೂ. ಹಾಗೂ ಮಿಕ್ಸ್ ಹಣ್ಣುಗಳು 150 ರೂ.ಗಳಂತೆ ಮಾರಾಟವಾದವು. ಹಬ್ಬಕ್ಕೆ ಬೆಲೆ ಏರಿಕೆಯ ಅನುಭವವಿರುವ ಜನರು ಅನಿವಾರ್ಯವಾಗಿ ತಮ್ಮ ಅಗತ್ಯಕ್ಕೆ ತಕ್ಕಂತೆ ವಸ್ತುಗಳನ್ನು ಖರೀದಿಸಲು ಚೌಕಾಶಿ ಮಾಡುತ್ತಿದ್ದರು.



ದಿಗಂತ ವಿಶೇಷ

ಯುಗಾದಿ ಹಬ್ಬದಲ್ಲಿ ಬೇವು-ಬೆಲ್ಲ, ಶ್ಯಾವಿಗೆ ಊಟದ್ದೇ ವಿಶೇಷ. ಅದರಂತೆ ದಿನಸಿ ಅಂಗಡಿಗಳಲ್ಲಿ ಬೇಳೆ, ಬೆಲ್ಲದ ವಹಿವಾಟು ಭರಾಟೆಯಿಂದ ಕೂಡಿತ್ತು. ಕೆಟಿಜೆ ನಗರದ ಶ್ಯಾವಿಗೆ ಓಣಿ, ಹಳೇ ಬೇತೂರು ರಸ್ತೆಯ ಶಾಸ್ತ್ರೀ ಕಣ ಪ್ರದೇಶದಲ್ಲಿ ತಾಜಾ ಶ್ಯಾವಿಗೆ ಮಾರಾಟ ಮಾಡಲಾಗುತ್ತಿತ್ತು. ಜನರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಖರೀದಿ ಮಾಡುತ್ತಿರುವುದು ಕಂಡುಬಂತು. ಮನೆಯಲ್ಲೇ ತಯಾರಿಸಿದ ಶ್ಯಾವಿಗೆಗೆ ಹೆಚ್ಚು ಮೆಚ್ಚುಗೆ ವ್ಯಕ್ತವಾಗಿದ್ದು, ಜನರು ಉತ್ಸಾಹದಿಂದ ಖರೀದಿ ಮಾಡುತ್ತಿರುವ ದೃಶ್ಯ ಸಾಮಾನ್ಯವಾಗಿತ್ತು. ಹಬ್ಬದ ನಿಮಿತ್ತ ಅಗತ್ಯ ವಸ್ತುಗಳ ಬೆಲೆಗಳಲ್ಲಿ ಸಾಮಾನ್ಯಕ್ಕಿಂತ ಸ್ವಲ್ಪ ಏರಿಕೆ ಕಂಡುಬಂದರೂ, ಹಿಂದಿನ ಹಬ್ಬಗಳಿಗೆ ಹೋಲಿಸಿದರೆ ಬೆಲೆ ಕೊಂಚ ಕಡಿಮೆಯೇ ಇತ್ತು. ಹೀಗಾಗಿ ಜನರು ಉತ್ಸಾಹದಿಂದ ಖರೀದಿಯಲ್ಲಿ ತೊಡಗಿಸಿಕೊಂಡಿದ್ದರು.



ದಾವಣಗೆರೆ ತಾಲೂಕಿನ ಕಕ್ಕರಗೊಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಹೆಚ್.ಪಿ.ವಿ ಲಸಿಕಾ ಅಭಿಯಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕೇಂದ್ರದ ಹಿರಿಯ ಆಡಳಿತ ವೈದ್ಯಾಧಿಕಾರಿ ಡಾ.ಎಲ್.ಡಿ. ವೆಂಕಟೇಶ್ ಮಾತನಾಡಿದರು. ಡಾ. ಶಿಲ್ಪ, ಡಾ. ವರ್ಷ ಮತ್ತಿತರರಿದ್ದರು.



ತ್ಯಾವಣಿಗೆಯಲ್ಲಿ ಪುನೀತ್ ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ಹಮ್ಮಿಕೊಂಡಿದ್ದ ಕವಿಗೋಷ್ಠಿ, ಕವನ ಸಂಕಲನ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಮಂದಾರ ಶಾಲೆಯ ಮುಖ್ಯ ಶಿಕ್ಷಕಿ ವೀಣಾ ಮಂಜುನಾಥ್, ಬಿ.ಇಡಿಯಲ್ಲಿ ರ್‍ಯಾಂಕ್ ಗಳಿಸಿರುವ ಚನ್ನಗಿರಿಯ ನೂರ್ ಜಬೀಯ ಖಾನಂ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಹೆಚ್.ಎಂ.ಸಿದ್ದಯ್ಯ ಇವರನ್ನು ಸನ್ಮಾನಿಸಲಾಯಿತು.



ಹೆಚ್ಚು ಪಾಂಡಿತ್ಯ ಹೊಂದಿರುವ ಸರ್ಕಾರಿ ಶಿಕ್ಷಕರು: ದೀಪಕ್

• **ಹರಿಹರ:** ಸರ್ಕಾರಿ ಶಾಲೆಯ ಶಿಕ್ಷಕರು ಹೆಚ್ಚಿನ ಪಾಂಡಿತ್ಯವನ್ನು ಹೊಂದಿದವರಾಗಿದ್ದು, ಸರ್ಕಾರಿ ಶಾಲೆಗಳಲ್ಲಿ ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳ ಕಲಿಕೆಗೆ ಹೆಚ್ಚು ಅವಕಾಶವಿದೆ ಎಂದು ಬೆಂಗಳೂರಿನ ನೋವೆಲ್ ಹೋಪ್ ಫೌಂಡೇಶನ್‌ನ ಸಿಆರ್‌ಎಸ್ ಎಕ್ಸಿಕ್ಯೂಟಿವ್ ದೀಪಕ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಹಳ್ಳದಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ಲ ಮಕ್ಕಳಿಗೆ ಶಾಲಾ ಬ್ಯಾಗ್ ವಿತರಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಯ ಶಿಕ್ಷಕರು ಹೆಚ್ಚಿನ ಪಾಂಡಿತ್ಯವನ್ನು ಹೊಂದಿದವರು. ಶಾಲೆಗಳು ಭಾಷೆ ಸಂಸ್ಕೃತಿ ಆಚಾರ ವಿಚಾರ ಗುರು ಹಿರಿಯರಿಗೆ ಗೌರವ ನೀಡುವ ಗುಣಗಳನ್ನು ಬೆಳೆಸುತ್ತಾ ಬಂದಿವೆ. ಮಕ್ಕಳು ದೇಶದ ಉಜ್ವಲ ಪ್ರಜೆಗಳಾಗಿ ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಕೀರ್ತಿ ತರುವಂತಾಗಬೇಕು ಎಂದರು.

ನಂತರ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಹೀರುನಾಯಕ್ ಮಾತನಾಡಿದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಮೆಹರ್ವಾಡೆ, ಮುಖ್ಯ ಶಿಕ್ಷಕಿ ಗಿರಿಜಮ್ಮ, ಶಿಕ್ಷಕರುಗಳಾದ ರಾಮಪ್ಪ ಗೋಣೇರ, ಎ.. ಗಿರೀಶ್, ಹೀರು ನಾಯ್ಕ, ಆನಂದ ಭೂತರೆಡ್ಡಿ, ಪ್ರವೀಣ, ರಾಘವೇಂದ್ರ, ಶಶಿಕುಮಾರ ಇದ್ದರು.

ಜಿಲ್ಲೆಯ ವಿವಿಧೆಡೆ ದಿಢೀರ್ ಆಲಿಕಲ್ಲು ಮಳೆ

• **ದಾವಣಗೆರೆ / ಮಾಯಕೊಂಡ:** ನಗರ, ತಾಲೂಕು ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ದಿಢೀರ್ ಮಳೆಯಾಗಿದ್ದು, ಹಲವೆಡೆ ಆಲಿಕಲ್ಲು ಮಳೆಯಾಗುವ ಮೂಲಕ ಆಹ್ಲಾದಕರ ವಾತಾವರಣ ಸೃಷ್ಟಿಯಾಗಿತ್ತು.

ತಾಲೂಕಿನ ಗುಡಾಳು ಹಾಗೂ ಸುತ್ತಮುತ್ತ ಹೆಂಚಿನ ಮನೆ, ಸಿಮೆಂಟ್ ಶೀಟ್ ಮನೆಗಳ ಮೇಲೆ ಭಾರೀ ಸದ್ದು ಮಾಡುತ್ತಾ ಆಕಾಶದಿಂದ ಆಲಿಕಲ್ಲುಗಳು ಬೀಳುತ್ತಿದ್ದುದು ಮಕ್ಕಳ ಸಂಭ್ರಮ ಹೆಚ್ಚಿಸಿದರೆ, ಹಿರಿಯರಿಗೆ ದೊಡ್ಡ ತಲೆ ನೋವು ತಂದಿತ್ತು. ನೋಡನೋಡುತ್ತಿದ್ದಂತೆ ಮನೆಗಳ ಮೆಟ್ಟಿಲುಗಳಿಂದ ಮಳೆ ನೀರಿನ ಜೊತೆಗೆ ಗೋಲಿ ಗಾತ್ರದ ಆಲಿಕಲ್ಲುಗಳು ಇಳಿಜಾರು ಪ್ರದೇಶಕ್ಕೆ ಹರಿದು ಹೋಗುತ್ತಿದ್ದುದು, ಮಕ್ಕಳನ್ನು ಹಿರಿಯರು ಮನೆಯ ಒಳಗೆ ಇರುವಂತೆ ಜೋರು ಮಾಡಿ ಕೂಡಿಸುತ್ತಿದ್ದುದು ಸಾಮಾನ್ಯವಾಗಿತ್ತು.

ಆಲಿಕಲ್ಲು ಹೊಡೆತಕ್ಕೆ ಅನೇಕ ಮರ-ಗಿಡಗಳ ಎಲೆಗಳು ಉದುರಿ ಬೀಳುತ್ತಿದ್ದು, ಕೆಲವು ಕಡೆ ವಾಹನಗಳಿಗೆ ಸಣ್ಣಪುಟ್ಟ ಹಾನಿಯಾದ ಬಗ್ಗೆ ವರದಿಯಾಗಿದೆ. ಹೆಬ್ಬಾಳ್, ಆನಗೋಡು, ಮಾಯಕೊಂಡ, ಹುಚ್ಚವ್ವನಹಳ್ಳಿ, ಹೆದ್ನೆ, ಅಣಜಿ ಭಾಗದಲ್ಲೂ ಮಳೆಯಾಗಿದೆ. ದಾವಣಗೆರೆ ನಗರದಲ್ಲೂ ಮಳೆಯ ಆರ್ಭಟ ಜೋರಾಗಿತ್ತು.



ಹಾರಿ ಹೋದ ಶೆಡ್‌ಗಳ ಮೇಲ್ಛಾವಣಿ: ಪರಶುರಾಂಪುರ ಪಕ್ಕದ ಡಾಬಾ ಹಾಗೂ ತಾತ್ಕಾಲಿಕ ಶೆಡ್‌ಗಳ ಮೇಲ್ಛಾವಣಿ ನೂರಾರು ಅಡಿ ದೂರಕ್ಕೆ ಹಾರಿ ಹೋಗಿವೆ. ಇದರಿಂದಾಗಿ ರಸ್ತೆ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿದ್ದು, ವಾಹನ ಸವಾರರು ಜೀವಭಯದಲ್ಲಿ ಆಶ್ರಯ ಪಡೆದ ಪ್ರಸಂಗಗಳು ನಡೆದವು.

ಬಿರುಗಾಳಿಯ ಹೊಡೆತಕ್ಕೆ ಸುಮಾರು 10ಕ್ಕೂ ಹೆಚ್ಚು ಸಿಮೆಂಟ್ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಕೆಲವು ಕಡೆಗಳಲ್ಲಿ ವಿದ್ಯುತ್ ಕಂಬಗಳು ನೇರವಾಗಿ ರಸ್ತೆಯಲ್ಲಿ ನಿಂತಿದ್ದ ಬೈಕ್ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಬಿದ್ದಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ, ಮುಂಜಾಗ್ರತಾ ಕ್ರಮವಾಗಿ ಮಾಯಕೊಂಡ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಯಿತು.

ಅಕಾಲಿಕವಾಗಿ ಅಪ್ಪಳಿಸಿದ ಮಳೆಯು ರೈತರ ನಿದ್ದೆಗೆಡಿಸಿದೆ. ಅಡಿಕೆ ತೋಟ ಮತ್ತು ಇತರ ಬೆಳೆಗಳಿಗೆ ಹಾನಿಯಾಗಿರುವ ಆತಂಕ ಎದುರಾಗಿದೆ. ರಸ್ತೆಗಳ ಮೇಲೆ ಬಿದ್ದಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸುವ ಕಾರ್ಯದಲ್ಲಿ ಬೆಸ್ಕಾಂ ಸಿಬ್ಬಂದಿ ತೊಡಗಿದ್ದಾರೆ.

ಮುಸ್ಲಿಂ ಸಮುದಾಯದ ಸಭೆಯಲ್ಲಿ ಕಾಂಗ್ರೆಸ್ ಟಿಕೆಟ್ ಗಲಾಟೆ

• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಉಪಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಟಿಕೆಟ್ ಗಲಾಟೆ ಮತ್ತಷ್ಟು ತೀವ್ರವಾಗಿದ್ದು, ಇಮಾಮ್ ನಗರದಲ್ಲಿರುವ ನೂರಾನಿ ಶಾದಿ ಮಹಲ್ ಬಳಿ ಬುಧವಾರ ನಡೆದ ಮುಸ್ಲಿಂ ಸಮುದಾಯದ ಸಭೆಯಲ್ಲಿ ಇದೇ ವಿಚಾರಕ್ಕೆ ವಾಗ್ವಾದ ಉಂಟಾಗಿದೆ.

ಸಭೆಯಲ್ಲಿ ಮುಸ್ಲಿಂ ಸಮಾಜದ ಮುಖಂಡ ದಾದು ಸೇಠ್ ದಾವಣಗೆರೆ ದಕ್ಷಿಣಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ ಪರವಾಗಿ ಬ್ಯಾಟಿಂಗ್ ಮಾಡಿದರು. ಕ್ಷೇತ್ರಕ್ಕೆ ಸಮರ್ಥ ಸೂಕ್ತ ಅಭ್ಯರ್ಥಿ ಅಂತಾ ದಾದು ಸೇಠ್ ಹೇಳುತ್ತಿದ್ದು ಸಭೆಯಲ್ಲಿ ವಾಗ್ವಾದಕ್ಕೆ ಕಾರಣವಾಯಿತು. ದಾದು ಸೇಠ್ ಮಾತಿಗೆ ವಿರೋಧ ವ್ಯಕ್ತಪಡಿಸಿದ ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ಬೆಂಬಲಿಗರು, ನಮ್ಮ ಸಮಾಜದವರಿಗೇ ಟಿಕೆಟ್ ಕೇಳಬೇಕಿತ್ತು. ಬೇರೆಯವರಿಗೆ ಯಾಕೆ ಬೆಂಬಲ? ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈವರೆಗೆ ಶಾಮನೂರು ಕುಟುಂಬದ ಸೇವೆ ಮಾಡಿದ್ದು ಸಾಕಾಗಿಲ್ವಾ? ನಮ್ಮ ಸಮುದಾಯದವರಿಗೇ ಅವಕಾಶ ಸಿಗಬೇಕು ಎಂದು ಕೆಲವರು ಒತ್ತಾಯಿಸಿದರು. ಸಚಿವರ ಬೆಂಬಲಿಗರಾಗಿದ್ದರೂ ಸಮುದಾಯದ ಹಿತದೃಷ್ಟಿಯಿಂದಲೇ ತೀರ್ಮಾನ ಕೈಗೊಳ್ಳಬೇಕು ಎಂಬ ಅಭಿಪ್ರಾಯವೂ ಕೆಲವರಿಂದ ವ್ಯಕ್ತವಾಯಿತು. ಈ ವೇಳೆ ಶಾಮನೂರು ಹಾಗೂ ಜಬ್ಬಾರ್ ಬಣದ ನಡುವೆ ಮಾತಿನ ಚಕಮಕಿ ಉಂಟಾಗಿ, ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ತೀವ್ರ ವಾಗ್ವಾದ ಮುಂದುವರೆಯಿತು. ಕಾಂಗ್ರೆಸ್ ಟಿಕೆಟ್ ವಿಚಾರಕ್ಕೆ ಸಂಬಂಧಿಸಿದಂತೆ ಉಭಯ ಬಣಗಳ ನಡುವೆ ದಿನದಿಂದ ದಿನಕ್ಕೆ ದ್ವೇಷಮಯ ವಾತಾವರಣ ಹೆಚ್ಚುತ್ತಿರುವುದಕ್ಕೆ ಸಭೆ ಸಾಕ್ಷಿಯಾಯಿತು.



ಕಿರುಸುದ್ದಿ

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-59,009-86,340	ರಾಶಿ-34,989-51,689
ರಾಶಿ-45,199-54,009	ಚಾಲಿ-41,877-41,877
ಬೆಟ್ಟೆ-58,610-58,610	ಕೆಂಪುಗೋಟು-23,999-37,199
ಗೊರಬಲು-19,000-36,399	ಬಿಳಿಗೋಟು-29,899-30,266
	ಸಿಪ್ಪೆಗೋಟು-21,615-21,615

ಎಸೆಸೆಲ್ಸಿ ಪರೀಕೆ ಬರೆದ 22,429 ವಿದ್ಯಾರ್ಥಿಗಳು

• ಶಿವಮೊಗ್ಗ: ಮಾರ್ಚ್ 18ರ ಬುಧವಾರ ಜಿಲ್ಲೆಯಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಒಟ್ಟು 22,621 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, 22,429 ವಿದ್ಯಾರ್ಥಿ ಗಳು ಪರೀಕ್ಷೆಗೆ ಹಾಜರಾಗಿರುತ್ತಾರೆ. ಒಟ್ಟು 192 ವಿದ್ಯಾರ್ಥಿಗಳು ಗೈರು ಹಾಜರಾಗಿರುತ್ತಾರೆ ಎಂದು ಡಿಡಿಪಿಐ ಮಂಜುನಾಥ್ ತಿಳಿಸಿದ್ದಾರೆ.

ನೀರಿನ ಕಂದಾಯ ಪಾವತಿಗೆ ವಿಶೇಷ ಕೌಂಟರ್

• ಶಿವಮೊಗ್ಗ : ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ನಿರ್ವಹಣಾ ವಿಭಾಗ ಮತ್ತು ಉಪ ವಿಭಾಗ ವತಿಯಿಂದ ಮಾರ್ಚ್ 22 ರಂದು ನೀರಿನ ಕಂದಾಯ ಮತ್ತು ಬಾಕಿ ಕರ ವಸೂಲಾತಿ ಮಾಡಲು ವಿಶೇಷ ವಸೂಲಾತಿ ಕೌಂಟರ್‌ಗಳನ್ನು ರಾಗಿಗುಡ್ಡ ಕೊನೆ ಬಸ್ ಸ್ಟಾಪ್ ಹತ್ತಿರ, ಗೋಪಾಲ ಕೊನೆ ಬಸ್ ಸ್ಟಾಪ್ ಹತ್ತಿರ, ಗಾಂಧಿ ಬಜಾರ್ ಬಸವೇಶ್ವರ ದೇವಸ್ಥಾನದ ಆವರಣ, ಅಶೋಕ ನಗರ ನಂದಿನಿ ಬೂತ್, ಪೊಲೀಸ್ ಕ್ವಾಟ್ರಸ್ ಹತ್ತಿರ ಹಾಗೂ ರಾಗಿಗುಡ್ಡ ಸರ್ಕಾರಿ ಶಾಲೆ ಹತ್ತಿರ ವಿಶೇಷ ಕೌಂಟರ್ ಗಳನ್ನು ತೆರೆಯಲಾಗುವುದು. ನೀರಿನ ಖಾತೆದಾರರು ಬಾಕಿ ಉಳಿಸಿಕೊಂಡಿರುವ ನೀರಿನ ಕಂದಾಯವನ್ನು ಪಾವತಿಸದಿದ್ದಲ್ಲಿ ಅಂತಹವರ ನೀರಿನ ಸಂಪರ್ಕ ವನ್ನು ಕಡಿತಗೊಳಿಸಲಾಗುವುದು. ಸಾರ್ವಜನಿಕರು ಮಂಡಳಿ ಯೊಂದಿಗೆ ಸಹಕರಿಸಬೇಕೆಂದು ಕನಸಿನ ಮತ್ತು ಒಚ ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

ನವೋದಯ ವಿದ್ಯಾಲಯಕ್ಕೆ ಎಂ.ಎನ್. ಅಪೂರ್ವ ಆಯ್ಕೆ



• ಸೊರಬ : ಜವಾಹರ ನವೋದಯ ವಿದ್ಯಾಲಯ ನಡೆಸುವ ಪ್ರಸಕ್ತ ಸಾಲಿನ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣ ಳಾಗುವ ಮೂಲಕ ಕುಂದಗಸವಿ ಗ್ರಾಮದ ವಿದ್ಯಾರ್ಥಿನಿ ಎಂ.ಎನ್. ಅಪೂರ್ವ ಉತ್ತಮ ಅಂಕ ಪಡೆದು ಆಯ್ಕೆ ಯಾಗಿದ್ದಾಳೆ. ಪತ್ರಕರ್ತ ಎಂ.ಎಲ್. ನೋಪಿ ಶಂಕರ್ ಕುಂದಗಸವಿ ಹಾಗೂ ಪ್ರವೀಣ ದಂಪತಿಯ ಪುತ್ರಿ ಯಾಗಿರುವ ಎಂ.ಎನ್. ಅಪೂರ್ವ ಅವಳಿಗೆ ಮಾತೃಶ್ರೀ ಕೋಚಿಂಗ್ ಸೆಂಟರ್‌ನ ಶಿಕ್ಷಕ ರಮೇಶ್ ಕಲ್ಲಂಬಿ ಮಾರ್ಗದರ್ಶನ ನೀಡಿದ್ದಾರೆ. ಗ್ರಾಮೀಣ ಭಾಗದ ಪ್ರತಿಭೆ ವಿದ್ಯಾರ್ಥಿನಿ ಅಪೂರ್ವ ಸಾಧನೆಗೆ ಕುಂದಗಸವಿ ಗ್ರಾಮಸ್ಥರು ಹಾಗೂ ತಾಲೂಕು ಪತ್ರಕರ್ತರ ಬಳಗ ಅಭಿನಂದನೆ ಸಲ್ಲಿಸಿದೆ.

ಹಾವು ಕಚ್ಚಿ ರೈತ ಸಾವು

ತ್ಯಾಗರ್ತಿ: ಸಮೀಪದ ಗೌತಮಪುರ ಗ್ರಾಮದ ರೈತ ಹುಚ್ಚಪ್ಪ (65) ಮಂಗಳವಾರ ರಾತ್ರಿ ತೋಟಕ್ಕೆ ನೀರು ಹಾಯಿಸಲು ಹೋದಾಗ ಎಡಗಾಲಿಗೆ ಹಾವು ಕಚ್ಚಿ ಸಾವನ್ನಪ್ಪಿದ್ದಾರೆ. ಆನಂದಪುರ ಸರ್ಕಾರಿ ಆಸ್ಪತ್ರೆಗೆ ಪ್ರಥಮ ಚಿಕಿತ್ಸೆಗೆ ದಾಖಲಿಸಲಾಗಿದ್ದು ವೈದ್ಯರು ಪರೀಕ್ಷಿಸಿದಾಗ ರೈತ ಮೃತ ಪಟ್ಟಿರುವುದಾಗಿ ವೈದ್ಯರು ದೃಢೀಕರಿಸುತ್ತಾರೆ. ಆನಂದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮಸ್ಥರ ಆಕ್ರೋಶ : ಬೇಸಿಗೆ ಕಾಲದಲ್ಲಿ ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಬೆಳೆಗಳಿಗೆ ನೀರು ಹಾಯಿಸಲು ವಿದ್ಯುತ್ ನೀಡುತ್ತಿದ್ದಾರೆ. ಹೀಗಾಗಿ ರೈತರು ರಾತ್ರಿ ಎಲ್ಲಾ ನೀರು ಹಾಯಿಸಲು ಹೋದಾಗ ಇಂತಹ ದುರ್ಘಟನೆ ನಡೆಯುತ್ತಿದೆ, ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಳ್ಳಬೇಕು ಎಂದು ಗ್ರಾಮಸ್ಥರು ಹಾಗೂ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಂದ್ರಗುತ್ತಿ ಗ್ರಾಮದ ಜನತೆಗೆ ತಂಪೆರೆದ ಮಳೆರಾಯ

• ಚಂದ್ರಗುತ್ತಿ : ಕಳೆದ ಕೆಲವು ದಿನಗಳಿಂದ ಸತತವಾಗಿ ಸುಡುತ್ತಿದ್ದ ಬಿಸಿಲಿನ ಬೇಗೆಯಿಂದ ಬೆಂದಿದ್ದ ಚಂದ್ರಗುತ್ತಿ ಗ್ರಾಮದ ಜನತೆಗೆ ಬುಧವಾರ ಸಂಜೆ ಸುರಿದ ಮಳೆ ತಂಪೆರೆದಿದೆ.

ಬೆಳಗ್ಗೆಯಿಂದಲೇ ಸೂರ್ಯನ ಪ್ರಖರತಾಪಕ್ಕೆ ತತ್ತರಿಸಿದ್ದ ಸಾರ್ವಜನಿಕರು ಹಾಗೂ ಜಾನುವಾರುಗಳು, ಸಂಜೆಯ ವೇಳೆಗೆ ವರುಣನ ಆಗಮನದಿಂದ ನಿಟ್ಟುಸಿರು ಬಿಟ್ಟಿದ್ದಾರೆ. ಹಠಾತ್ತನೆ ಕವಿದ ಮೋಡಗಳು ಗುಡುಗು ಸಹಿತ ಮಳೆಯಾಗಿ ಸುರಿಯುವ ಮೂಲಕ ಧರೆಗೆ ತಂಪೆರೆದವು.

ಈ ಮಳೆಯು ಕೇವಲ ಜನರಿಗಷ್ಟೇ ಅಲ್ಲದೆ, ಅಡಿಕೆ ಮತ್ತು ತೆಂಗಿನ ತೋಟಗಳಿಗೂ ಜೀವಕಳೆ ನೀಡಿದೆ. ಬಿಸಿಲಿನಿಂದ ಬಾಡುತ್ತಿದ್ದ ಗಿಡಮರಗಳು ಮಳೆಯಲ್ಲಿ ತೊಯ್ದು ಹಸಿರಾಗಿ ಕಂಗೊಳಿಸುತ್ತಿವೆ. ಒಟ್ಟಾರೆಯಾಗಿ, ಧಗೆಯಿಂದ ಕಂಗೆಟ್ಟಿದ್ದ ಗ್ರಾಮಸ್ಥರಿಗೆ ಈ ಮಳೆ ಹೊಸ ಚೈತನ್ಯ ನೀಡಿದಂತಾಗಿದೆ.

ಸಾಗರ : ಇಲ್ಲಿನ ಮಲೆನಾಡು ಗಮಕ ಕಲಾ ಟ್ರಸ್ಟ್ ಮತ್ತು ವರದಹಳ್ಳಿಯ ಶ್ರೀಧರ ಸೇವಾ ಮಹಾಮಂಡಲದ ವತಿಯಿಂದ ಏ.17ರಂದು ವರದಹಳ್ಳಿ ಸ್ವಾನಂದಾಮೃತ ವೇದಿಕೆಯಲ್ಲಿ ನಡೆಯಲಿರುವ ಸಾಗರ ಪ್ರಾಂತ್ಯ ಪ್ರಥಮ ಗಮಕ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಎಂ.ಆರ್.ಲಕ್ಷ್ಮೀನಾರಾಯಣ ಅಮಟೆ ಅವರನ್ನು ಮಂಗಳವಾರ ಗಮಕ ಟ್ರಸ್ಟ್ ವತಿಯಿಂದ ಸ್ವಗೃಹದಲ್ಲಿ ಗೌರವ ಸಲ್ಲಿಸಿ ಸಮ್ಮೇಳನಕ್ಕೆ ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಪ್ರೊ. ಕೆ.ಆರ್.ಕೃಷ್ಣಯ್ಯ, ಬಿ.ಟಿ.ಅರುಣ, ಡಾ. ವಸುಮತಿ ಗೌಡ, ನರಹರಿ ಶರ್ಮ, ಯೋಗೀಶ್ ಜಿ., ನರಹರಿ ಶರ್ಮ, ಸರಳಾ, ಶರ್ಮಿಳಾ ಹಾಜರಿದ್ದರು.



ಪುನೀತ್ ರಾಜಕುಮಾರ್ 51ನೇ ಹುಟ್ಟು ಹಬ್ಬ ಆಚರಣೆ

• ಶಿವಮೊಗ್ಗ : ನಗರದ ಸೀನಪ್ಪ ಶೆಟ್ಟಿ (ಗೋಪಿ ವೃತ್ತ) ವೃತ್ತದ ಮಲ್ಲಿಕಾರ್ಜುನ ಚಿತ್ರಮಂದಿರ ಎದುರು ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟು ಹಬ್ಬದ ಪ್ರಯುಕ್ತ ಸುಮಾರು ಐದು ಸಾವಿರ ಜನರಿಗೆ ವೆಜಿಟೆಬಲ್ ಧಮ್ ಬಿರಿಯಾನಿ ಹಾಗೂ ಪಾನೀಯ ವ್ಯವಸ್ಥೆಯನ್ನು ಅಪ್ಪು ಅಭಿಮಾನಿಗಳ ವತಿಯಿಂದ ಆಯೋಜಿಸಲಾಗಿತ್ತು.ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯ ಹೆಚ್.ಸಿ.ಯೋಗೇಶ್, ಅಪ್ಪು ಅಭಿಮಾನಿಗಳಾದ ಮಧುಸೂದನ್, ಜಗದೀಶ್, ಚಿರಂಜೀವಿ ಬಾಬು, ಎಂ.ಎಸ್.ಶಿವಕುಮಾರ್, ಡಿ.ಜಿ.ಕಿರಣ್, ಭಾನುಪ್ರಸಾದ್ ಹಾಗೂ ಹಲವಾರು ಅಭಿಮಾನಿಗಳು ಭಾಗವಹಿಸಿದ್ದರು.



ಅಗತ್ಯ ವಸ್ತು ಖರೀದಿಯಲ್ಲಿ ಬ್ಯುಸಿಯಾದ ಜನತೆ

ಯುಗಾದಿ ಹಬ್ಬಕ್ಕೆ ಸಿದ್ಧತೆ

• ಶಿವಮೊಗ್ಗ : ವಿಶ್ವಾವಸು ನಿರ್ಗಮಿಸುವ ಮೂಲಕ ಪರಾಭವನ ಆಗಮನವಾಗಿದ್ದು, ನೂತನ ಸಂವತ್ಸರವನ್ನು ಸ್ವಾಗತಿಸಲು ಜಿಲ್ಲೆಯ ಜನತೆ ಸಡಗರ ಸಂಭ್ರಮದಿಂದ ಅಣಿಯಾಗಿದ್ದಾರೆ.

ದೂರದ ಕೊಲ್ಲಿ ಯುದ್ಧದ ಕಾರ್ಮೋಡದಿಂದಾಗಿ ಮಾರುಕಟ್ಟೆಯಲ್ಲಾಗಿರುವ ಏರುಪೇರನ್ನು ಲೆಕ್ಕಿಸದೆ ಜನತೆ ವರ್ಷದ ಮೊದಲ ಹಬ್ಬ ಯುಗಾದಿಯನ್ನು ಸಂಭ್ರಮದಿಂದ ಆಚರಿಸಲು ಸಂಪೂರ್ಣ ಸಿದ್ಧರಾಗಿದ್ದಾರೆ. ಹೊಸಬಟ್ಟೆ, ಗೃಹೋಪಯೋಗಿ ಹೊಸ ವಸ್ತುಗಳ ಖರೀದಿಯನ್ನು ಜನತೆ ಭರದಿಂದಲೇ ಮಾಡಿದ್ದು, ಹಬ್ಬದ ಮುನ್ನಾ ದಿನವಾದ ಬುಧವಾರ ಹಣ್ಣು, ತರಕಾರಿ, ಮಾವು, ಬೇವಿನ ಸೊಪ್ಪು ಖರೀದಿ ನಡೆಸಿದರು. ಯುಗಾದಿಯ ಜತೆಯಲ್ಲಿಯೇ ರಂಜಾನ್ ಕೂಡ ಬಂದಿರುವುದರಿಂದ ಮಾರುಕಟ್ಟೆಯಲ್ಲಿ ಹೆಚ್ಚಿನ ಜನಜಂಗುಳಿಯಿಂದ ಕೂಡಿತ್ತು. ಅದರಲ್ಲಿ ಶಾಪಿಂಗ್ ಮಹಲ್‌ಗಳಲ್ಲಿ ಖರೀದಿ ಹೆಚ್ಚಾಗಿದ್ದು, ಬಿಲ್ ಹಾಕಿಸಲು ನಾಲ್ಕೈದು ಕೌಂಟರ್‌ಗಳ ಮುಂದೆ ಸರತಿ ಸಾಲು ಸಾಮಾನ್ಯ ಎನ್ನುವಂತಾಗಿತ್ತು.

ಈ ಹಬ್ಬದ ವಿಶೇಷ ಹೋಳಿಗೆಯಾಗಿದ್ದು, ಬಹುತೇಕರು ಮನೆಯಲ್ಲಿ ಮಾಡುವುದಕ್ಕಿಂತ ಹೊರಗಿನಿಂದ ಖರೀದಿಸುವುದೇ ಹೆಚ್ಚಾಗಿತ್ತಾದರೂ, ಈ ಬಾರಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಸಾಕಷ್ಟು ಲಭ್ಯ ಇಲ್ಲದಿರುವುದರಿಂದ ಥರಾವರಿ ಹೋಳಿಗೆಗಳಿಗೂ ಕಡಿವಾಣ ಬಿದ್ದಿದೆ. ಹೀಗಾಗಿ ಮನೆಯಲ್ಲಿಯಲ್ಲಿಯೇ ಹೋಳಿಗೆ ಮಾಡಿಕೊಳ್ಳುವುದು ನಗರ ಪ್ರದೇಶದಲ್ಲಿ ಅನಿವಾರ್ಯವಾಗಿದೆ.

ಅಚ್ಚು ಬೆಲ್ಲ, ಹುರಿಕಡಲೆಗೆ ಬೇಡಿಕೆ ಹೆಚ್ಚಿದ್ದು, ಬೆಲೆಯೂ ಕೊಂಚ ದುಬಾರಿಯಾಗಿತ್ತು. ಅಡುಗೆ ಎಣ್ಣೆ ಬೆಲೆಯೂ ಕೊಲಿ ಯುದ್ಧದ ನಂತರ ಹೆಚ್ಚಾಗಿರುವುದರಿಂದ ಒಟ್ಟಾರೆಯಾಗಿ ಗ್ರಾಹಕರು ಬೆಲೆ ಏರಿಕೆಯ ಬಿಸಿ ಅನುಭವಿಸಿದ್ದಾರೆ.

ಹೊಸ ವರ್ಷಕ್ಕೆ ಹೊಸ ಬಟ್ಟೆ ತೊಡಬೇಕೆಂಬ ಪ್ರತೀತಿ ಇರುವುದರಿಂದ ಬಟ್ಟೆ ಅಂಗಡಿಗಳಲ್ಲಿಯೂ ಗ್ರಾಹಕರು ಹೆಚ್ಚಿದ್ದರು. ಹೆಚ್ಚು ವ್ಯಾಪಾರ ಕುದುರಿಸುವ ಸಲುವಾಗಿ ವ್ಯಾಪಾರಿಗಳು ಕೊಡುಗೆಗಳನ್ನು ಘೋಷಣೆ ಮಾಡಿ ಗ್ರಾಹಕರನ್ನು ಸೆಳೆಯಲು ಯತ್ನ ನಡೆಸಿದ್ದರು.





ದರ ಹೆಚ್ಚಾದರೂ ಖರೀದಿ ಬಿಡದ ಜನತೆ

ಹಬ್ಬವೆಂದರೆ ಬೆಲೆ ಏರಿಕೆ ಸಾಮಾನ್ಯ ಎಂಬಂತಾಗಿದ್ದು, ಈ ಬಾರಿಯೂ ಬೆಲೆ ಏರಿಕೆ ಬಿಸಿಯಿಂದ ಗ್ರಾಹಕರು ಹೊರತಾಗಿಲ್ಲ. ಹೂವು, ಹಣ್ಣುಗಳು ಸಹಜವಾಗಿಯೇ ತುಟ್ಟಿಯಾಗಿದ್ದು, ಪ್ರತೀ ಹಣ್ಣಿನ ಮೇಲೆಯೂ ಕೆಜಿಗೆ ಸುಮಾಮರು 50-60 ರೂ. ಹೆಚ್ಚಾಗಿತ್ತು. ಅದರಲ್ಲೂ ಸೇಬು, ದ್ರಾಕ್ಷಿ, ದಾಳಿಂಬೆ ಹಣ್ಣುಗಳು 300 ರೂ.ಗೂ ಅಧಿಕವಾಗಿತ್ತು. ಸಪೋಟ, ಬಾಳೆ ಹಣ್ಣು, ಪೈನಾಪಲ್ ಮೊದಲಾದವು ಪ್ರತೀ ಕೆಜಿಗೆ 100 ರ ಗಡಿ ದಾಟಿತ್ತು. ಮಲ್ಲಿಗೆ, ಕನಕಾಂಬರ, ಸೇವಂತಿಗೆ ಹೂವು ಮಾರಿಗೆ 150 ರಿಂದ 200 ರೂ. ದಾಟಿತ್ತು. ಮಾವು ಹಾಗೂ ಬೇವು ಈ ಹಬ್ಬದ ಆಕರ್ಷಣೆಯಾಗಿದ್ದು, ಹೂವಿದ್ದ ಬೇವಿಗೆ ಹೆಚ್ಚಿನ ಬೇಡಿಕೆ ಇತ್ತು. ಗ್ರಾಹಕರು ಹೂವಿದ್ದ ಬೇವನ್ನೇ ಹುಡುಕಿ ಖರೀದಿ ಮಾಡುತ್ತಿದ್ದರು.

ಮಾ.21ರಂದು 7ನೇ ಜಾನಪದ ಸಮ್ಮೇಳನ

• ಶಿವಮೊಗ್ಗ : ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಸಮಿತಿಯಿಂದ ಮಾ.21ರಂದು ಸವಳಂಗ ರಸ್ತೆಯಲ್ಲಿರುವ ಕೊಮ್ಮನಾಳು ಸಮೀಪದ ಸೋಮಿನಕೊಪ್ಪದಲ್ಲಿ ಶ್ರೀ ರಾಮಾಂಜನೇಯ ದೇವಸ್ಥಾನದ ಆವರಣದಲ್ಲಿ ಜಿಲ್ಲಾ ಮಟ್ಟದ 7ನೇ ಜಾನಪದ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಾನಪದ ಪರಿಷತ್ತು ಜಿಲ್ಲಾಧ್ಯಕ್ಷ ಡಿ.ಮಂಜುನಾಥ್ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ, ಅಂದು ಸಂಜೆ 5 ಗಂಟೆಗೆ ಸೋಮಿನಕೊಪ್ಪ ಗ್ರಾಮದ ಹೆಬ್ಬಾಗಿಲಿನಿಂದ ಸಮ್ಮೇಳನಾಧ್ಯಕ್ಷರೊಂದಿಗೆ ಊರಿನ ಗಣ್ಯರು, ಸಂಘ, ಸಂಸ್ಥೆಗಳು, ಕನ್ನಡ ಮನಸ್ಸುಗಳೊಂದಿಗೆ ವಿವಿಧ ಜಾನಪದ ಕಲಾತಂಡಗಳ ಜಾನಪದ ನಡಿಗೆ ಕಾರ್ಯಕ್ರಮ ನಡೆಯಲಿದ್ದು, ಈ ಕಾರ್ಯಕ್ರಮಕ್ಕೆ ಶಾಸಕಿ ಶಾರದಾಪೂರ್ಯನಾಯ್ಕ್ ಚಾಲನೆ ನೀಡಲಿದ್ದು, ರಾಮಾಂಜನೇಯ ಸೇವಾ ಸಮಿತಿ ಅಧ್ಯಕ್ಷ ಕಾಂತರಾಜ್ ಸೋಮಿನಕೊಪ್ಪ ಉಪಸ್ಥಿತರಿರುವರು ಎಂದರು.

ಸಂಜೆ 6 ಗಂಟೆಗೆ ಸಮ್ಮೇಳನವನ್ನು ಸಂಸದ ಬಿ.ವೈ. ರಾಘವೇಂದ್ರ ಉದ್ಘಾಟಿಸಲಿದ್ದು, ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಹಾಗೂ ಖ್ಯಾತ ಜಾನಪದ ವಿದ್ವಾಂಸ ಡಾ. ಹಿ.ಚಿ. ಬೋರಲಿಂಗಯ್ಯ ಅಧ್ಯಕ್ಷತೆ ವಹಿಸಲಿದ್ದು, ತಾವು ಆಶಯ ನುಡಿಗಳನ್ನಾಡಲಿದ್ದಾರೆ ಎಂದರು.

ಬೆಂಗಳೂರಿನ ಗೀತಾಭಟ್ ಸಂಯೋಜಿಸಿದ ದೀವರ ಸಂಸ್ಕೃತಿ ಅನಾವರಣದ ಹಸೆ ಚಿತ್ತಾರ ಪುಸ್ತಕವನ್ನು ಶಾರದಾಪೂರ್ಯನಾಯ್ಕ್ ಹಾಗೂ ಬೆಂಗಳೂರಿನ ಖ್ಯಾತ ಜಾನಪದ ಗಾಯಕ ಡಾ. ಅಪ್ಪಗೆರೆ ತಿಮ್ಮರಾಜು, ಸಮ್ಮೇಳನಾಧ್ಯಕ್ಷ ಶಿವಮೊಗ್ಗದ ಖ್ಯಾತ ಜಾನಪದ ಗಾಯಕ ಕೆ.ಯುವರಾಜ್, ಕರ್ನಾಟಕ ಜಾನಪದ ಅಕಾಡೆಮಿ ಮಾಜಿ ಅಧ್ಯಕ್ಷ ಕಣ್ಣೂರು ಟಾಕಪ್ಪ ಬಿಡುಗಡೆ ಮಾಡುವರು. ಮುಖ್ಯ ಅತಿಥಿಯಾಗಿ ಕಾಂತರಾಜ್ ಪಾಲ್ಗೊಳ್ಳಲಿದ್ದಾರೆ ಎಂದರು.

ಜಾನಪ ಗೀತೆಮ ಸೋಬಾನೆ ಪದ, ದೇವಿ ಕುಣಿತ, ಲಾವಣಿ, ತತ್ವಪದ, ಸುಗ್ಗಿ ಕುಣಿತ, ಜೋಗಿಪದ, ಚೌಡಿಕೆ ಪದ, ಗೀಗಿ ಪದ, ಡೊಳ್ಳು ಕುಣಿತ, ಜನಪದ ಹಾಡು, ಜೋಗತಿ ನೃತ್ಯ, ಅಂಟಿಗೆ ಪಂಟಿಗೆ, ಕಂಸಾಳೆ, ಕೋಲಾಟ ಸೇರಿದಂತೆ 22 ಕಲಾ ಪ್ರಕಾರಗಳ ಪ್ರದರ್ಶನ ನಡೆಯಲಿದೆ ಎಂದರು.

ಕಲಾ ಪ್ರದರ್ಶನಕ್ಕೆ ಭವ್ಯ ವೇದಿಕೆ ಸಿದ್ಧಪಡಿಸಲಾಗುತ್ತದೆ. ಕಲಾವಿದರಿಗೆ ಊಟ, ಕಾಫಿ, ತಿಂಡಿ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಇದೊಂದು ಅಪರೂಪದ ಜಾನಪದ ಸಾಂಸ್ಕೃತಿಕ ವೈಭವ ಇದಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಕೃಷ್ಣಮೂರ್ತಿ ಹಿಳ್ಳೋಡಿ, ಡಿ.ಗಣೇಶ್, ಬಾಲರಾಜ್ ಚುರ್ಚುಗುಂಡಿ, ಪರಶುರಾಮ್ ಮಟ್ಟೇರ, ಡಾ.ಭಾಗ್ಯಲಕ್ಷ್ಮೀ ಇದ್ದರು.



ಶ್ರೀ ರಾಮೇಶ್ವರ ಸ್ವಾಮಿಗೆ ರುದ್ರಾಭಿಷೇಕ-ರುದ್ರ ಹೋಮ

• ರಿಪ್ಪನ್‌ಪೇಟೆ: ಇಲ್ಲಿಗೆ ಸಮೀಪದ ಗವಟೂರು ಶ್ರೀರಾಮೇಶ್ವರ ದೇವಸ್ಥಾನ ಸೇವಾ ಸಮಿತಿ 17 ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಶ್ರೀರಾಮೇಶ್ವರ ಸ್ವಾಮಿಗೆ ರುದ್ರಾಭಿಷೇಕ ಮತ್ತು ರುದ್ರ ಹೋಮ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮವು ಸಂಭ್ರಮ ಸಡಗರದೊಂದಿಗೆ ಇಂದು ಸಂಪನ್ನಗೊಂಡಿತು. 17 ರಂದು ಮಂಗಳವಾರ ಬೆಳಗ್ಗೆ 7 ಗಂಟೆಗೆ ಆಶ್ಲೇಷ ಬಲಿ ಪೂಜೆ, 18ರಂದು ಬೆಳಗ್ಗೆ 7 ಗಂಟೆಗೆ ಶ್ರೀರಾಮೇಶ್ವರ ದೇವರ ಪ್ರತಿಷ್ಠಾಪನಾ 17ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಅಲಹಳ್ಳಿ ಸಂತೋಷ ಭಟ್ಟರ ನೇತೃತ್ವದ ಪುರೋಹಿತ ಬಳಗದವರಿಂದ ಶ್ರೀ ರಾಮೇಶ್ವರ ದೇವರಿಗೆ ರುದ್ರಾಭಿಷೇಕ, ಅಷ್ಟೋತ್ತರ ಬಿಲ್ವಾರ್ಚಣೆ, ರುದ್ರಹೋಮ, ಪಂಚಾಮೃತ ಅಭಿಷೇಕ ಪರಿವಾರ ದೇವರುಗಳಿಗೆ ಪೂಜೆ ಮಹಾಮಂಗಳಾರತಿ ಮತ್ತು ಪ್ರಸಾದ, ಸಾಮೂಹಿಕ ಅನ್ನ ಸಂತರ್ಪಣೆ ಜರುಗಿತು.

ಸುಸೂತ್ರವಾಗಿ ನಡೆದ ಎಸೆಸ್ಸೆಲ್ಸಿ ಪರೀಕ್ಷೆ



• ಹೊಸನಗರ : ಮಾ.18ರಿಂದ ಎಸ್‌ಎಸ್ ಎಲ್‌ಸಿ ಪರೀಕ್ಷೆಗಳು ಆರಂಭಗೊಂಡಿದ್ದು, ಏಪ್ರಿಲ್ 2ರವರೆಗೆ ತಾಲೂಕಿನ 7 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಮೊದಲ ದಿನವಾದ ಬುಧವಾರ ನಡೆದ ಕನ್ನಡ ಪರೀಕ್ಷೆಯು ಯಾವುದೇ ಅಡಚಣೆ ಇಲ್ಲದೆ ಸುಸೂತ್ರವಾಗಿ ನಡೆಯಿತು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೈ. ಗಣೇಶ್ ತಿಳಿಸಿದರು.

ತಾಲೂಕಿನಲ್ಲಿ 1575 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ದಾಖಲು ಮಾಡಿಕೊಂಡಿದ್ದರು. ಅವರಲ್ಲಿ 1566 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 9 ವಿದ್ಯಾರ್ಥಿಗಳು ಗೈರು ಆಗಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ಪರೀಕ್ಷೆಯಿಂದದೂರ ಉಳಿದಿದ್ದಾರೆ ಎಂದರು.

ಸರ್ಕಾರಿ ಪದವಿಪೂರ್ವ ಕಾಲೇಜು, ಹೋಲಿ ರಿಡೀಮರ್ ಪ್ರೌಢ ಶಾಲೆ, ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲೆ ವಿಭಾಗ, ಮೇರಿ ಮಾತ ಪ್ರೌಢ ಶಾಲೆ ರಿಪ್ಪನ್‌ಪೇಟೆ, ನಗರ ಪ್ರೌಢ ಶಾಲೆ, ಮಾರುತಿಪುರ ಸರ್ಕಾರಿ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವಕಾಲೇಜು ನಿಟ್ಟೂರಿನಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಒಟ್ಟು 1575 ಪರೀಕ್ಷಾರ್ಥಿಗಳ ಪೈಕಿ 793 ಬಾಲಕರು 782 ಬಾಲಕಿಯರು ಪರೀಕ್ಷೆಗಾಗಿ ಹೆಸರು ನೊಂದಾಯಿಸಿದ್ದಾರೆ ಎಂದು ತಿಳಿಸಿದರು.

ತಹಶೀಲ್ದಾರ್ ಭರತ್‌ರಾಜ್ ಹಾಗೂ ತಾಪಂ ಇಓ ನರೇಂದ್ರಕುಮಾರ್ ಹಾಗೂ ತಾಲೂಕಿನ ಅಧಿಕಾರಿಗಳ ತಂಡ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಹಾಗೂ ಸೌಲಭ್ಯಗಳ ಕುರಿತು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ವ್ಯವಸ್ಥಾಪಕ ಗಣೇಶ್ ಮಧ್ಯಸ್ಥ, ದೈಹಿಕ ಶಿಕ್ಷಣಾ ಇಲಾಖೆಯ ಪರೀಕ್ಷಾ ವೀಕ್ಷಣಾಧಿಕಾರಿ ವಿನಯ್‌ಕರ್ಕಿ, ಕರಿಬಸಪ್ಪ, ನೋಡಲ್ ಅಧಿಕಾರಿ ರಾಜೇಂದ್ರಪ್ಪ, ರಂಗನಾಥ್, ಸುಮಾರಾಣಿ, ಪೃಥ್ವೀರಾಜ್ ಇತರರಿದ್ದರು.

ಮಹಿಳೆಯರು ಸ್ವರಕ್ಷಣೆ ಕಲಿಯುವುದು ಅತ್ಯಗತ್ಯ: ಶಾರದಾ

• ಸಾಗರ : ಮಹಿಳೆಯರು ಸ್ವರಕ್ಷಣೆ ಕಲಿಯುವುದು ಅತ್ಯಾಗತ್ಯ. ಸ್ವಯಂ ರಕ್ಷಣೆ ಕಲಿತರೆ ಧೈರ್ಯವಾಗಿ ಸಂಕಷ್ಟಗಳನ್ನು ಎದುರಿಸಬಹುದು ಎಂದು ತಾಲ್ಲೂಕು ಮಹಿಳಾ ಸಂರಕ್ಷಣಾಧಿಕಾರಿ ಶಾರದಾ ಬಂಗೇರಾ ತಿಳಿಸಿದರು.

ಇಲ್ಲಿನ ಸಾಗರ ಶ್ರೀಗಂಧ ಲಯನ್ಸ್ ಕ್ಲಬ್ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪ್ರತಿಯೊಬ್ಬ ತಾಯಿ ತನ್ನ ಹೆಣ್ಣುಮಕ್ಕಳ ಚಲನವಲನವನ್ನು ಗಮನಿಸುತ್ತಾ ಇರಬೇಕು. ಅವಳ ವರ್ತನೆಯ ಏರುಪೇರು ಗಮನಿಸಿ ಸೂಕ್ಷ್ಮ ತಿಳುವಳಿಕೆ ನೀಡಿ ಸೂಕ್ಷ್ಮ ವಿಷಯಗಳನ್ನು ಅವರಿಗೆ ತಿಳಿಸುತ್ತಾ ಇರಬೇಕು. ಅನಗತ್ಯ ಸಂಪರ್ಕ ಸಂಬಂಧಗಳಿಂದ ಅವರನ್ನು ರಕ್ಷಿಸಬೇಕಾಗಿದೆ. ಹೆಣ್ಣುಮಕ್ಕಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುವುದು ತಾಯಿಯ ಪ್ರಮುಖ ಕರ್ತವ್ಯವಾಗಿರುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಾಗರ ಶ್ರೀಗಂಧ ಲಯನ್ಸ್ ಅಧ್ಯಕ್ಷೆ ಸರಸ್ವತಿ ನಾಗರಾಜ್ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಸಂರಕ್ಷಣೆ, ಶಿಕ್ಷಣ, ಆರೋಗ್ಯ, ಉದ್ಯೋಗ ಇನ್ನಿತರೆ ಬಗ್ಗೆ ಮಹಿಳೆಯರು ತಿಳಿದುಕೊಳ್ಳಬೇಕು. ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಸೂಕ್ತ ಕಾನೂನು ಇದ್ದು, ಸಾಕಷ್ಟು ಮಹಿಳೆಯರಿಗೆ ಅದರ ಅರಿವು ಇರುವುದಿಲ್ಲ, ತಮಗೆ ಆಗಿರುವ ಅನ್ಯಾಯಕ್ಕೆ ಕಾನೂನುಬದ್ಧ ನ್ಯಾಯ ಸಿಗಬೇಕು ಎಂದು ತಿಳಿಸಿದರು.

ಮಹಿಳಾ ದಿನಾಚರಣೆ ಪ್ರಯುಕ್ತ ಶ್ರೀಗಂಧ ಲಯನ್ಸ್ ಕ್ಲಬ್ ವತಿಯಿಂದ ವಿಜೇತರಾದ ಮಹಿಳೆಯರಿಗೆ ಬಹುಮಾನ ವಿತರಣೆ ಮಾಡಲಾಯಿತು.

ವೇದಿಕೆಯಲ್ಲಿ ಮೇಜರ್ ನಾಗರಾಜ್, ಕೆ.ಬಿ.ಮಹಾಬಲೇಶ್ವರ, ಎನ್.ಆರ್.ವಿನಯ್ ಕುಮಾರ್, ಸುಧಾ ಉದಯ, ಸುಲೋಚನಾ, ಮೈತ್ರಿ ಮನೋಜ್, ಸವಿತಾ ಮಹಾಬಲೇಶ್, ಸಹನಾ, ವೀಣಾ, ಮಂಜುಳಾ ಚಂದ್ರಪ್ಪ ಇನ್ನಿತರರು ಹಾಜರಿದ್ದರು.



ಲೋಕಕಲ್ಯಾಣಾರ್ಥ ಶತಚಂಡಿಕಾ ಯಾಗ

• ತ್ಯಾಗರ್ತಿ: ಸದ್ಗುರು ಶ್ರೀಧರ ಭಾರತೀ ತೀರ್ಥ ಸ್ವಾಮೀಜಿಯವರ ಮಾರ್ಗ ದರ್ಶನದಂತೆ ಲೋಕಕಲ್ಯಾಣಾರ್ಥವಾಗಿ ಶ್ರೀಮತ್ ಪರಮಹಂಸ ಸಚ್ಚಿದಾನಂದಾಶ್ರಮ ಸತ್ಯಪೀಠ ತ್ಯಾಗರ್ತಿಯಲ್ಲಿ ಮಾ.20ರಿಂದ ಮಾರ್ಚ್ 22ರವರೆಗೆ ಶತಚಂಡಿಕಾ ಯಾಗ ನಡೆಯಲಿದೆ.

ತ್ಯಾಗರ್ತಿಯ ಸಚ್ಚಿದಾನಂದ ಆಶ್ರಮದಲ್ಲಿ ಶತಚಂಡಿಕಾ ಯಾಗವನ್ನು ನೆರವೇರಿಸಲು ನಿಶ್ಚಯಿಸ ಲಾಗಿದ್ದು ಯಾಗದ ತಯಾರಿಯಾಗಿ ಹೋಮದ ಕುಂಡಗಳು ನಿರ್ಮಾಣವಾಗುತ್ತಿದೆ. ಮಾರ್ಚ್ 20ರ ಬೆಳಗ್ಗೆ ಗಣಪತಿ ಹವನದಿಂದ ಪ್ರಾರಂಭಗೊಂಡು ನಾಂದಿ, ಪುಣ್ಯಾಹ, ಋತ್ವಿಕ್ ಆವರಣ, ಕಾಳೇಶ್ವರ ದೇವರಿಗೆ ಶತರುದ್ರಾಭಿಷೇಕ, ಪ್ರಸಾದ ವಿನಿಯೋಗ, ನಂತರ ಸಪ್ತಶತಿ ಪಾರಾಯಣ ಮಾರ್ಚ್ 21ರಂದು ಸಪ್ತಶತಿ ಪಾರಾಯಣ ಮುಂದುವರೆದು 22ರಂದು ಶತಚಂಡಿಯಾಗ, ಪೂರ್ಣಾಹುತಿ, ಹಾಗೂ ಪ್ರಸಾದ ವಿನಿಯೋಗ ನೆಡೆಯಲಿದ್ದು ಈ ಕಾರ್ಯಕ್ರಮಕ್ಕೆ ಗುರು ಭಕ್ತರು, ಸಾರ್ವಜನಿಕರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಆಶ್ರಮದ ಸದ್ಗುರು ಶ್ರೀ ಧರ ಭಾರತೀ ತೀರ್ಥ ಸ್ವಾಮೀಜಿಯವರು ತಿಳಿಸಿದ್ದಾರೆ.



ಕೋಮನೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಸಂತೆ

• ತೀರ್ಥಹಳ್ಳಿ: ಮೇಲಿನಕುರುವಳ್ಳಿ ಗ್ರಾಪಂವ್ಯಾಪ್ತಿಯ ಹುಣಸವಳ್ಳಿ ಗ್ರಾಮದ ಮೇಲಿನ ಕುರುವಳ್ಳಿ ಕ್ಲಸ್ಟರ್ ವ್ಯಾಪ್ತಿಯ ಕೋಮನೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಕ್ಕಳಸಂತೆ ವಿನೂತನ ಕಾರ್ಯಕ್ರಮ ಬಹಳ ಅಚ್ಚುಕಟ್ಟಾಗಿ ನಡೆಯಿತು.

ಶಾಲಾ ಮಕ್ಕಳು ತಮ್ಮ ಮನೆಯಲ್ಲೇ ಬೆಳೆದ ತರಕಾರಿ ವಸ್ತುಗಳನ್ನು ತಂದು ವ್ಯಾಪಾರ ಮಾಡುವ ಮುಖಾಂತರ ಪುಸ್ತಕ ಪೆನ್ನು ಓದುವುದನ್ನು ಬಿಟ್ಟು ವ್ಯಾಪಾರದಲ್ಲಿ ತಲ್ಲೀನರಾದರು.

ಗ್ರಾಮೀಣ ಭಾಗದ ಮಕ್ಕಳಲ್ಲಿ ಮಕ್ಕಳ ಸಂತೆ ಕಾರ್ಯಕ್ರಮದ ಮುಖ್ಯ ಉದ್ದೇಶವು ವಿದ್ಯಾರ್ಥಿಗಳಲ್ಲಿ ಪಠ್ಯೇತರ ಚಟುವಟಿಕೆಗಳ ಮೂಲಕ ಪ್ರಾಯೋಗಿಕಜ್ಞಾನ, ವ್ಯವಹಾರ ಕೌಶಲ ಮತ್ತು ಆತ್ಮ ವಿಶ್ವಾಸವನ್ನು ಬೆಳೆಸುವುದು ಅಲ್ಲದೆ ಮಕ್ಕಳಿಗೆ ಹಣದ ಮೌಲ್ಯ, ಲಾಭ ನಷ್ಟದ ಅರಿವು ಸಾಮಾಜಿಕ ಕೌಶಲಗಳು ಮತ್ತು ಸ್ವಾವಲಂಬನೆಯನ್ನು ಕಲಿಸುವ ಮೂಲಕ ಅವರ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಿದೆ ಎಂದು ಮುಖ್ಯ ಶಿಕ್ಷಕ ರವಿಕುಮಾರ್ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷ ಕೋಮನೆ ಹರೀಶ್ ವಹಿಸಿದ್ದರು.

ಮಕ್ಕಳ ಸಂತೆ ಕಾರ್ಯಕ್ರಮವನ್ನು ಮಾಜಿ ಜಿಪಂ ಸದಸ್ಯೆ ಶ್ರುತಿ ವೆಂಕಟೇಶ್ ದೀಪ ಬೆಳಗಿಸಿ ಉದ್ಘಾಟಿಸಿದರು. ಮೇಲಿನ ಕುರುವಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಯು.ಡಿ. ವೆಂಕಟೇಶ್ ಉಪಸ್ಥಿತರಿದ್ದರು.

ಗ್ರಾಮೀಣ ಭಾಗದ ಸರ್ಕಾರಿ ಶಾಲೆಯಲ್ಲಿ ವಾರ್ಷಿಕ ಶಾರದಾ ಪೂಜೆ ಮಕ್ಕಳ ಶಿಸ್ತು ಬದ್ಧ ನಡತೆಯ ಮೂಲಕ ಬಹಳ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮದಲ್ಲಿ ತೀರ್ಥ ಹಳ್ಳಿ ಸಂಪನ್ಮೂಲ ಕೇಂದ್ರದಸಮಯಾಧಿಕಾರಿಗಳಾದ ಚೇತನಾ, ಬಿ.ಆರ್.ಪಿ. ವರದಾಜು ಹಾಗೂ ಸಿ.ಆರ್.ಪಿ.ಶ್ರೀಮತಿ ವಾಸುಕಿ ಶಾಲಾ ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರು, ಪೋಷಕರು, ಹಿರಿಯ ವಿದ್ಯಾರ್ಥಿಗಳು ಊರಿನ ಅನೇಕ ಗ್ರಾಮಸ್ಥರು ಉಪಸ್ಥಿತರಿದ್ದರು.



ಸಂಭ್ರಮದ ಯುಗಾದಿ ಆಚರಣೆ: ಶಿವಾನಂದಸ್ವಾಮಿ

• ಶಿರಾಳಕೊಪ್ಪ : ಹೊಸ ವರ್ಷ ಯುಗಾದಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಹಿಂದೂ ಸಮಾಜದ ಮುಖಂಡ, ಮಾಜಿ ಪಪಂ ಸದಸ್ಯ ಐ.ಎಂ. ಶಿವಾನಂದಸ್ವಾಮಿ ತಿಳಿಸಿದರು

ಬುಧವಾರ ಪಟ್ಟಣದ ಪ್ರವಾಸಿ ಮಂದಿರಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪಟ್ಟಣದ ವಿಜಯದಶಮಿ ಉತ್ಸವ ಸಮಿತಿ, ಹಿಂದೂ ಸಮಾಜ ಮತ್ತು ಪುರಸಭೆ ಇವರ ಸಂಯುಕ್ತ ಆಶ್ರಯದಲ್ಲಿ ಹೆಸರಾಂತ ಉತ್ತರ ಕನಾಟಕ ಜಾನಪದ ಖ್ಯಾತಿಯ ಪ್ರೀತಿಯ ಪಾರಿವಾಳ ಹಾಡಿನ ಗಾಯಕ ರಮೇಶ ಕುರಬಗಟ್ಟಿ ಸಾರಥ್ಯದಲ್ಲಿ ಆರ್. ಕೆ. ಮೆಲೋಡಿಯನ್ ತಂಡದಿಂದ ಜಾನಪದ, ಭರತನಾಟ್ಯ, ಮತ್ತು ಹಾಸ್ಯ ರಸಮಂಜರಿ ಕಾಯರ್ಕ್ರಮ ನಡೆಯಲಿದೆ ಎಂದು ತಿಳಿಸಿದರು

ವಿಜಯದಶಮಿ ಉತ್ಸವ ಸಮಿತಿ ಮತ್ತು ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಲಾಗುವುದು, ಕಾಯಕ್ರಮದ ಉದ್ಘಾಟನೆಯನ್ನು ವಿರಕ್ತ ಮಠದ ಸಿದ್ದೇಶ್ವರ ಸ್ವಾಮಿಗಳು ಮಾಡಲಿದ್ದಾರೆ

ಅಧ್ಯಕ್ಷತೆಯನ್ನು ದಸರಾ ಉತ್ಸವ ಸಮಿತಿ ಅಧ್ಯಕ್ಷ ಯುವರಾಜ ವಹಿಸಲಿದ್ದಾರೆ, ಮುಖ್ಯ ಅತಿಥಿಗಳಾಗಿ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಸಂಸದ ಬಿ.ವೈ. ರಾಘವೇಂದ್ರ ಶಾಸಕ ಬಿ.ವೈ ವಿಜಯೇಂದ್ರ ಮತ್ತು ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ನಾಗರಾಜಗೌಡ್ರು, ಕೆ.ಪಿ.ಸಿ.ಸಿ. ಮಹಿಳಾ ಮುಖಂಡರಾದ ಪುಷ್ಪಾ ಶಿವಕುಮಾರ, ಎಂ.ಡಿ.ಎಸ್. ಡೆವಲಪರ್ಸ್ ಮಂಜುನಾಥ ಪಾಲ್ಗೊಳ್ಳುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಸತೀಶ, ಖಜಾಂಚಿ ಸಂತೋಷ, ಹೆಚ್. ಎಂ. ಚಂದ್ರಶೇಖರ, ಸತೀಶ ಪವನ್, ರಾಮಣ್ಣ ಕೆಂಪಣ್ಣ ಜಗದೀಶ ತಿರುಕಪ್ಪ, ಆಟೋ ಮೈಲಾರಪ್ಪ ಸೇರಿದಂತೆ ಪ್ರಮುಖರು ಇದ್ದರು.



ಇಂದಿನಿಂದ ರಾಮನವಮಿ ಉತವ

• ಶಿವಮೊಗ್ಗ : ಕೋಟೆ ಸೀತಾರಾಮಾಂಜನೇಯ ಸ್ವಾಮಿ ದೇವಾಲಯದಲ್ಲಿ ರಾಮ ನವಮಿ ಉತ್ಸವದ ಭಾಗವಾಗಿ ಪ್ರತಿದಿನ ಸಂಜೆ 6.30ಕ್ಕೆ ವಿವಿಧ ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ದೇವರಿಗೆ ವಿಶೇಷ ಅಲಂಕಾರಗಳನ್ನು ಏರ್ಪಡಿಸಲಾಗಿದೆ.

ಮಾ. 19ರಂದು ಯುಗಾದಿ ಹಬ್ಬ ಪಂಚಾಂಗ ಶ್ರವಣ ನಡೆಯಲಿದ್ದು, ಮಹಾವಿಷ್ಣುವಿನ ಅಲಂಕಾರವಿದೆ. ಮಾ. 20ರಂದು ಭವಾನಿ ಅನಂತರಾಮ್ ಮತ್ತು ಸಂಗಡಿಗರು, ಮತ್ತೂರು ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಹಾಗೂ ದೇವರಿಗೆ ವಿಶ್ವಾಮಿತ್ರ ಯಜ್ಞ ಸಂರಕ್ಷಣೆ ಅಲಂಕಾರ ಇರಲಿದೆ. 21ರಂದು ನಟೇಶ್ ಅವರಿಂದ ಸೀತಾ ಪರಿತ್ಯಾಗ - ಉಪನ್ಯಾಸ, ದೇವರಿಗೆ ಅಹಲ್ಯಾ ಶಾಪ ವಿಮೋಚನೆ ಅಲಂಕಾರವಿದೆ. ಮಾ. 22ರ ಸಂಜೆ ನಾಗಶ್ರುತಿ ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವಿದ್ದು, ಮಾ. 23ರ ಸಂಜೆ ನಡೆಯುವ ಮುದ್ರಿಕಾ ಪ್ರದಾನ ಗಮಕ ವಾಚನದಲ್ಲಿ, ಡಾ. ಸನತ್ ಕುಮಾರ್ ಅವರಿಂದ ವಾಚನ, ಅಚ್ಯುತ ಅವಧಾನಿಯವರಿಂದ ವ್ಯಾಖ್ಯಾನ ನಡೆಯಲಿದೆ. ಮಾ. 24ರಂದು ದೇವರಿಗೆ ಕಬಂಧ ಬಾಹು ವಧೆ ಅಲಂಕಾರವಿದೆ. ಮಾ. 25ರ ಸಂಜೆ ನಾದ ಸಂಭ್ರಮ ಕಾರ್ಯಕ್ರಮವಿದ್ದು, ಮಾ. 26ರ ಸಂಜೆ ಶೃಂಗೇರಿ ಹೆಚ್. ಎಸ್. ನಾಗರಾಜ್ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸೀಯ ಕಾರ್ಯಕ್ರಮವಿದ್ದು, ಮಾ. 27ರ ಬೆಳಗ್ಗೆ ಮೂಲ ರಾಮರಿಗೆ ಮಹಾಭಿಷೇಕ, ಸಂಜೆ 5ಕ್ಕೆ ಪಟ್ಟಾಭಿಷೇಕ, ಸಂಜೆ 7ಕ್ಕೆ ಉತ್ಸವ, ರಾವಣ ಸಂಹಾರ ಮತ್ತು ಪುಷ್ಪಕ ವಿಮಾನ ಅಲಂಕಾರ, ಮಾ. 28ರ ಶನಿವಾರ ಸಂಜೆ 7ಕ್ಕೆ ಬೆಳ್ಳಿ ಮಂಟಪದಲ್ಲಿ ರಾಜಬೀದಿ ಉತ್ಸವ ನಡೆಯಲಿದೆ. ಪ್ರತಿದಿನ ಸಂಜೆ 5 ರಿಂದ ವಿವಿಧ ಭಜನಾ ಮಂಡಳಿ ವತಿಯಿಂದ ಸಂಜೆ ಭಜನಾ ಕಾರ್ಯಕ್ರಮ. ರಾತ್ರಿ ವಸಂತ ಸೇವೆ (ಪಾನಕ, ಕೋಸಂಬರಿ) ವಿತರಣೆ .

ಪೊಲೀಸ್ ಇಲಾಖೆಗೆ ಬಿ.ಎನ್. ರಾಜು ಆಗ್ರಹ

ಯುಗಾದಿ ಆಚರಣೆ : ಜೂಜಾಟಕ್ಕೆ ಕಡಿವಾಣ ಹಾಕಿ



• ಭದ್ರಾವತಿ: ಯುಗಾದಿ ಹಬ್ಬಕ್ಕೆ ತನ್ನದೇ ಆದ ಪರಂಪರೆ ಇದ್ದು, ಧಾರ್ಮಿಕ ಶ್ರೇಷ್ಠತೆ ಹೊಂದಿದೆ. ದೇಶದ ಪ್ರಮುಖ ಹಬ್ಬಗಳಲ್ಲಿ ಒಂದಾಗಿರುವ ಈ ಹಬ್ಬವನ್ನು ಬೇವು-ಬೆಲ್ಲ ಸವಿಯುವ ಮೂಲಕ ಸಂಭ್ರಮದಿಂದ ಆಚರಿಸಲಾಗುತ್ತದೆ. ಕ್ಷೇತ್ರದಲ್ಲಿ ಈ ಪವಿತ್ರ ಹಬ್ಬವನ್ನು ಜೂಜಾಟಕ್ಕೆ ಬಳಸಿಕೊಳ್ಳುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಪೊಲೀಸ್ ಇಲಾಖೆ ತಕ್ಷಣ ಜೂಜಾಟಕ್ಕೆ ಕಡಿವಾಣ ಹಾಕಲು ಮುಂದಾಗಬೇಕೆಂದು ಮಾನವ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಬಿ.ಎನ್ ರಾಜು ಆಗ್ರಹಿಸಿದ್ದಾರೆ.


ಭಾರತ ದೇಶ ಬಹುಸಂಸ್ಕೃತಿಯ ಜಾತ್ಯಾತೀತಿ ದೇಶವಾಗಿದ್ದು, ಯುಗಾದಿ ಹಬ್ಬ ಅತ್ಯಂತ ಶ್ರೇಷ್ಠತೆಯನ್ನು ಹೊಂದಿದೆ. ಅಲ್ಲದೆ ದೇಶದ ಸಂಸ್ಕೃತಿಯನ್ನು ಬಿಂಬಿಸುವ ಹಬ್ಬ ಇದಾಗಿದೆ. ಸೌಹಾರ್ದತೆ, ಸಮಾನತೆಯಿಂದ ದೇಶದ ಎಲ್ಲಾ ವರ್ಗದ ಜನರು ಆಚರಿಸುತ್ತಾರೆ. ಇಂತಹ ಹಬ್ಬದ ಸಂದರ್ಭದಲ್ಲಿ ಕ್ಷೇತ್ರದ ಪ್ರತಿ ಗ್ರಾಮಗಳಲ್ಲಿ, ವಾರ್ಡ್‌ಗಳಲ್ಲಿ ಅನೇಕ ವರ್ಷಗಳಿಂದಲೂ ಸುಮಾರು ವಾರಗಟ್ಟಲೆ ಶಾಮಿಯಾನ ಹಾಕಿಕೊಂಡು ಇಸ್ಪೀಟ್ ಸೇರಿದಂತೆ ಇನ್ನಿತರ ಜೂಜಾಟಗಳಲ್ಲಿ ತೊಡಗುತ್ತಿರುವುದು ಪವಿತ್ರವಾದ ಹಬ್ಬದ ಆಚರಣೆಗೆ ಮಾಡುತ್ತಿರುವ ಅಪಚಾರವಾಗಿದೆ. ಅಲ್ಲದೆ ಅನೇಕ ಜನಪ್ರತಿನಿಧಿಗಳು, ಊರಿನ ಮುಖಂಡರು ಇಸ್ಪೀಟ್ ಸೇರಿದಂತೆ ಇನ್ನಿತರ ಜೂಜಾಟದಲ್ಲಿ ಮುಂಚೂಣಿಯಲ್ಲಿದ್ದು, ಯುಗಾದಿ ಹಬ್ಬ ಜೂಜಾಟಕ್ಕೆ ಮೀಸಲಾದ ಹಬ್ಬ ಎಂಬ ತಪ್ಪು ಸಂದೇಶ ರವಾನಿಸಲಾಗುತ್ತಿದೆ ಎಂದು ರಾಜು ಕಿಡಿಕಾರಿದ್ದಾರೆ.

ಕೆಲವು ದಂಧೆಕೋರರು ಈ ಹಬ್ಬದ ಸಂದರ್ಭದಲ್ಲಿ ಜೂಜಾಟದ ಮೂಲಕ ಹಣ ದೋಚುತ್ತಿದ್ದು, ಕೂಲಿ ಕಾರ್ಮಿಕರು, ಬಡ ರೈತರು, ಆಟೋ ಚಾಲಕರು, ಬೀದಿ ವ್ಯಾಪಾರಿಗಳು ಹಣ ಕಳೆದುಕೊಳ್ಳುತ್ತಿದ್ದಾರೆ. ಬಡವರ ಮನೆಯಲ್ಲಿ ಕನಿಷ್ಠ ಹೋಳಿಗೆ ಒಬ್ಬಟ್ಟನ್ನು ಸಹ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆಯಲ್ಲಿ ಇರುವ ಮಹಿಳೆಯರು ಮತ್ತು ಮಕ್ಕಳು ಹಬ್ಬದ ದಿನಗಳಲ್ಲಿ ಉಪವಾಸ ಅನುಭವಿಸುತ್ತಿರುವುದು ದುರಾದೃಷ್ಟಕರ ಸಂಗತಿಯಾಗಿದೆ. ಯುಗಾದಿ ಹಬ್ಬಕ್ಕೆ ಜೂಜಾಟ ನಡೆಸಲು ಕಾನೂನಿನಲ್ಲಿ ಯಾವುದೇ ಅವಕಾಶ ಇಲ್ಲ, ಪೊಲೀಸ್ ಇಲಾಖೆ ತಕ್ಷಣ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕಾಗಿದೆ. 2003ರಲ್ಲಿ ಜಿಲ್ಲಾ ರಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿವಕುಮಾರ್ ರವರು ಈ ಜೂಜಾಟಕ್ಕೆ ಕಡಿವಾಣ ಹಾಕಿದ್ದರು. ಈ ಹಿನ್ನಲೆಯಲ್ಲಿ ಅನೇಕ ಬಡ ಜನರು ನಿಟ್ಟುಸಿರು ಬಿಟ್ಟಿದ್ದರು. ಯುಗಾದಿ ಹಬ್ಬ ಸಂಭ್ರಮದಿಂದ ಆಚರಿಸಿದ್ದರು ಎಂದು ರಾಜು ಮನವರಿಕೆ ಮಾಡಿದ್ದಾರೆ.

ಸಂಪಾದಕೀಯ

ವರ್ಷಂಪ್ರತಿಯ ಬೊಗಳುವಿಕೆ

ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಅಮೆರಿಕನ್ ಆಯೋಗಕ್ಕೆ (ಯುಎಸ್‌ಸಿಐಆರ್‌ಎಫ್) ವರ್ಷಂಪ್ರತಿ ಭಾರತದತ್ತ ನೋಡಿ ಬೊಗಳುವ ಚಟ. ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿಲ್ಲ, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದೆಲ್ಲಾ ಆರೋಪಿಸುತ್ತಿರುತ್ತದೆ. ಮೊದಲೆಲ್ಲ ಈ ಬೊಗಳಿಕೆ ದೊಡ್ಡ ಸುದ್ದಿ ಮಾಡುತ್ತಿದ್ದುದಿತ್ತು. ಆದರೆ ವರ್ಷ ಕಳೆದಂತೆ ಎಲ್ಲರಿಗೂ ಅದರ ಬೊಗಳುವಿಕೆಯ ಹಿಂದಿನ ಉದ್ದೇಶ ಅರ್ಥವಾಗತೊಡಗಿದೆ.



ಹಾಗಾಗಿ ಅದರ ವರದಿಗೆ ಈಗ ಯಾರೂ ಮಹತ್ವ ಕೊಡುತ್ತಿಲ್ಲ, ಕೇವಲ ಭಾರತದಲ್ಲಿರುವ ತಥಾಕಥಿತ ಜಾತ್ಯತೀತರು, ಕಾಂಗ್ರೆಸಿಗರು, ಕೆಲವು ಎಡಪಂಥೀಯ ಮಾಧ್ಯಮಗಳು ಮಾತ್ರ ಇದೇನೋ ಬಹಳ ದೊಡ್ಡ ಸುದ್ದಿ ಎಂಬಂತೆ ಅರಚಾಡುವುದಿದೆ.

ಹಿಂದುಗಳ ಮೇಲೆ ಪ್ರತಿವರ್ಷವೂ ವಿಷ ಕಾರುವ ಹಾಗೂ ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿಲ್ಲವೆಂದು ವಾದಿಸುವ ಯುಎಸ್‌ಸಿಐಆರ್‌ಎಫ್‌ಗೆ ಪಾಕಿಸ್ತಾನ, ಬಾಂಗ್ಲಾ ದೇಶ ಮುಂತಾದ ಇಸ್ಲಾಮಿಕ್ ದೇಶಗಳಲ್ಲಿ ಅಲ್ಲಿನ ಅಲ್ಪಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯಗಳು ಕಾಣುವುದೇ ಇಲ್ಲ. ಅಲ್ಲಿ ಹಿಂದುಗಳ ಸಂಖ್ಯೆ ಕುಸಿಯುತ್ತಿರುವುದು ಕೂಡಾ ಪರಿಗಣನೆಗೆ ಬರುವುದಿಲ್ಲ. ಅಮೆರಿಕದಲ್ಲೇ ಭಾರತೀಯರು ಎದುರಿಸುತ್ತಿರುವ ಪಕ್ಷಪಾತ, ಹಿಂದುಗಳ ಮೇಲೆ ನಡೆಯುತ್ತಿರುವ ದಾಳಿಗಳ ಕುರಿತೂ ಅದು ಗಮನ ಹರಿಸುವುದಿಲ್ಲ.

ಈ ಬಾರಿಯಂತೂ ಯುಎಸ್‌ಸಿಐಆರ್‌ಎಫ್ ಭಾರತದ ಗುಪ್ತಚರ ಸಂಸ್ಥೆ 'ರಾ' ಮತ್ತು ಆರೆಸ್ಸೆಸ್ಸನ್ನು ನಿಷೇಧಿಸಬೇಕೆಂದು ಅಮೆರಿಕನ್ ಸರಕಾರಕ್ಕೆ ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ. ಇವೆರಡೂ ಹಿಂದುಯೇತರರ ಧಾರ್ಮಿಕ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿವೆ ಎಂದು ಆರೋಪಿಸಿದೆ. ಯುಎಸ್‌ಸಿಐಆರ್‌ಎಫ್‌ನಲ್ಲಿ ಇರುವುದು ಯಾರೆಂಬುದನ್ನು ತಿಳಿದರೆ ಅದು ನಿರಂತರವಾಗಿ ಹಿಂದೂ ದ್ವೇಷ ಹಾಗೂ ಆರೆಸ್ಸೆಸ್ ಮೇಲೆ ರೋಷ ಹೊಂದಿರುವುದು ಏಕೆಂಬುದು ತಿಳಿಯದಿರದು. ಪಾಕಿಸ್ತಾನಿ-ಅಮೆರಿಕನ್ ಆ್ಯಕ್ಟಿವಿಸ್ಟ್ ಆಸಿಫ್ ಮೊಹಮ್ಮದ್ ಇದರ ಕಮಿಷನರ್ ಮತ್ತು ಉಪಾಧ್ಯಕ್ಷ. ಇನ್ನೊಬ್ಬ ಕಮಿಷನರ್ ಮೊಹಮ್ಮದ್ ಎಲಸೌಸಿ ಪಾಕಿಸ್ತಾನದ ಇಸ್ಲಾಮಿಕ್ ವಿಷಯದಲ್ಲಿ ಕಲಿತವನು ಹಾಗೂ ಶರೀಯಾ ಕಾನೂನಿನಲ್ಲಿ ಪದವಿ ಪಡೆದವನು. ನೀತಿ ವಿಶ್ಲೇಷಣಕಾರ ಸೆಮಾ ಹಸನ್ ಕೂಡಾ ಪಾಕಿಸ್ತಾನಿ. ಮೌರೀನ್ ಫರ್ಗುಸನ್ ಮತ್ತು ವಿಕಿ ಹಾರ್ಟ್‌ಜ್ಲರ್ ಎಂಬಿಬ್ಬರು ಸದಸ್ಯರು ಮತಾಂತರ ನಡೆಸುವ ಮಿಷನರಿಗಳೊಡನೆ ಸಂಪರ್ಕ ಹೊಂದಿರುವವರು. ಒಟ್ಟಿನಲ್ಲಿ ಈ ಸಮಿತಿಯಲ್ಲಿ ಇರುವವರೆಲ್ಲರೂ ಇಸ್ಲಾಮಿಕ್‌ವಾದಿಗಳು ಮತ್ತು ಕ್ರೈಸ್ತ ಮಿಷನರಿಗಳ ಪರವಾಗಿರುವವರು. ಅವರಿಂದ ಇಂತಹ ವರದಿ ಮೂಡುವುದು ಸಹಜವೇ ಆಗಿದೆ.

ಯುಎಸ್‌ಸಿಐಆರ್‌ಎಫ್ ವರದಿಯು ಪ್ರತಿವರ್ಷವೂ ಕಸದಬುಟ್ಟಿಗೆ ಎಸೆಯಲಷ್ಟೇ ಯೋಗ್ಯವಾದುದಾಗಿದೆ. ಆದರೆ ನಮ್ಮಲ್ಲಿನ ಕೆಲವು ದೇಶವಿರೋಧಿಗಳು ಇದೇ ವರದಿಯನ್ನು ಹಿಡಿದು ಜಗಿಯುತ್ತಾ ವಿಕೃತಾನಂದ ಪಡೆಯುತ್ತಾರೆನ್ನುವುದೇ ದುರಂತ.

ಯುದ್ಧಗಳಿಗೆ ಪರಾಭವವಾಗಲಿ, ಅಹಂಕಾರಕ್ಕೆ ಸೋಲಾಗಲಿ

ಗುರುತರ
• ಸೋಮಶೇಖರ ಸಿ.ಜೆ.
sompreethi@gmail.com



ಯುಗಾದಿ ಹಬ್ಬ ಕೇವಲ ಪಂಚಾಂಗ ಬದಲು, ಬೇವು-ಬೆಲ್ಲ, ಹೋಳಿಗೆ-ಒಬ್ಬಟ್ಟಿನ ಹಬ್ಬವಲ್ಲ, ಅದು ಕಾಲಚಕ್ರದ ಒಂದು ಪವಿತ್ರ ತಿರುವು. ಹಳೆಯ ವರ್ಷದ ನೋವು-ನಲಿವುಗಳ ನೆನಪಿನ ಚೀಲವನ್ನು ಕೆಳಗಿಳಿಸಿ, ಹೊಸ ವರ್ಷದ ಆಶಯಗಳ ಬುತ್ತಿಯನ್ನು ಹೆಗಲೇರಿಸಿಕೊಂಡು ಮುಂದೆ ಸಾಗುವ ಸಮಯವಿದು. ಚೈತ್ರ ಶುಕ್ಲ ಪಾಡ್ಯಮಿಯ ಈ ಶುಭ ಮುಹೂರ್ತದಲ್ಲಿ ವಿಶ್ವಾವಸು ಸಂವತ್ಸರಕ್ಕೆ ವಿದಾಯ ಹೇಳಿ, ಪರಾಭವ ಸಂವತ್ಸರವನ್ನು ಸ್ವಾಗತಿಸುತ್ತಿರುವ ಈ ಹೊತ್ತಿನಲ್ಲಿ, ಜಗತ್ತಿನ ಕಡೆಗೊಂದು ನೋಟ ಹರಿಸುವುದು ಅವಶ್ಯ.

ಇದಕ್ಕೆ ಕಾರಣಗಳೂ ಇವೆ. ಕಳೆದ ವಿಶ್ವಾವಸು ಸಂವತ್ಸರ ಜಗತ್ತಿಗೆ ಹಲವು ಕಹಿ ಅನುಭವಗಳನ್ನು ಕೊಟ್ಟಿತು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕಗಳ ರಾಜಕೀಯ ಜಾಗತಿಕ ವ್ಯಾಪಾರ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲಗೊಳಿಸಿತು. ನನ್ನ ಮಾತು ಕೇಳದಿದ್ದರೆ ಟ್ಯಾರಿಫ್ ಹಾಕುತ್ತೇನೆ ಎಂಬ ಧೋರಣೆ ಅಂತಾರಾಷ್ಟ್ರೀಯ ಸಂಬಂಧಗಳನ್ನು ಕಲುಷಿತಗೊಳಿಸಿತು. ಮಿತ್ರ ರಾಷ್ಟ್ರಗಳನ್ನೂ ಬಿಡದೆ, ನ್ಯಾಟೋ ಒಕ್ಕೂಟದ ದೇಶಗಳನ್ನೂ ಬೆದರಿಸುವ ಮಾತುಗಳು ಬಂದವು. ಈ ವ್ಯಕ್ತಿಗೆ ತನ್ನ ಮಿತ್ರರು ಯಾರು? ಶತ್ರುಗಳು ಯಾರು ಎಂಬುದೂ ಗೊತ್ತಾಗದಂತಾಯಿತು. ಫ್ರಾನ್ಸ್ ಅಧ್ಯಕ್ಷರನ್ನೂ ಹೀಯಾಳಿಸಲಾಯಿತು. ಎಲ್ಲವೂ ನಾನೇ, ಎಲ್ಲವನ್ನೂ ನಾನೇ ಮಾಡಿದೆ, ಅಲ್ಲಿ ಯುದ್ಧ ನಿಲ್ಲಿಸಿದೆ, ಇಲ್ಲಿ ಶಾಂತಿ ತಂದೆ ಎಂಬ ಅಹಂಕಾರದ ನುಡಿಗಳು ವಿಶ್ವದ ಕಿವಿಗಳಲ್ಲಿ ಅನುರಣಿಸಿದವು. ಈ ಅಹಂಕಾರದ ಪರಾಕಾಷ್ಠೆ ಎಂದರೆ, ಓಮಾನ್ ಮಧ್ಯಸ್ಥಿಕೆಯಲ್ಲಿ ಇರಾನ್ ತನ್ನ ಪರಮಾಣು ಕಾರ್ಯಕ್ರಮವನ್ನು ಕಡಿಮೆ ಮಾಡಲು ಒಪ್ಪಿ, ಶಾಂತಿಯ ಹಾದಿ ತೆರೆದಿದ್ದಾಗಲೇ, ಫೆಬ್ರವರಿ ಇಪ್ಪತ್ತೆಂಟರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಮಿಲಿಟರಿ ದಾಳಿ ನಡೆಸಿದವು. ಯುಗಾದಿ ಹಬ್ಬದ ಈ ಹೊತ್ತಿನಲ್ಲೂ ಆ ಯುದ್ಧ ಮುಂದುವರಿದಿದೆ. ಸಾವಿರಕ್ಕೂ ಹೆಚ್ಚು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಗಲ್ಫ್ ಪ್ರದೇಶದಲ್ಲಿ ಕ್ಷಿಪಣಿಗಳ ಮಳೆ ಸುರಿಯುತ್ತಿದೆ. ದುಬೈ ವಿಮಾನ ನಿಲ್ದಾಣದಲ್ಲಿ ವಿಮಾನ ಸೇವೆ ಸ್ಥಗಿತಗೊಂಡಿತ್ತು. ಇಡೀ ಮಧ್ಯಪ್ರಾಚ್ಯ ಮತ್ತೊಮ್ಮೆ ಕಂಪಿಸುತ್ತಿದೆ. ದುರಂತವೆಂದರೆ, ಈ ಯುದ್ಧ ಅರಿವಿಲ್ಲದೆಯೇ ಎಲ್ಲ ದೇಶಗಳನ್ನೂ ತನ್ನ ಸುಳಿಯೊಳಗೆ ತೆಗೆದುಕೊಂಡಿದೆ. ಒಂದಲ್ಲ ಒಂದು ರೀತಿಯಲ್ಲಿ ಕಷ್ಟ ಕೊಡುತ್ತಲೇ ಇದೆ.

ಆದರೆ ಈ ಕತ್ತಲೆಯ ನಡುವೆಯೇ ಪರಾಭವ ಎಂಬ ಹೆಸರಿನ ಸಂವತ್ಸರ ಬಂದಿದೆ. ಪರಾಭವ ಎಂದರೆ ಸೋಲು ಎಂಬ ಅರ್ಥವಿದ್ದರೂ, ವೈದಿಕ ಪರಂಪರೆಯಲ್ಲಿ ಈ ಪದಕ್ಕೆ ಹೆಚ್ಚು ಆಳವಾದ ಅರ್ಥವಿದೆ. ಅಹಂಕಾರದ ಸೋಲು, ಅಹಮಿಕೆಯ ಪತನ, ಜಂಭದ ಅಂತ್ಯ ಎಂಬುದೇ ಪರಾಭವ ಸಂವತ್ಸರದ ನಿಜವಾದ ಸಂದೇಶ. ಅರವತ್ತು ಸಂವತ್ಸರಗಳ ಚಕ್ರದಲ್ಲಿ ನಲವತ್ತನೇ ಸ್ಥಾನದಲ್ಲಿರುವ ಈ ಸಂವತ್ಸರ, ಜಗತ್ತಿಗೆ ವಿನಮ್ರತೆಯ ಪಾಠ ಕಲಿಸಲು ಬಂದಿದೆ ಎಂದು ಭಾವಿಸಬಹುದು. ತಾನೇ ಶ್ರೇಷ್ಠ, ತನ್ನ ಮಾತೇ ಅಂತಿಮ, ತನ್ನ ಬಲವೇ ಸರ್ವಸ್ವ ಎಂಬ ಭ್ರಮೆಯನ್ನು ಈ ಸಂವತ್ಸರ ಹೋಗಲಾಡಿಸಬೇಕಿದೆ.

ಹಾಗಾದರೆ ಈ ಹೊಸ ಸಂವತ್ಸರದಲ್ಲಿ ಜಗತ್ತಿಗೆ ಏನು ಬೇಕು? ಮೊದಲನೆಯದಾಗಿ, ಶಾಂತಿ.ಯುದ್ಧಗಳು ನಿಲ್ಲಬೇಕು. ಯಾವುದೇ ದೇಶ ಎಷ್ಟೇ ಬಲಶಾಲಿಯಾದರೂ, ಇನ್ನೊಂದು ದೇಶದ ಮೇಲೆ ದಾಳಿ ನಡೆಸಿ ಆಡಳಿತ ಬದಲಾವಣೆ ಮಾಡುವ ಹಕ್ಕು ಯಾರಿಗೂ ಇಲ್ಲ, ಬಾಂಬುಗಳಿಂದ ಬದಲಾವಣೆ ಬರುವುದಿಲ್ಲ, ಸಂವಾದದಿಂದ ಬರಬೇಕು. ಓಮಾನ್ ಮಧ್ಯಸ್ಥಿಕೆಯಲ್ಲಿ ಮುರಿದುಹೋದ ಶಾಂತಿ ಮಾತುಕತೆಯನ್ನು ಮತ್ತೆ ಕಟ್ಟಬೇಕಿದೆ. ರಾಜತಾಂತ್ರಿಕ ಮಾರ್ಗವನ್ನು ಪುನಃ ಆಯ್ಕೆ ಮಾಡಿಕೊಳ್ಳುವುದೇ ಪರಾಭವ ಸಂವತ್ಸರದ ಮೊದಲ ಆಶಯ. ಹಾಗೆಯೇ, ರಷ್ಯಾ-ಉಕ್ರೇನ್, ಇಸ್ರೇಲ್-ಪ್ಯಾಲೇಸ್ತೀನ್ ಮತ್ತು ಅಫ್ಘಾನಿಸ್ತಾನ-ಪಾಕಿಸ್ತಾನ ನಡುವಿನ ಯುದ್ಧಗಳೂ ನಿಲ್ಲಬೇಕು.

ಎರಡನೆಯದಾಗಿ, ಜಾಗತಿಕ ವ್ಯಾಪಾರ ವ್ಯವಸ್ಥೆ ಮತ್ತೆ ನ್ಯಾಯಸಮ್ಮತವಾಗಬೇಕು. ಸುಂಕಗಳನ್ನು ಆಯುಧವಾಗಿ ಬಳಸುವ ಪ್ರವೃತ್ತಿ ನಿಲ್ಲಬೇಕು. ಒಂದು ದೇಶದ ರೈತರ ಬೆವರು ಇನ್ನೊಂದು ದೇಶದ ರಾಜಕೀಯ ಲಾಭಕ್ಕೆ ಬಲಿಯಾಗಬಾರದು. ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಯನ್ನು ಹಿಂಡಿ ಹಿಪ್ಪೆ ಮಾಡುವ ಸುಂಕ ನೀತಿ ಬದಲಾಗಬೇಕು. ಜಗತ್ತಿನ ಎಲ್ಲ ದೇಶಗಳೂ ಸಮಾನ ಗೌರವದಿಂದ ವ್ಯಾಪಾರ ಮಾಡುವಂಥ ವಾತಾವರಣ ನಿರ್ಮಾಣವಾಗಬೇಕು. ಇದು ಕೇವಲ ಆರ್ಥಿಕ ಬೇಡಿಕೆಯಲ್ಲ, ಮಾನವೀಯ ಬೇಡಿಕೆ.



ಮೂರನೆಯದಾಗಿ, ಹವಾಮಾನ ಬದಲಾವಣೆಯ ವಿಷಯದಲ್ಲಿ ಜಗತ್ತು ಇನ್ನಷ್ಟು ಗಂಭೀರವಾಗಬೇಕಿದೆ. ಯುದ್ಧಗಳಿಗೆ ಸುರಿಯುವ ಹಣದ ಒಂದು ಭಾಗವನ್ನಾದರೂ ಪರಿಸರ ಸಂರಕ್ಷಣೆಗೆ ಮೀಸಲಿಟ್ಟರೆ, ಮುಂದಿನ ಪೀಳಿಗೆಗೆ ಬದುಕಲು ಯೋಗ್ಯವಾದ ಭೂಮಿಯನ್ನು ಉಳಿಸಬಹುದು. ಕ್ಷಿಪಣಿಗಳ ಬದಲು ಮರಗಳನ್ನು ನೆಡುವ, ಬಾಂಬುಗಳ ಬದಲು ನೀರಿನ ಯೋಜನೆಗಳನ್ನು ಕಟ್ಟುವ ಸಂಕಲ್ಪ ಈ ಪರಾಭವ ಸಂವತ್ಸರದ ಆಶಯವಾಗಬೇಕಿದೆ. ಭೂಮಿ ತಾಯಿಯ ಆರೋಗ್ಯ ಕಾಪಾಡುವುದು ಪ್ರತಿಯೊಂದು ರಾಷ್ಟ್ರದ ಕರ್ತವ್ಯ.

ನಾಲ್ಕನೆಯದಾಗಿ, ವಿಶ್ವಸಂಸ್ಥೆಯಂತಹ ಅಂತಾರಾಷ್ಟ್ರೀಯ ಸಂಸ್ಥೆಗಳು ಹೊಸ ಜೀವ ಪಡೆಯಬೇಕಿದೆ. ಒಂದು ದೇಶ ಇನ್ನೊಂದು ದೇಶದ ಮೇಲೆ ಯುದ್ಧ ಸಾರಿದಾಗ, ಭದ್ರತಾ ಮಂಡಳಿ ಮೌನವಾಗಿರುವುದು ನೋವಿನ ಸಂಗತಿ. ವಿಟೋ ಅಧಿಕಾರ ಎಂಬ ವಿಶೇಷ ಹಕ್ಕು ನ್ಯಾಯಕ್ಕೆ ಅಡ್ಡಗಾಲಾಗುತ್ತಿರುವುದನ್ನು ಜಗತ್ತು ಕಾಣುತ್ತಿದೆ. ಅಂತಾರಾಷ್ಟ್ರೀಯ ಕಾನೂನಿಗೆ ಬಲ ಬರಬೇಕು, ದೊಡ್ಡ ದೇಶಗಳಿಗೂ ಚಿಕ್ಕ ದೇಶಗಳಿಗೂ ಒಂದೇ ನಿಯಮ ಅನ್ವಯಿಸಬೇಕು ಎಂಬ ಕೂಗು ಬಲಗೊಳ್ಳಬೇಕಿದೆ.

ಐದನೆಯದಾಗಿ, ಭಾರತದ ಪಾತ್ರ ಈ ಸಂದರ್ಭದಲ್ಲಿ ಬಹಳ ಮಹತ್ವದ್ದಾಗಿದೆ. ಭಾರತ ಸದಾ ಅಹಿಂಸೆ ಮತ್ತು ಶಾಂತಿಯ ಧ್ವಜವಾಹಕನಾಗಿ ನಿಂತಿರುವ ದೇಶ. ಬುದ್ಧ ಮತ್ತು ಗಾಂಧಿಯ ನಾಡಿನಿಂದ ಜಗತ್ತಿಗೆ ಶಾಂತಿಯ ಸಂದೇಶ ಹೋಗಬೇಕು. ಇರಾನ್ ಸಂಕಷ್ಟದ ಸಮಯದಲ್ಲಿ ಮಧ್ಯಸ್ಥಿಕೆಯ ಪಾತ್ರ ವಹಿಸಬಹುದಾದ ದೇಶಗಳ ಸಾಲಿನಲ್ಲಿ ಭಾರತ ಮುಂದೆ ಬರಬೇಕಿದೆ. ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ, ಕೇವಲ ಆರ್ಥಿಕ ಬೆಳವಣಿಗೆಯಲ್ಲಿ ಮಾತ್ರ ಮುಂದೆ ಹೋಗದೆ, ನೈತಿಕ ನಾಯಕತ್ವದಲ್ಲೂ ಮುಂಚೂಣಿಯಲ್ಲಿ ನಿಲ್ಲಬೇಕಿದೆ. ವಸುಧೈವ ಕುಟುಂಬಕಂ ಎಂಬ ಮಾತು ಕೇವಲ ಶಿಖರ ಸಮ್ಮೇಳನಗಳ ಘೋಷಣೆಯಾಗದೆ, ನಿಜ ಜೀವನದ ಆಚರಣೆಯಾಗಬೇಕಿದೆ.

ಯುಗಾದಿಯ ಬೇವು-ಬೆಲ್ಲ ನಮಗೆ ಕಲಿಸುವ ಪಾಠ ಏನೆಂದರೆ, ಜೀವನ ಸಿಹಿ-ಕಹಿಗಳ ಮಿಶ್ರಣ ಎಂಬುದು. ಕಳೆದ ವರ್ಷ ಕಹಿ ಹೆಚ್ಚಿತ್ತು, ಯುದ್ಧ-ಸಂಘರ್ಷ-ಅಹಂಕಾರಗಳ ಬೇವಿನ ರುಚಿ ಬಹುವಾಗಿತ್ತು. ಆದರೆ ಈ ಹೊಸ ಸಂವತ್ಸರದಲ್ಲಿ ಬೆಲ್ಲದ ಸಿಹಿ ಹೆಚ್ಚಾಗಲಿ ಎಂಬ ಆಸೆ ಪ್ರತಿಯೊಬ್ಬರದು.

ಪರಾಭವ ಸಂವತ್ಸರ ಕೇವಲ ಅಹಂಕಾರಿಗಳ ಸೋಲನ್ನು ಸೂಚಿಸುವುದಿಲ್ಲ, ಅದು ವಿನಮ್ರತೆಯ ವಿಜಯವನ್ನೂ ಸೂಚಿಸುತ್ತದೆ. ಯಾವ ರಾಷ್ಟ್ರ ತನ್ನ ಸೈನಿಕ ಬಲದಿಂದ ಜಗತ್ತನ್ನು ಆಳಬಯಸುತ್ತದೋ ಆ ರಾಷ್ಟ್ರ ಅಂತಿಮವಾಗಿ ಸೋಲನ್ನೇ ಅನುಭವಿಸುತ್ತದೆ ಎಂಬುದನ್ನು ಇತಿಹಾಸ ಮತ್ತೆ ಮತ್ತೆ ಹೇಳಿದೆ. ರೋಮನ್ ಸಾಮ್ರಾಜ್ಯದಿಂದ ಹಿಡಿದು ಬ್ರಿಟಿಷ್ ಸಾಮ್ರಾಜ್ಯದವರೆಗೆ, ಎಲ್ಲ ಅಹಂಕಾರಿ ಶಕ್ತಿಗಳೂ ಕೊನೆಗೆ ಪರಾಭವವನ್ನೇ ಕಂಡಿವೆ. ಇಂದಿನ ಅಮೆರಿಕವೂ ಈ ಪಾಠ ಕಲಿಯಲೇಬೇಕಿದೆ. ಬಲವಂತದಿಂದ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ, ಬಾಂಬುಗಳಿಂದ ಪ್ರಜಾಪ್ರಭುತ್ವ ನಿರ್ಮಿಸಲಾಗದು ಎಂಬುದನ್ನು ಇರಾಕ್, ಅಫ್ಘಾನಿಸ್ತಾನ, ಲಿಬಿಯಾಗಳ ಉದಾಹರಣೆಗಳು ಸಾಬೀತುಪಡಿಸಿವೆ.

ಪರಾಭವ ಸಂವತ್ಸರದ ವಸಂತ ಋತುವಿನೊಂದಿಗೆ ಹೊಸ ಚಿಗುರುಗಳು ಮೂಡುತ್ತಿವೆ. ಪ್ರಕೃತಿ ಪ್ರತಿ ವರ್ಷ ಹೊಸದಾಗಿ ಹೂವರಳಿಸುತ್ತದೆ. ಅದೇ ರೀತಿ ಮಾನವ ಸಮಾಜವೂ ಹೊಸ ಆಶಾವಾದದಿಂದ ಚಿಗುರಬೇಕಿದೆ. ಈ ಸಂವತ್ಸರದಲ್ಲಿ ಪ್ರತಿಯೊಂದು ಕುಟುಂಬದಲ್ಲಿ ಆರೋಗ್ಯ ತುಂಬಿರಲಿ, ಪ್ರತಿ ಮಗುವಿನ ಕೈಯಲ್ಲಿ ಪುಸ್ತಕವಿರಲಿ, ಪ್ರತಿ ರೈತನ ಹೊಲದಲ್ಲಿ ನೀರಿರಲಿ. ಯುದ್ಧಗಳ ಶಬ್ದ ಮಾಯವಾಗಿ, ಮಕ್ಕಳ ನಗುವಿನ ಶಬ್ದ ಕೇಳಿಸಲಿ. ಬಂದೂಕುಗಳ ಜಾಗದಲ್ಲಿ ಪುಸ್ತಕಗಳು, ಕ್ಷಿಪಣಿಗಳ ಜಾಗದಲ್ಲಿ ರೋಗಿಗಳಿಗೆ ಔಷಧಿ ಇರಲಿ.

ಶ್ರೀ ಪರಾಭವ ನಾಮ ಸಂವತ್ಸರ ಅಹಂಕಾರಿಗಳಿಗೆ ಎಚ್ಚರಿಕೆಯ ಗಂಟೆ, ಆದರೆ ಸಜ್ಜನರಿಗೆ ಆಶಾಕಿರಣ. ಬೇವಿನ ಕಹಿಯನ್ನು ಸ್ವೀಕರಿಸಿ, ಬೆಲ್ಲದ ಸಿಹಿಯನ್ನು ಹಂಚಿ ತಿನ್ನೋಣ. ಈ ವರ್ಷ ಜಗತ್ತು ಸ್ವಲ್ಪವಾದರೂ ಒಳ್ಳೆಯದಾಗಲಿ, ಅಹಂಕಾರ ಕಳಚಲಿ, ವಿನಮ್ರತೆ ತುಂಬಲಿ, ಯುದ್ಧ ನಿಲ್ಲಲಿ, ಶಾಂತಿ ಹರಡಲಿ ಎಂಬ ಸಂಕಲ್ಪದೊಂದಿಗೆ ಎಲ್ಲರಿಗೂ ಪರಾಭವ ಸಂವತ್ಸರದ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು.

ಶಾಂತಿಯತ್ತ ಮನಸಿರಲಿ

ರತ್ನೋದಾರಚತುಃಸಮುದ್ರರಶನಾಂ ಭುಕ್ತ್ವಾ ಭುವಂ ಕೌರವೋ
ಭಗ್ನೋರುಃ ಪತಿತಃ ಸ ನಿಷ್ಪರಿಜನೋ ಜೀವನ್ಸ್ವಕೈರ್ಭಕ್ಷಿತಃ ।
ಗೋಪೈರ್ವಿಶ್ವಜಯೀ ಜಿತಃ ಸ ವಿಜಯಃ ಕ್ಷ್ವೇಃ ಕ್ಷಿತಾ ವೃಷ್ಣಯಃ
ತಸ್ಮಾತ್ ಸರ್ವಮಿದಂ ವಿಚಾರ್ಯ ಸುಚಿರಂ ಶಾಂತ್ಯೈ ಮನೋऽಯತಾಮ್॥

-ಕ್ಷೇಮೇಂದ್ರ ಭಾರತ ಮಂಜರಿ



ಚತುಸಮುದ್ರ ಮುದ್ರಿತವಾದ ಭೂಮಿಯ ಒಡೆತನವನ್ನು ಭೋಗಿಸಿದ ದುರ್ಯೋಧನನು ಕೊನೆಗೆ ತೊಡೆ ಮುರಿದು ಬಿದ್ದು, ಪರಿಜನರೊಬ್ಬರೂ ಇಲ್ಲದೆ ಜೀವವಿರುವಾಗಲೇ ತೋಳಗಳಿಗೆ ತುತ್ತಾದನು. ಜಗತ್ತನ್ನೇ ಜಯಿಸಿದ ಅರ್ಜುನನು ಗೊಲ್ಲರಿಗೆ ಸೋತು ಹೋದನು. ವೃಷ್ಣಿ ಕುಲದವರು ಜೊಂಡು ಹುಲ್ಲುಗಳಿಂದ ಹೊಡೆದಾಡಿ ನಾಶ ಹೊಂದಿದರು.ಇವೆಲ್ಲವನ್ನೂ ದೀರ್ಘಕಾಲ ವಿಚಾರ ಮಾಡಿ ಶಾಂತಿಯ ಕಡೆ ಮನಸ್ಸನ್ನು ಕೊಡಿ- ಎಂಬುದು ಶ್ಲೋಕಾರ್ಥ.

ಎಲ್ಲರೂ ಬಯಸುವುದು ಶಾಂತಿ-ನೆಮ್ಮದಿಯ ಬದುಕನ್ನು. ಇದು ಹೊರಗೆ ಸಿಗುವಂಥದ್ದಲ್ಲ, ಹಣ ಕೊಟ್ಟು ಕೊಂಡು ಕೊಳ್ಳುವಂಥದ್ದೂ ಅಲ್ಲ, ನಾವು ನಮ್ಮಲ್ಲಿಯೇ ಕಂಡುಕೊಳ್ಳಬೇಕಾದದ್ದು, ತನ್ನೊಳಗೆ ಕಂಡುಕೊಳ್ಳಲಾಗದವನು ಹೊರಗಡೆ ಕಂಡುಕೊಳ್ಳಲು ಮುಂದಾಗಿ ಸೋಲುತ್ತಾನೆ. ನಮ್ಮೊಳಗೆ ನಾವು ಕಂಡುಕೊಳ್ಳುವುದು ಹೇಗೆ? ನಿರಂತರ ಸಾಧನೆ, ಉತ್ತಮ ಸಂಸ್ಕಾರ, ತ್ಯಾಗದ ಮನೋಭಾವ, ಅಲ್ಪತೃಪ್ತಿ... ಇತ್ಯಾದಿ ಸದಂಶಗಳನ್ನು ಅಳವಡಿಸಿಕೊಳ್ಳುವುದರಿಂದ ಸಾಧ್ಯವಿದೆ. ಸಂಪತ್ತಿನ ಬೆನ್ನೇರಿ ಸಾಗುವುದು, ಅಧಿಕಾರದ ಮದವೇರುವುದು, ಸೌಂದರ್ಯದ ದಾಸರಾಗುವುದು ಅಶಾಂತಿಯನ್ನು ತಂದುಕೊಡುತ್ತದೆಯೇ ವಿನಾ ಶಾಂತಿಯನ್ನು ತಂದುಕೊಡದು.

ಸುಯೋಧನನಿಗೆ ಯಾವ ಕೊರತೆಯಿತ್ತು? ಅಪಾರ ಭೂಮಿಯ ಒಡೆಯನಾತ. ವೈಭೋಗಗಳ ಕೊರತೆಯೇ ಇಲ್ಲ, ಆಳು-ಕಾಳುಗಳು, ರಕ್ಷಕ ಭಟರು ಯಾವುದೂ ಇಲ್ಲವೆಂದಿಲ್ಲ, ಇಷ್ಟೆಲ್ಲ ಇದ್ದು ಶಾಂತಿ ಮಾತ್ರ ಇರಲಿಲ್ಲ, ಜೀವನದ ಕೊನೆ ಭೀಭತ್ಸವಾಗಿ ಹೋಯಿತು. ರಣಾಂಗಣದಲ್ಲಿ, ತೊಡೆ ಮುರಿದು ಬಿದ್ದು, ಸುಖದಲ್ಲಿ ಜತೆಯಲ್ಲಿದ್ದವರಾರೂ ಇಲ್ಲ, ಪರಿಜನರು ಇಲ್ಲದೇ ಒದ್ದಾಡುವ ಸ್ಥಿತಿ. ಒಂಟಿಯಾಗಿ, ಅಸಹಾಯಕನಾಗಿ ಬಿದ್ದಿರುವಾಗ ತೋಳಗಳಿಗೆ ಆಹಾರವಾಗಬೇಕಾಯ್ತು.

ಜಗತ್ತನ್ನೇ ಜಯಿಸಿದ ತ್ರಿಲೋಕ ವಿಜಯಿಯಾದ ಅರ್ಜುನನ ಕಥೆಯೂ ಅಷ್ಟೇ ಮೂರು ಲೋಕದ ಗಂಡನೆನಿಸಿ, ದಶನಾಮಗಳಿಂದ ಖ್ಯಾತನಾದ ಅವನು ಗೊಲ್ಲರಿಗೆ ಸೋತುಹೋದ. ಕಣ್ಣೆದುರೇ ಸ್ತ್ರೀಯರನ್ನು ಹಿಂಸಿಸುತ್ತಿರುವಾಗ ಏನೂ ಮಾಡಲಾರದ ಅಸಹಾಯಕನಾದ. ಅವನ ಪರಾಕ್ರಮದ ಕಥೆ ಶಾಂತಿಯನ್ನು ತಂದುಕೊಡಲಿಲ್ಲ.ಯಾದವರು ಜೊಂಡು ಹುಲ್ಲಿನಿಂದ ಹೊಡೆದಾಡಿಕೊಂಡು ತಮ್ಮನ್ನು ತಾವೇ ನಾಶಪಡಿಸಿಕೊಂಡರು. ಅಶಾಂತಿಯ ಬದುಕಾಗಿ ಬದಲಾಯಿತು. ಈ ಎಲ್ಲ ಘಟನೆಗಳನ್ನು ಅವಲೋಕಿಸಿದಾಗ ಬಾಹ್ಯ ವಸ್ತುಗಳಲ್ಲಿ ಸುಖ, ಶಾಂತಿ, ನೆಮ್ಮದಿ ಸಿಗದು ಎಂಬುದು ಸುಸ್ಪಷ್ಟ, ದೀರ್ಘಕಾಲ ಯೋಚಿಸಬೇಕು; ಆತ್ಮಾವಲೋಕನ ಮಾಡಿ ಕೊಳ್ಳಬೇಕು. ಅಂತರ್‌ಮುಖಿಯಾಗುವುದನ್ನು ಅರಿತುಕೊಳ್ಳಬೇಕು ಆಗ ಶಾಂತಿಯತ್ತ ಮನಸ್ಸು ಹೊರಳಲು ಪ್ರಾರಂಭವಾಗುತ್ತದೆ. ಜೀವನದಲ್ಲಿ ಶಾಂತಿ ಲಭಿಸುತ್ತದೆ. 'ಶಾಂತಿ ತುಲೋಲ ತಪೋನಾಸ್ತಿ' ಶಾಂತಿಯೆಂಬ ಅಸ್ತ್ರವನ್ನು ಕಂಡುಕೊಂಡು ಧರಿಸಿದರೆ ನಿತ್ಯ ನೆಮ್ಮದಿ.

ವಿಷಾದವೆಂಬ ವರ್ತುಲದೊಳಗೆ

ನಾವು ನಮ್ಮೊಳಗೆ ನೆಮ್ಮದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ನೆಮ್ಮದಿಯನ್ನು ಕಲಕುವ ಸಂಗತಿಗಳನ್ನು ನಿವಾರಿಸುವುದಕ್ಕೆ ಕಲಿಯಬೇಕು. ಅದಾಗದಿದ್ದರೆ ಮರೆಯುವುದಕ್ಕೆ ಕಲಿಯಬೇಕು.


ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಸದಾ ಸಂತೋಷವಾಗಿರಬೇಕು ಎಂಬುದು ಎಲ್ಲರ ಬಯಕೆ. ಅದು ಜೀವಿಯ ಸ್ವಭಾವ. ಅದಕ್ಕಾಗಿ ನಿತ್ಯ ಪ್ರಯತ್ನ. ದುಃಖ ಬೇಕು ಎಂದು ಯಾರೂ ಬಯಸುವುದಿಲ್ಲ, ಆದರೂ ಜೀವನದಲ್ಲಿ ನೋವಿನ, ದುಃಖದ ಗಳಿಗೆಗಳು ಬಂದೇ ಬರುತ್ತವೆ. ಪ್ರಮಾಣದಲ್ಲಿ, ತೀವ್ರತೆಯಲ್ಲಿ ವ್ಯತ್ಯಾಸವಿರಬಹುದು. ದುಃಖವೇ ಇಲ್ಲ ಎನ್ನುವ ಭಾಗ್ಯ ಯಾರಿಗೂ ಇಲ್ಲ, ಕೆಲವು ಸಲ ನಮ್ಮ ಜೀವನದ ಸಂಕಟಗಳಿರಲಿ, ವೈಯಕ್ತಿಕವಲ್ಲದ ಕಾರಣಗಳಿಗೂ ನಾವು ವಿಷಾದವನ್ನು ಅನುಭವಿಸುತ್ತೇವೆ. ಅದು ಕಣ್ಣೀರಿಳಿಸುವ ದುಃಖವಲ್ಲ, ಎದೆಯನ್ನು ಭಾರವಾಗಿಸುವ ಭಾವ. ಕುರುಕ್ಷೇತ್ರದಲ್ಲಿ ಉಭಯ ಸೇನಾ ಮಧ್ಯದಲ್ಲಿ ನಿಂತು ಎದುರಾಳಿಗಳನ್ನು ಕಂಡಾಗ ಅರ್ಜುನನಲ್ಲಿ ಹುಟ್ಟಿದಂತಹ ವಿಷಾದ. ಅವನು ಏನೋ ಮಾಡಿದ್ದಕ್ಕಾಗಿ ಅದರ ಪರಿಣಾಮವನ್ನು ನೆನೆದು ಹುಟ್ಟಿದ ಪಶ್ಚಾತ್ತಾಪದ ದುಃಖವು ಅದಲ್ಲ, ಮಾಡಬೇಕಾಗಿರುವ ಕಾರ್ಯದ ಪರಿಣಾಮವನ್ನು ನೆನೆದು ಹುಟ್ಟಿದ್ದು. ಅದಕ್ಕೆ ಅರ್ಜುನ ಕಾರಣನಲ್ಲ, ಅಲ್ಲಿ ಸಂಭವಿಸಿದ್ದರ ಅಥವಾ ಸಂಭವಿಸಲಿರುವ ಯಾವುದಕ್ಕೂ ಅವನಿಗೆ ಉತ್ತರದಾಯಿತ್ವವಿಲ್ಲ, ಆದರೂ ವಿಷಾದ ಆವರಿಸಿತು. ಕೃಷ್ಣ ಆ ವಿಷಾದವನ್ನು ತೊಡೆದು ಕರ್ತವ್ಯಕ್ಕೆ ಸಿದ್ಧನಾಗಿಸಿದ. ಅದು ನಮ್ಮ ವಿವಕ್ಷೆಯಲ್ಲ, ನಮ್ಮನ್ನು ಸಾಂತ್ವನಗೊಳಿಸುವುದಕ್ಕೆ ಯಾವ ಕೃಷ್ಣನೂ ಬರಲಾರ.

ಹಾಗೆಂದು ತೀವ್ರವಾದ ವಿಷಾದ ಅಥವಾ ವಿಷಣ್ಣತೆಗೆ ಮನಶ್ಶಾಸ್ತ್ರದಲ್ಲಿ ಇನ್ನೊಂದು ಹೆಸರಿದೆ. ಅದು ಖಿನ್ನತೆ ಅಥವಾ ಡಿಪ್ರೆಷನ್. ಅದು ಮನೋರೋಗ. ಅದು ಉಲ್ಬಣಿಸಿದರೆ ಅದರ ಪರಿಣಾಮಗಳು ಗಂಭೀರ. ತಾನು ನಿರುಪಯುಕ್ತ, ಯಾರಿಗೂ ತಾನು ಬೇಡದವನು ಎಂಬ ಅನಿಸಿಕೆ ಪ್ರಬಲಿಸಿ, ಯಾರಿಗೂ ಬೇಡದ ತಾನು ಯಾಕಿರಬೇಕು ಎನ್ನುವಲ್ಲಿಗೆ ತಲುಪಿ, ಜೀವ ಕಳೆದುಕೊಳ್ಳುವ ಪ್ರಯತ್ನಕ್ಕೂ ರೋಗಿ ಕೈಯಿಕ್ಕಬಹುದು. ಈ ಖಿನ್ನತೆಯು ತನ್ನಲ್ಲಿದೆ ಎಂಬ ಅರಿವೂ ಅದಕ್ಕೆ ಒಳಗಾದವನಿಗೆ ತಿಳಿಯುವುದೇ ಇಲ್ಲ, ಬೇರೆಯವರು ಹೇಳಿದರೂ ಅವನು ಸುಲಭದಲ್ಲಿ ಒಪ್ಪುವುದಿಲ್ಲ, ಇರಲಿ, ಇದಕ್ಕೆ ಕಾರಣಗಳಿರುತ್ತವೆ. ಕಾರಣಗಳಿರುವುದರಿಂದ ಚಿಕಿತ್ಸೆಯೂ ಇರುತ್ತದೆ. ಚಿಕಿತ್ಸೆಯಿಂದ ವ್ಯಕ್ತಿ ಚೇತರಿಸಿ, ಆರೋಗ್ಯಪೂರ್ಣ ಜೀವನವನ್ನು ನಡೆಸುವಂತಾಗುತ್ತದೆ. ಇಲ್ಲಿ ಹೇಳುತ್ತಿರುವ ವಿಷಾದ ಆ ಬಗೆಯದ್ದಲ್ಲ.

ನಾವು ಕಾರಣವಲ್ಲದ, ಎಷ್ಟೋ ಸಲ ನಮಗೆ ಸಂಬಂಧವೂ ಇಲ್ಲದ ಜಗತ್ತಿನ ವಿದ್ಯಮಾನಗಳ ಪರಿಣಾಮದಿಂದ ನಮ್ಮಲ್ಲಿ ಬೇಸರ ಹುಟ್ಟುತ್ತದೆ. ಆ ಬೆಳವಣಿಗೆಯಿಂದ ಎಷ್ಟೋ ಜೀವಗಳು ಸಂಕಟ ಪಡುತ್ತವಲ್ಲ ಎಂದು ನೆನೆದು ತಳಮಳವಾಗುತ್ತದೆ. ಹಾಗೆಂದು ಅದನ್ನು ಬದಲಾಯಿಸಲಾಗದ ಅಸಹಾಯಕತೆಯ ಅರಿವು ನಮಗಿರುತ್ತದೆ. ಅದರ ಅರಿವು ಇರುವುದರಿಂದಲೇ ವಿಷಾದವು ಗಾಢವಾಗುವುದು. ಒಮ್ಮೆ ಉಂಟಾದರೆ ಗಂಟೆಗಳೋ, ದಿನಗಳೋ ಅದು ಕಾಡುವುದು. ನಮ್ಮ ಖಾಸಗಿ ಬದುಕಿನಲ್ಲಿ ಸುಖವಾಗಿದ್ದಾಗಲೂ ಈ ವಿಷಾದವು ಬಿಡುವುದಿಲ್ಲ, ಉದಾಹರಣೆಗೆ ನಮಗೆ ಸಂಬಂಧಿಸದ ಎರಡು ದೇಶಗಳ ನಡುವೆ ಯುದ್ಧವಾಗುತ್ತಿದೆ ಎಂದು ಭಾವಿಸೋಣ. ಅದರಿಂದಾಗಿ ಆ ದೇಶಗಳಿಗಾಗುವ ನಷ್ಟ, ಭಯಂಕರವಾದ ಕ್ಷಿಪಣಿಗಳ, ಸ್ಫೋಟಕಗಳ ಪ್ರಯೋಗ, ಅದರಿಂದಾಗುವ ವಿನಾಶ, ಸೈನಿಕರ ಸಾವು, ನೋವುಗಳು ನಮ್ಮ ಕಣ್ಣೆದುರು ಕಾಣಿಸುತ್ತವೆ. ಮಾಧ್ಯಮಗಳು ಅಷ್ಟು ದೃಶ್ಯಗಳನ್ನು ನಮ್ಮ ಮನೆಯಲ್ಲಿ ಸಿನಿಮಾದಂತೆ ತೋರಿಸುತ್ತವೆ. ಆ ಭಯಾನಕತೆ ನಮ್ಮನ್ನು ನಡುಗಿಸುತ್ತದೆ. ಏನೇನೂ ಅಪರಾಧ ಮಾಡದ ನಮ್ಮಂತಿರುವ ಸಾಮಾನ್ಯ ಜನ ಯುದ್ಧದ ಬೆಂಕಿಗೆ ಬಲಿಯಾಗುವುದನ್ನು ಕಂಡು 'ಅಯ್ಯೋ ಯಾಕೆ ಹೀಗಾಗುತ್ತದೆ?' ಎಂದು ಕೇಳಿಕೊಳ್ಳುತ್ತೇವೆ. ಅಷ್ಟೇ ನಮ್ಮಿಂದ ಸಾಧ್ಯವಿರುವುದು. ಈ ಮಿತಿಯನ್ನೆಣಿಸಿ ವಿಷಾದವು ಕಾಣಿಸುವುದು.



ಅದಕ್ಕಿಂತ ಹೆಚ್ಚು ಆ ದೃಶ್ಯಗಳನ್ನು ಕಂಡು ಸಂಭ್ರಮಿಸುವ ಸಮೂಹದ ಆವೇಶ ಉಂಟಲ್ಲ, ಅದು ಇನ್ನೂ ಭಯಾನಕವಾದುದು. ನಮ್ಮ ಜತೆಗಿರುವ ಮಂದಿಯೇ, ಸಾಮಾಜಿಕ ಕೂಟಗಳಲ್ಲಿ ನಮ್ಮೊಂದಿಗೆ ಸೇರಿಕೊಳ್ಳುವವರೇ, ಗೆಳೆಯರೇ, ಬಂಧುಗಳೇ ಈ ನೆತ್ತರಿನ ಓಕುಳಿಯನ್ನು ಕಂಡು ಕೇಕೆ ಹಾಕುತ್ತಾರಲ್ಲ, ಆಗ ಉಂಟಾಗುವ ವಿಷಾದ ಇದಕ್ಕಿಂತ ಅಧಿಕವಾದುದು, ಗಾಢವಾದುದು. ಈ ಮನುಷ್ಯರು ಯಾಕಿಷ್ಟು ಕಠೋರವಾದ ಮನಸ್ಸನ್ನು ಹೊಂದಿದ್ದಾರೆ ಎಂಬ ಪ್ರಶ್ನೆ ಮೂಡುವುದು. ನಾವೆಷ್ಟು ಅಸಹಾಯಕರು, ಅಮಾಯಕರು ಎನ್ನುವುದನ್ನು ಭಾವಿಸಿ ಕಾಡುವ ನೋವು ಅದು. ಇದು ನಮ್ಮ ಕೈಮೀರಿದ ಸಂಗತಿ. ಇದನ್ನು ನಿಲ್ಲಿಸಲು ಅಥವಾ ಬದಲಾಯಿಸಲು ನಾವು ಶಕ್ತರಲ್ಲ, ಮನುಷ್ಯರು ಸಾಯುವುದನ್ನೂ, ಅದಕ್ಕಾಗಿ ಸಂಭ್ರಮಿಸುವವರನ್ನೂ ಸುಮ್ಮನೆ ನೋಡುತ್ತಿರುವ ನಮ್ಮ ಸ್ಥಿತಿಯನ್ನು ನೆನೆದು ಹುಟ್ಟುವ ವಿಷಾದ. ಇದಕ್ಕೆ ಕಾರಣ ನಾವಲ್ಲ ಎಂಬುದು ತಿಳಿದಿದೆ. ಅದರ ಹೊಣೆಯನ್ನು ನಮ್ಮ ಹೆಗಲ ಮೇಲೆ ಹೊರಬೇಕಾದ ಅಗತ್ಯವಿಲ್ಲ, ನಿಜವೇ. ಹಾಗಿದ್ದಾಗಲೂ ಇದನ್ನು ತಡೆಯುವುದಕ್ಕೆ ನಮ್ಮಿಂದಾಗುವುದಿಲ್ಲವಲ್ಲ ಎಂಬ ಚಿಂತೆಯಿಂದ ಹುಟ್ಟುವ ವಿಷಾದ.

ನಾವೇನೂ ಮಾಡಲಾರೆವು ಎಂಬ ಪರಿಸ್ಥಿತಿಯಲ್ಲಿ ಮನಸ್ಸು ವಿಷಾದವನ್ನು ಅನುಭವಿಸುತ್ತ ಇರಬೇಕೇ? ಹೀಗೇ ಚಿಂತಿಸಿದಷ್ಟೂ ಗಾಢವಾಗುವ ವಿಷಾದ ವರ್ತುಲದಿಂದ ಹೊರಗೆ ಬರುವ ದಾರಿಯೇ ಇಲ್ಲವೇ? ಉಂಟು. ಮನಸ್ಸಿನ ಈ ಕುಗ್ಗುವಿಕೆಗೆ ಹೊರ ಜಗತ್ತಿನ ಬೆಳವಣಿಗೆಗಳು ಅಹಿತಕರವಾಗಿರುವುದು ಕಾರಣ. ಜಗತ್ತಿನಲ್ಲಿ ಅಹಿತ ಮಾತ್ರವಲ್ಲ, ಹಿತಕರವಾದುದು ಇದೆಯಷ್ಟೆ? ಅದನ್ನು ಗುರುತಿಸಿಕೊಂಡರೆ ಈ ವಿಷಾದ ಮರೆಯಾಗುತ್ತದೆ.

ಡಿ ವಿ ಜಿ ಅವರು ಹೇಳಿದ ಮಾತು ನೆನಪಾಗುತ್ತದೆ. 'ಗುರುತಿಸೊಳಿತಿರುವುದನು ಕೇಡುಗಳ ನಡುವೆ' ಅನ್ನುತ್ತಾರೆ ಅವರು. ಕೆಟ್ಟದ್ದು ತುಂಬ ಇದೆ, ನಿಜ. ಆದರೆ ಅವುಗಳ ನಡುವೆ ಒಳಿತೂ ಇದೆ. ಅದನ್ನು ಗುರುತಿಸು. 'ಹರುಷಕಿದೆ ದಾರಿ'. ಎಲ್ಲವೂ ಕೆಡುಕಲ್ಲ, ಒಳ್ಳೆಯದೂ ಇದೆ ಎನ್ನುವ ಭರವಸೆ ವಿಷಾದದ ಪ್ರವಾಹವನ್ನು ದಾಟುವುದಕ್ಕೆ ಸಹಾಯಕವಾಗುತ್ತದೆ.

ಇನ್ನೊಂದು ದಾರಿಯೂ ಇದೆ. ತತ್ಕಾಲಕ್ಕೆ ಇದನ್ನು ಮರೆಯುವುದು. ಆಡಳಿತದ ಭ್ರಷ್ಟಾಚಾರವೋ, ಯಾರದೋ ಅಮಾನವೀಯ ವರ್ತನೆಯೋ ಮನಸ್ಸಿಗೆ ಘಾಸಿಯುಂಟುಮಾಡಿದೆ ಒಂದು ಎಂದಿಟ್ಟುಕೊಳ್ಳಿ, ವ್ಯಾವಹಾರಿಕವಾಗಿ ಅದು ನಮಗೆ ಬಾಧಕವಲ್ಲ, ಎಲ್ಲೋ ನಡೆದುದು. ಅದನ್ನು ಒಮ್ಮೆ ಮರೆತರೆ ಮತ್ತೆ ಅದರ ಪರಿಣಾಮ ಗಾಢವಾಗಿರುವುದಿಲ್ಲ, ಅದಕ್ಕಾಗಿ, ಒಂದಿಷ್ಟು ಹೊತ್ತು ಇಂಪಾದ ಹಾಡು ಸಂಗೀತ ಕೇಳಿ. ಅದಾಗುವುದಿಲ್ಲವೇ? ಆತ್ಮೀಯರಾದ ಯಾರಿಗಾದರೂ ಕರೆ ಮಾಡಿ. ಸುಮ್ಮನೆ ಅದೂ ಇದೂ ಮಾತನಾಡಿ. ಏನೋ ತಮಾಷೆಯ ಸಂದರ್ಭವನ್ನು ನೆನೆದುಕೊಳ್ಳಿ. ಸುಮ್ಮನೆ ಅಡುಗೆ ಮನೆಯೊಳಗೆ ಹೋಗಿ ಏನೋ ಒಂದು ತಿಂಡಿ ಮಾಡಿ. ನೀವು ಸಾಕಿದ ನಾಯಿಯೋ, ಬೆಕ್ಕೋ ಇದ್ದರೆ ಅದರೊಂದಿಗೆ ಆಟವಾಡಿ. ಎಳೆಯ ಮಗುವನ್ನು (ಇದ್ದರೆ) ಎತ್ತಿಕೊಂಡು ಓಡಾಡಿ.

ಹತ್ತಿರದಲ್ಲಿ ದೇವಸ್ಥಾನ ಇದ್ದರೆ ಅಲ್ಲಿ ಹೋಗಿ. ಮೌನವಾಗಿ ಕೊಂಚ ಹೊತ್ತು ಕುಳಿತುಕೊಳ್ಳಿ, ಯಾರೋ ಬಾರಿಸಿದ ಘಂಟೆಯ ನಾದಕ್ಕೆ ಕಿವಿಗೊಡಿ. ಅದರ ಅನುರಣನ ನಿಮ್ಮಲ್ಲಿಯೂ ಪ್ರತಿಧ್ವನಿಸುವುದ ನೋಡಿ.

ಇದಾವುದೂ ಆಗುವುದಿಲ್ಲವೇ? ಸುಮ್ಮನೆ ಕುಳಿತಲ್ಲಿಯೇ ಕಣ್ಣು ಮುಚ್ಚಿ ಕಲ್ಪನೆಯ ದಾರಿಯಲ್ಲಿ ಪ್ರಯಾಣ ಹೊರಡಿ. ಮನಸ್ಸು ಅದಕ್ಕಿಷ್ಟ ಬಂದತ್ತ ನಿಮ್ಮನ್ನು ಕರೆದೊಯ್ಯಲಿ. ಕಾಲ್ಪನಿಕ ಪ್ರಯಾಣವು ಕಾಣಿಸುವ ಬಣ್ಣಬಣ್ಣದ ಚಿತ್ರಗಳನ್ನು ನೋಡಿ ಆನಂದಿಸಿ. ಮುಖ್ಯವಾಗಿ ನಿಮ್ಮನ್ನು ಕಾಡುವ ವಿಷಾದಕ್ಕಿಂತ ಬೇರೆಯಾದ ಏನನ್ನಾದರೂ ಧ್ಯಾನಿಸಿ. ಕಾಲುಗಂಟೆ, ಅರ್ಧಗಂಟೆ... ಈಗ ನೋಡಿ ಆ ವಿಷಾದದ ಜಾಗದಲ್ಲಿ ಏನೋ ಉಲ್ಲಾಸದ ಸಂಗತಿ ನಿಮ್ಮ ಮನಸ್ಸನ್ನು ಹಗುರಾಗಿಸಿರುತ್ತದೆ.

ಇಂತಹ ಉಪಾಯಗಳು ನಮ್ಮ ಮನಸ್ಸನ್ನು ಪ್ರಕ್ಷುಬ್ಧಗೊಳ್ಳದಂತೆ ಕಾಯತಕ್ಕವು. ಯಾಕೆಂದರೆ ಸಮಸ್ಯೆಗಳಿಲ್ಲದ ಜಗತ್ತು ಇಲ್ಲ, ಮುಂದೆಯೂ ಇನ್ನಷ್ಟು ಜಟಿಲ ಸಮಸ್ಯೆಗಳು ಉದ್ಭವಿಸಿಯಾವೇ ಹೊರತು ಕಡಿಮೆಯಾಗಲಾರವು. ಹಾಗಾಗಿ ನಾವು ನಮ್ಮೊಳಗೆ ನೆಮ್ಮದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ನೆಮ್ಮದಿಯನ್ನು ಕಲಕುವ ಸಂಗತಿಗಳನ್ನು ನಿವಾರಿಸುವುದಕ್ಕೆ, ಅದಾಗದಿದ್ದರೆ ಮರೆಯುವುದಕ್ಕೆ ಕಲಿಯಬೇಕು.

ಕಾಲಗಣನೆಯ ಕನ್ನಡಿ ಈ 'ಯುಗಾದಿ'

• ಡಾ. ಮೈತ್ರಿ ಭಟ್, ವಿಟ್ಲ



'ವರುಷ ವರುಷವೂ ಮತ್ತೆ ಯುಗಾದಿ;
ಕಾಲವಿದಂತು ಅನಂತ ಅನಾದಿ,
ತೋರಣ ಕಟ್ಟಿದೆ ಬದುಕಿನ ಬೀದಿ;
ಏಳುಬೀಳುಗಳ ಬಳಸಿನ ಹಾದಿ'' (ಕೆ.ಎಸ್.ನ)

ಹಾದಿಯುದ್ದಕ್ಕೂ ಹೊಂಗೆ ಮರಗಳ ಹೂವು ಚೆಲ್ಲಿದ ಹಾದಿ... ಕೆಳಗೆ ಕಣ್ಣಾಡಿಸಿದರೆ ಬಿದ್ದ ನಾಜೂಕಿನ ಹೂಗಳು... ಮೇಲೆ ಕಣ್ಣೆತ್ತಿದ್ದರೆ ನಳನಳಿಸುವ ಹಸಿರು ಎಲೆಗಳ ಮುಚ್ಚುವಂತೆ ಹೂಗಳ ರಾಶಿ ರಾಶಿ. ಮೇಲೂ ವರ್ಣ.. ಕೆಳಗೂ ಬಣ್ಣ.. ಆಹಾ.. ಚೈತ್ರದ ಸೊಬಗು... ಹೌದು. ಯುಗಾದಿ ಎಂದರೆ ಹೀಗೇ. ಕಣ್ಣಿಗೂ ಮನಸ್ಸಿಗೂ ಹೊಸ ಹುರುಪು, ಉಲ್ಲಾಸ ತುಂಬುವ ಕ್ಷಣ. ಎಲೆಗಳು ಚಿಗುರಿ, ಮೊಗ್ಗು ಮೂಡಿ, ಹೂ ಅರಳಿ ಕಂಗೊಳಿಸುವ ಗಿಡಮರಗಳು ಕಣ್ಣಿಗೆ ಹಬ್ಬವಾಗುತ್ತವೆ. ಬಣ್ಣ-ಬಣ್ಣದ ಪಕ್ಷಿಗಳು ಗಿಡಮರಗಳ ರೆಂಬೆ-ಕೊಂಬೆಗಳನ್ನು ಅಲಂಕರಿಸುತ್ತವೆ.

ಚೈತ್ರ ಮಾಸ ಬಂತೆಂದರೆ ಸಾಕು.. ಇಡೀ ವಾತಾವರಣವೇ ಬದಲಾಗಿ ಹೊಸತನದಿಂದ ತುಂಬಿ ತುಳುಕುತ್ತದೆ. ಬಿಸಿಲಿನ ತಾಪ ಹೆಚ್ಚಾದರೂ, ಬೀಸುವ ತಂಗಾಳಿ ಮನಸ್ಸಿಗೆ ತಂಪೆರೆಯುತ್ತದೆ. ಹೊಸ ಚೈತನ್ಯವನ್ನು ಮನ ಮನಗಳಲ್ಲಿ ಮೂಡಿಸುವ, ನೋವು-ನಲಿವುಗಳಿಗೆ ವಿರಾಮ ಹೇಳುವ ಈ ಹಬ್ಬದ ಆಗಮನದ ಕ್ಷಣ ಪ್ರಕೃತಿಯೇ ಮೈದುಂಬಿ ಅಲಂಕೃತಳಾಗುತ್ತಾಳೆ. ಹೇಮಂತ ಋತುವಿನಲ್ಲಿ ಎಲೆಯುದುರಿಸಿಕೊಂಡು ಬೋಳಾಗಿ ನಿಂತ ಮರಗಿಡಗಳು, ಶಿಶಿರಋತುವಿನಲ್ಲಿ ಪ್ರಕೃತಿಯ ಕಠಿಣತೆಯನ್ನು ಎದುರಿಸಿ, ವಸಂತಾಗಮನದಿಂದ ಮತ್ತೆ ಚಿಗುರಿ ಹಸುರುಡುಗೆಯನ್ನುಟ್ಟು ಕಂಗೊಳಿಸುವ ಈ ಕ್ಷಣ ಜೀವನದ ಪಾಠವಾಗಿಯೂ ಕಂಡುಬರುತ್ತದೆ. ಪ್ರಕೃತಿಯಲ್ಲೂ ನವಚೈತನ್ಯವಿರುವ ಈ ಹಬ್ಬ ನಮ್ಮಲ್ಲಿಯೂ ನವಚೈತನ್ಯ ತುಂಬುವಂತದ್ದಾಗಿದೆ.

ಎರಡು ತುದಿಗಳ ನಡುವೆ ಸಾಗುವುದಕ್ಕೆ ಒಂದು ಅಂತ್ಯವಿದೆ. ಅನಂತವೇ ಆಗಿದ್ದರೂ, ಅದಕ್ಕೊಂದು ಅಂತ್ಯದ ಸಾಧ್ಯತೆ ಇದೆ. ವೃತ್ತ ಅಥವಾ ಚಕ್ರದಲ್ಲಿ ಹಾಗಲ್ಲ, ಕಾಲ ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ಮರುಕಳಿಸುತ್ತಲೇ ಇರುವುದರಿಂದ ಅದು 'ಚಕ್ರ'ವಾಗಿದೆ. ಇಂತಹ ಕಾಲವೊಂದು ಅನಾದಿ ಅನಂತಗಳ ನಡುವಿನ ತಂತು. ಓಡುವ ಕಾಲವ ಹಿಡಿದು ನಿಲ್ಲಿಸುವ ಭರದಿ ನಮ್ಮ ಕೈಗೆ ನಿಲುಕಿದ್ದು ಈ ಯುಗಾದಿ ಹಬ್ಬ.

ಯುಗಾದಿ ಕಾಮನಬಿಲ್ಲಿನ ಹಾಗೆ. ಆ ಕ್ಷಣಕ್ಕೆ ಮನಕ್ಕೆ ಮುದವನ್ನೂ, ಭರವಸೆಯನ್ನೂ ತುಂಬುವುದು. ಬುದ್ಧಿ-ಭಾವಗಳ ಪ್ರಯತ್ನಗಳಲ್ಲಿ ಏನನ್ನೇ ಮಾಡಿದರೂ ಕಾಲನ ಗಾಣದಲ್ಲಿ ನಾವು ಸುತ್ತುವ ಎತ್ತುಗಳಷ್ಟೇ. ಹೊರಟ ಬಿಂದುವಿಗೇ ಮತ್ತೆ ಸೇರುವುದಷ್ಟೆ ಈ ಬದುಕಿನ ಪಯಣ.



ಈ ಯುಗಾದಿ ಹಬ್ಬದ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ರಂಗವಲ್ಲಿ ಇಟ್ಟು, ಮಾವು-ಬೇವಿನ ತೋರಣಗಳಿಂದ ಸಿಂಗರಿಸಿ, ಅಭ್ಯಂಜನ ಮಾಡಿ, ದೇವರಿಗೆ ಪೂಜೆ ಮಾಡಿ, ಬೇವು-ಬೆಲ್ಲಗಳ ನೈವೇದ್ಯವನ್ನು ಪ್ರಸಾದರೂಪದಲ್ಲಿ ಸ್ವೀಕರಿಸಿ, ಪಂಚಾಂಗಶ್ರವಣ ಮಾಡುತ್ತಾರೆ. ಬೇವು-ಬೆಲ್ಲ ನಮ್ಮ ಬದುಕಿನ ಸಿಹಿ-ಕಹಿಗಳ ಪ್ರತೀಕ. ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಎರಡನ್ನೂ ನಮ್ಮ ಜೀವನದಲ್ಲಿ ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಭಾವವು ಇದರಲ್ಲಿದೆ. ಬೇವು ಕಹಿಯ ಸಂಕೇತವಾದರೆ, ಬೆಲ್ಲ ಸಿಹಿಯ ಸಂಕೇತ. ಮನುಷ್ಯರ ಬದುಕಿನಲ್ಲಿ ಸುಖ-ದುಃಖಗಳು ಯಾವ ಕಾಲಕ್ಕೂ ಇರುವುದೇ. ಪ್ರತಿಯೊಬ್ಬರ ಜೀವನದಲ್ಲಿಯೂ ಕೇವಲ ಸುಖವೊಂದೇ ಬರುವುದು ಸಾಧ್ಯವಿಲ್ಲ, ಆಗಾಗ ಕಷ್ಟಗಳು ಬರುತ್ತಿರುತ್ತವೆ. ಆಗ ನಾವು ಜೀವನದಲ್ಲಿ ನಿರಾಶೆ ಹೊಂದಬಾರದು ಎನ್ನುವುದರ ಸೂಚಕವಾಗಿ ಬೇವು-ಬೆಲ್ಲ ಎರಡನ್ನೂ ಸೇವಿಸುವುದು.

ಯುಗಾದಿ ಎಂದರೆ ಚಿಗುರಿನೆಲೆಗಳು ಹಾಡುವ ಪಲ್ಲವಿ. ಹಳೆಯ ನೋವ ನೆನಪಿನ ಕೊನೆ. ಹೊಸತಿನ ಆಗಮನ. ಕಳೆದ ದಿನಗಳಿಗೆ ವಿದಾಯ ಮತ್ತು ಮುಂದಿನ ದಿನಗಳ ಬಗೆಗಿನ ಆಕಾಂಕ್ಷೆ. ಅಚ್ಚುಕಟ್ಟಾಗುವ ಮನೆ, ಬಾಗಿಲಿಗೆ ತಳಿರು ತೋರಣ, ದೇವರ ಮನೆಯ ಬಾಗಿಲಿಗೆ ಹಸಿರಿನ ಚಿಗುರು ಮಾವಿನ ಎಲೆಯ ಸಿಂಗಾರ, ಮನೆಯ ಮುಂದೆ ಚಿಕ್ಕಿಯ ಬಣ್ಣದ ರಂಗೋಲಿ, ಶುಭ್ರವಾಗುವ ರಾಸುಗಳು, ಅಭ್ಯಂಜನದ ಸ್ನಾನ, ಬೆಳಗುವ ಮನಸ್ಸು, ಪೂಜೆ-ಪುನಸ್ಕಾರ, ಮುಂದಿನ ಶುಭ ದಿನಗಳಿಗಾಗಿ ದೇವರಲ್ಲಿ ಪ್ರಾರ್ಥನೆ, ಹೊಸ ಬಟ್ಟೆ, ಒಬ್ಬಟ್ಟಿನ ತಟ್ಟೆ, ಒಳ್ಳೆಯ ಮಾತು, ಶುಭ ಹಾರೈಕೆ, ಸಂಕಲ್ಪಗಳ ಹೂಮಾಲೆಯನ್ನು ಹೊಸೆಯುವ ಮತ್ತು ಕಳೆದ ಕಾಲದ ಪುನರಾವಲೋಕನಕ್ಕೆ ಅವಕಾಶ- ಎಲ್ಲವೂ ಹೌದು.


ಹೀಗೆ ಹಳೆಯ ನೆನಪುಗಳೊಂದಿಗೆ ಹೊಸ ಭರವಸೆಯೊಂದು ಚಿಗುರೊಡೆಯುವ ಯುಗಾದಿ ಮತ್ತೆ ಬಂದಿದೆ. ಬದುಕಿನ ಅನಂತ ಸಾಧ್ಯತೆಗಳು ಹೇಗೆ, ಎಲ್ಲಿ ಅಡಗಿರಬಹುದು, ಯಾವ ಬೆಳಕಿನ ಹಾದಿ, ಯಾವ ಹೊಸ ಬೆಳಕು, ಯಾವ ಯುಗಾದಿ ಅದನ್ನು ನಮಗೆ ಕಾಣಿಸಬಹುದು ಎಂದು ಕಾಯಬೇಕು. ಈ ಕ್ಷಣ ನಮ್ಮ ಪರಿಸರ, ಸಮುದಾಯ ಇವೆಲ್ಲವನ್ನು ಜವಾಬ್ದಾರಿಯುತವಾಗಿ ಎಚ್ಚರಿಕೆಯಿಂದ ನೋಡಿಕೊಳ್ಳುವ, ಸ್ಪಂದಿಸುವ ಮನೋಭಾವ ನಮ್ಮದಾಗಲಿ. ಎಲ್ಲ ನೋವು-ನಗೆಗಳ ಜೊತೆಗೆ ಹೊಸತಿಗೆ, ಹೊಸ ನಾಳೆಗೆ, ಹೊಸ ಆಲೋಚನೆಗಳಿಗೆ ತೆರೆದುಕೊಳ್ಳುತ್ತ ಈ ಯುಗಾದಿಯನ್ನು ಬರಮಾಡಿಕೊಳ್ಳೋಣ. ಮನದಲ್ಲಿ ಬೆರೆತಿರುವ ವಿರಸವೆಂಬ ವಿಷಯವನ್ನು ಕಳೆದು, ಸೌಹಾರ್ದತೆಯನ್ನು ಈ ಯುಗಾದಿಯು ನೆಲೆಗೊಳಿಸಲಿ.

ಹಳೆ ನೆನಪುಗಳುದರಲಿ ಬಿಡುಬೀಸುವ ಚಳಿಗಾಳಿಗೆ. ತರಗೆಲೆಗಳ ಚಿತೆಯುರಿಯಲಿ ಚೈತ್ರೋದಯ ಜ್ವಾಲೆಗೆ. ಹೊಸ ಭರವಸೆ ಚಿಗುರುವಂತೆ ಎಲೆಯುದುರಿದ ಕೊಂಬೆಗೆ. ಅರಳಿ ನಗುವ ಹೂಗಳಲ್ಲಿ ಮೊಳೆಯಲಿ ಹೊಸ ನಂಬಿಕೆ. ಒಟ್ಟಿನಲ್ಲಿ, ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕ್ಕೆ ಮೀಸಲಾಗಲಿ ನವ ಸಂವತ್ಸರ ಅಷ್ಟೇ.

ಸದನದಲ್ಲೇ ಉತ್ತರ ಮಂಡಿಸಲು ಸೂಚನೆ

• **ವಿಧಾನಸಭೆ:** ಲಿಖಿತವಾಗಿ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲೇ ಮಂಡಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸಚಿವರಿಗೆ ಸೂಚನೆ ನೀಡಿದರು. ಪ್ರಶ್ನೋತ್ತರ ಕಲಾಪದ ನಂತರ ಗೃಹ ಸಚಿವ ಡಾ. ಪರಮೇಶ್ವರ ಅವರು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರವನ್ನು ಮಂಡಿಸಿದರು. ಉತ್ತರಿಸಬೇಕಾಗಿದ್ದ 199 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳಿಗೆ ಉತ್ತರ ಮಂಡಿಸಲಾಗಿದೆ ಎಂದರು. ಉತ್ತರಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವನ್ನು ಗಮನಿಸಿದ ಸಭಾಧ್ಯಕ್ಷರು ಮೆಚ್ಚುಗೆ ವ್ಯಕ್ತಪಡಿಸಿದರು. ಉಳಿದ ಪ್ರಶ್ನೆಗಳಿಗೂ ಉತ್ತರವನ್ನು ಸದನದಲ್ಲೇ ಮಂಡಿಸುವಂತೆ ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆ 39 ಪ್ರಶ್ನೆಗಳ ಪೈಕಿ 34ಕ್ಕೆ ಉತ್ತರ ನೀಡಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ 55ರಲ್ಲಿ 33, ಕನ್ನಡ ಮತ್ತು ಸಂಸ್ಕೃತಿ ಇಲಾಖೆ 12ರಲ್ಲಿ 11, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ 8ರಲ್ಲಿ 7, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ 34ರಲ್ಲಿ 15 ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ರಾಮ ಬಾಣ



ಯುವಜನರಿಗಾಗಿ ಭವ್ಯ ಯೋಜನೆ

ಪುಟ 1➡ ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆಯಲ್ಲಿ ರಾಜ್ಯ ಸರಕಾರಗಳು, ಕೇಂದ್ರೀಯ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಖಾಸಗಿ ಡೆವಲಪರ್ಸ್‌ಗಳ ಸಹಭಾಗಿತ್ವದೊಂದಿಗೆ ಈ ಪಾರ್ಕ್‌ಗಳನ್ನು ನಿರ್ಮಿಸಲಾಗುವುದು. ಇಲ್ಲಿ ಚಾಲೆಂಜ್- ಮೋಡ್ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ಕೈಗಾರಿಕಾ ಕ್ಲಸ್ಟರ್‌ಗಳು, ಪ್ರಧಾನಮಂತ್ರಿ ಗತಿಶಕ್ತಿ ತತ್ವಗಳೊಂದಿಗೆ ಭೂಗತ ಯುಟಿಲಿಟಿ ಕಾರಿಡಾರ್‌ಗಳು, ಹಸಿರು-ಇಂಧನ ಏಕೀಕರಣ ಮತ್ತು ಲಾಜಿಸ್ಟಿಕ್ ಯೋಜನೆಗಳನ್ನು ಸಂಯೋಜಿಸಲಿವೆ. ಹಾಗೆಯೇ ಜಾಗತಿಕ ಸ್ಪರ್ಧಾತ್ಮಕತೆಯ ಕೈಗಾರಿಕಾ ಪರಿಸರ ವ್ಯವಸ್ಥೆಯೊಂದನ್ನು ಸೃಷ್ಟಿಸಲು ಅಗತ್ಯವಾದ ಉದ್ಯಮ ವ್ಯವಹಾರವನ್ನು ಸುಲಲಿತಗೊಳಿಸುವ ಸುಧಾರಣೆಗಳ ಮೇಲೆ ಕೇಂದ್ರೀಕರಿಸಲಿವೆ ಎಂದು ಹೇಳಲಾಗಿದೆ.

ಈ ಉಪಕ್ರಮವು ಹೂಡಿಕೆಗೆ ಸಿದ್ಧವಾದ ಸುಮಾರು 34000 ಎಕರೆ ಕೈಗಾರಿಕಾ ಭೂಮಿಯನ್ನು ಸ್ಪರ್ಧಾತ್ಮಕ ದರದಲ್ಲಿ ಸೃಷ್ಟಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಇವುಗಳ ಅರ್ಹತಾ ಮಾನದಂಡಗಳು ಕೈಗಾರಿಕಾ ಪಾರ್ಕ್‌ನ ಕನಿಷ್ಠ ಗಾತ್ರ 100 ಎಕರೆ ಎಂದು ನಿಗದಿಪಡಿಸಲಾಗಿದ್ದು, ಈಶಾನ್ಯ ರಾಜ್ಯಗಳು ಮತ್ತು ಪರ್ವತೀಯ ಪ್ರದೇಶಗಳಲ್ಲಿ ಇವನ್ನು 25 ಎಕರೆಗಳಿಗೆ ಸಡಿಲಿಸಲಾಗುವುದು. ಈ ಉಪಕ್ರಮವು ಆತ್ಮನಿರ್ಭರ್ ಭಾರತ್ ಮತ್ತು ಮೇಕ್ ಇನ್ ಇಂಡಿಯಾ ಗುರಿಗಳಿಗೆ ಬೆಂಬಲವಾಗಲಿದೆ ಎಂದು ಸರಕಾರ ನಿರೀಕ್ಷಿಸಿದ್ದು, ಕೈಗಾರಿಕಾ ಸಾಮರ್ಥ್ಯ ವಿಸ್ತರಣೆಯ ಮೂಲಕ ದೇಶದ ಯುವಜನತೆಗೆ ಗಣನೀಯ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ವಿಶ್ವಾಸಕ್ಕೆ ಪುಷ್ಟಿ ನೀಡಲಿದೆ.ಭಾರತದಲ್ಲಿ ಉದ್ಯೋಗವಕಾಶಗಳ ಸೃಷ್ಟಿಯ ಪ್ರಮಾಣ ಶೇ.60ಕ್ಕೇರಿರುವ ಬಗ್ಗೆ ಸಮೀಕ್ಷಾ ವರದಿಗಳು ತಿಳಿಸಿದ್ದು, ಇದನ್ನು ಇನ್ನಷ್ಟು ಹೆಚ್ಚಿಸುವಲ್ಲಿ ನರೇಂದ್ರ ಮೋದಿ ಸರಕಾರದ ಈ ಬೃಹತ್ ಉಪಕ್ರಮ ಒಂದು ದೊಡ್ಡ ಹೆಜ್ಜೆ ಎಂದು ವಿಶ್ಲೇಷಿಸಲಾಗಿದೆ.

ಸಣ್ಣ ಜಲವಿದ್ಯುತ್ ಅಭಿವೃದ್ಧಿಗೆ 2,584.60 ಕೋಟಿ

ಕೇಂದ್ರ ಸಚಿವ ಸಂಪುಟವು ಬುಧವಾರ ಸಣ್ಣ ಜಲವಿದ್ಯುತ್ (ಎಸ್‌ಎಚ್‌ಪಿ) ಅಭಿವೃದ್ಧಿ ಯೋಜನೆಗೆ ಹಣಕಾಸು ವರ್ಷ 2026-27 ರಿಂದ ಹಣಕಾಸು ವರ್ಷ 2030-31ರವರೆಗೆ ಒಟ್ಟು 2,584.60 ಕೋಟಿ ರೂ. ವೆಚ್ಚದೊಂದಿಗೆ ಅನುಮೋದನೆ ನೀಡಿದೆ. ಈ ಯೋಜನೆಯು ದೇಶಾದ್ಯಂತ ಸುಮಾರು 1,500 ಮೆಗಾವ್ಯಾಟ್ ಸಾಮರ್ಥ್ಯದ ಸಣ್ಣ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದು, ಹೆಚ್ಚಿನ ಬಳಕೆಯಾಗದ ಸಾಮರ್ಥ್ಯ ಹೊಂದಿರುವ ಗುಡ್ಡಗಾಡು ಮತ್ತು ಈಶಾನ್ಯ ರಾಜ್ಯಗಳ ಮೇಲೆ ವಿಶೇಷ ಗಮನವನ್ನು ಕೇಂದ್ರೀಕರಿಸುತ್ತದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ದೇಶದ ಆರ್ಥಿಕತೆ ನಿರ್ವಹಿಸಲು ಜಗತ್ತಿನ ಮುಂದೆ ಭಿಕ್ಷೆ ಬೇಡುತ್ತಿದ್ದೇವೆ
- ಪಾಕಿಸ್ತಾನದ ಪ್ರಧಾನಿ
-ಭಿಕ್ಷೆ ಕೊಟ್ಟರೂ ಕಷ್ಟ, ಏಕೆಂದರೆ ಹೊಟ್ಟೆ ತುಂಬಿದ ಮೇಲೆ ಭಿಕ್ಷೆ ನೀಡಿದವನ ಮೇಲೆ ನೀವು ಭಯೋತ್ಪಾದನೆ ಮಾಡುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು?

ದಿನ ಭವಿಷ್ಯ

ಮೇಷ ಭರವಸೆಯ ದಿನ. ಶುಭ ಸಂಕೇತಗಳು ಕಾಣುತ್ತಿವೆ. ವೈಯಕ್ತಿಕ ಸಮಸ್ಯೆ ಪರಿಹಾರದ ದಾರಿ ತೋರಲಿದೆ. ಚಿಂತಿತ ಮನಸ್ಸಿಗೆ ಶಮನ.

ವೃಷಭ ಮೌನವಾಗಿ ಕಠಿಣ ಕಾರ್ಯ ನಿರ್ವಹಿಸಿ. ಸಫಲತೆ ನಿಮ್ಮದಾಗಲಿದೆ. ಮೆಚ್ಚುಗೆಯೂ ಸಿಗಲಿದೆ. ಕುಟುಂಬಸ್ಥರ ಜತೆ ಸಂತೋಷದ ಕಾಲಕ್ಷೇಪ.

ಮಿಥುನ ಹರ್ಷೋಲ್ಲಾಸ. ಕೌಟುಂಬಿಕ ಸಮಾಗಮ. ಹಣದ ಬಿಕ್ಕಟ್ಟು ಪರಿಹಾರ. ಖರ್ಚು ತುಸು ಹೆಚ್ಚಿದರೂ ಅದು ಇಂದು ಮಹಾ ಅನ್ನಿಸದು.

ಕಟಕ ಎಲ್ಲರ ಜತೆ ಕೂಡಿ ಕಳೆಯುವ ಅವಕಾಶ. ಪುಟ್ಟ ಪ್ರವಾಸಕ್ಕೆ ಸಿದ್ಧರಾಗಿ. ದೈನಂದಿನ ರಗಳೆ ಮರೆತು ವ್ಯವಹರಿಸಿ. ಬಂಧು ಜತೆಗಿನ ವಿರಸ ಮಾಯ.

ಸಿಂಹ ಹಠಮಾರಿ ವರ್ತನೆ ಇತರರ ಟೀಕೆಗೆ ಗುರಿಯಾದೀತು. ವಿನಯ ಪ್ರದರ್ಶಿಸಿ. ಕೋಪದ ಕೈಗೆ ಬುದ್ಧಿ ಕೊಡಬೇಡಿ. ಹೊಂದಾಣಿಕೆ ಒಳಿತು.

ಕನ್ಯಾ ನಿಮ್ಮ ವ್ಯವಹಾರದಲ್ಲಿ ಒಳ್ಳೆ ಅವಕಾಶ ಸಿಕ್ಕರೆ ತಿರಸ್ಕರಿಸಬೇಡಿ. ಹಿಂಜರಿಕೆ ತ್ಯಜಿಸಿ. ಆತ್ಮೀಯರ ಸಂಗದಲ್ಲಿ ಸಂತೋಷ ಕಾಣುವಿರಿ. ಧನಪ್ರಾಪ್ತಿ.

ತುಲಾ ನಿಮ್ಮ ಕುರಿತಂತೆಯೆ ಸಿನಿಕತನ ಬೇಡ. ಎಲ್ಲವನ್ನು ಆಶಾವಾದದಿಂದ ಸ್ವೀಕರಿಸಿ. ಜಗದ ಜಂಜಡಕ್ಕೆ ಮನಸು ಹಾಳು ಮಾಡಿಕೊಳ್ಳದಿರಿ. ಒಳ್ಳೆ ಕಾಲ ಬರಲಿದೆ.

ವೃಶ್ಚಿಕ ವ್ಯವಹಾರದಲ್ಲಿ ಮುತುವರ್ಜಿ ವಹಿಸಿ. ಬೇಕಾಬಿಟ್ಟಿ ಧೋರಣೆ ಒಳಿತಲ್ಲ. ಖಾಸಗಿ ಬದುಕಿಗೆ ಹೆಚ್ಚಿನ ಗಮನ ಕೊಡಬೇಕಾದ ಪ್ರಸಂಗ.

ಧನು ಎಲ್ಲರ ನಡುವೆ ನಿಮ್ಮ ಪಾತ್ರವೇನು ಎಂದು ಪರಾಮರ್ಶಿಸಿ. ಅದರಂತೆ ವರ್ತಿಸಿ. ಎಲ್ಲರಿಂದ ಬೇರೆಯಾಗಿ ನಿಲ್ಲಬೇಡಿ. ಹೊಂದಾಣಿಕೆ ಮುಖ್ಯ.

ಮಕರ ಶಾಂತ ಮನಸ್ಸು. ದುಗುಡ ನಿವಾರಣೆ. ಇತರರ ಮೇಲ್ಪಂಕ್ತಿ ಅನುಸರಿಸಿ. ಮುಖ್ಯ ಬೇಡಿಕೆಯೊಂದು ಇಂದು ಈಡೇರುವುದು.

ಕುಂಭ ಒತ್ತಡಗಳಿಲ್ಲದ ವಿರಾಮ ದಿನ. ಬಂಧು ಬಳಗದ ಭೇಟಿ. ಮನೆಯಲ್ಲಿ ಹರ್ಷದ ವಾತಾವರಣ. ಖರೀದಿ ಹುಮ್ಮಸ್ಸು.

ಮೀನ ಆರ್ಥಿಕ ಉನ್ನತಿ. ಆಕಾಂಕ್ಷೆ ಈಡೇರಿಕೆ. ಆಪ್ತರ ಜತೆ ಭಾವುಕ ಸನ್ನಿವೇಶ ಎದುರಿಸುವಿರಿ. ಮನೋದಾರ್ಢ್ಯ ಪ್ರದರ್ಶಿಸಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30
ಅದೃಷ್ಟ ಸಂಖ್ಯೆ: 3,8,2,5

ಮಾತುಗಳಿಂದ ಮೋಸ: ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ


ಅಭಿವೃದ್ಧಿಗೆ ಆದ್ಯತೆ ನೀಡಲಿ

• **ವಿಧಾನಸಭೆ:** ಬಜೆಟ್ ಗಾತ್ರ ಮಾತ್ರ ಹೆಚ್ಚಾಗಿದೆ, ಅಭಿವೃದ್ಧಿ ಕಾಣುತ್ತಿಲ್ಲ. ಭರವಸೆಗಳ ಬಣ್ಣದ ಮಾತುಗಳಿಂದ ಜನರನ್ನು ಮೋಸಗೊಳಿಸುವ ಬದಲು, ನೈಜ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಆದ್ಯತೆ ನೀಡಬೇಕು ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಬುಧವಾರ ಕಲಾಪದಲ್ಲಿ ಆಯವ್ಯಯದ ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಅವರು, ರಾಜ್ಯದ ಪ್ರಸಕ್ತ ಆಯವ್ಯಯವು ಯೋಜನೆಗಳಿಲ್ಲದ, ದಿಸೆ ತೋರದ ಅಂಕಿ-ಅಂಶಗಳ ಸಮೂಹವಾಗಿದೆ. ಆಯವ್ಯಯವು ಕೇವಲ ಅಂಕಿ-ಸಂಖ್ಯೆಗಳ ನಿರ್ಜೀವ ಪ್ರದರ್ಶನವಲ್ಲ; 7 ಕೋಟಿ ಜನರ ಬದುಕಿನ ಭರವಸೆಯ ದಿಕ್ಕು ತೋರಿಸಬೇಕು. ಆದರೆ, ಇದು ಕನ್ನಡಿಗರ ಭವಿಷ್ಯಕ್ಕೆಆರ್ಥಿಕ ಮರಣ ಶಾಸನವಾಗಲಿದೆ ಎಂದು ವಿಶ್ಲೇಷಿಸಿದರು.

ಲಕ್ಷಾಂತರ ಮನೆಗಳನ್ನು ನಿರ್ಮಿಸಿ ಬಡವರಿಗೆ ನೀಡಿದ್ದೇವೆ ಎಂದು ವಸತಿ ಸಚಿವರು ಹೇಳುತ್ತಿದ್ದಾರೆ. ಆದರೆ, ಇದು ಸುಳ್ಳು. ಕಳೆದ 3 ವರ್ಷಗಳಲ್ಲಿ ಸರ್ಕಾರದ ಮಾಹಿತಿ ಪ್ರಕಾರ, ಪಿಎಂಎವೈ ಅಡಿ 7.03 ಲಕ್ಷ ಗುರಿ ಇದ್ದು, 3.13 ಲಕ್ಷ ಮನೆಗಳನ್ನು ಮಾತ್ರ ಮಂಜೂರು ಮಾಡಿದೆ. ಈ ಪೈಕಿ 9,757 ಮನೆಗಳನ್ನಷ್ಟೇ ನಿರ್ಮಿಸಿದ್ದಾರೆ. ಮತ್ತೆ ಈ ವರ್ಷ 3 ಲಕ್ಷ ಮನೆಗಳನ್ನು ನಿರ್ಮಿಸುವ ಭರವಸೆ ನೀಡಲಾಗಿದೆ. ಇದಕ್ಕೆ 13,500 ಕೋಟಿ ರೂ. ಅನುದಾನ ಬೇಕು. ಆದರೆ, ಬಜೆಟ್‌ನಲ್ಲಿ ಅಷ್ಟೊಂದು ಹಣ ಇಟ್ಟಿಲ್ಲ. ಇದನ್ನು ಗಮನಿದರೆ ಸರ್ಕಾರ ಕೇವಲ ಸುಳ್ಳು ಹೇಳಿ ದಲಿತರು, ಹಿಂದುಳಿದ ಹಾಗೂ ಬಡ ಜನರಿಗೆ ಅನ್ಯಾಯ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿದೆ ಎಂದರು.

ಆಯವ್ಯಯ ಘೋಷಣೆಗೆ ಸೀಮಿತವಾಗಿದೆ: ಶಿಕ್ಷಣ ಇಲಾಖೆಗೆ ಹೆಚ್ಚಿನ ಅನುದಾನ ನೀಡಿದರೂ ಸಾಧನೆ ಮಾತ್ರ ಶೂನ್ಯ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ, ಉದ್ಯೋಗ, ಹೊಸ ದಿಕ್ಕು ನೀಡಲು ಕೇಂದ್ರ ಸರ್ಕಾರ ಶಿಕ್ಷಣ ನೀತಿ ತಂದಿದೆ. ಆದರೆ, ರಾಜ್ಯ ಸರ್ಕಾರ ಅದನ್ನು ಅನುಷ್ಠಾನಕ್ಕೆ ತರದೆ ಕೈ ಬಿಟ್ಟರು. ಶಿಕ್ಷಣ ಇಲಾಖೆ ಅಧಿಕಾರಿಗಳು ಖಾಸಗಿ ಶಾಲೆಗಳಿಗೆ ಭೇಟಿ ನೀಡುತ್ತಾರೆ ಹೊರತು, ಸರ್ಕಾರಿ ಶಾಲೆಗಳ ಅಭಿವೃದ್ಧಿಯ ಪ್ರಯತ್ನ ಮಾಡುತ್ತಿಲ್ಲ. ಕಳೆದ ಆಯವ್ಯಯದಲ್ಲಿ 500 ಹೊಸ ಕೆಪಿಎಸ್ ಶಾಲೆ ತೆರೆಯುವ ಘೋಷಣೆ ಆಗಿತ್ತು. ಆದರೆ, ಒಂದೂ ಶಾಲೆ ಆರಂಭವಾಗಿಲ್ಲ. ಈ ವರ್ಷ ಮತ್ತೆ ಘೋಷಣೆ ಮಾಡಿದ್ದಾರೆ. ಹೀಗಾಗಿ ಸರ್ಕಾರ ಕೇವಲ ಘೋಷಣೆ ಮಾಡುತ್ತಿದೆ ಹೊರತು ಅನುಷ್ಠಾನಕ್ಕೆ ತರುತ್ತಿಲ್ಲ. ಕಡ್ಡಾಯ ಶಿಕ್ಷಣ ಕಾಯ್ದೆ(ಆರ್‌ಟಿಇ)ಯನ್ನು ಬದಲಿಸಿ, ಬಡವರಿಗೆ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ದೊರೆಯದಂತೆ ಮಾಡಲಾಗಿದೆ ಎಂದು ಟೀಕಿಸಿದರು.



7 ಲಕ್ಷ ಜನರಿಗೆ 2.10 ಲಕ್ಷ ಕೋಟಿ ರೂ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4.48 ಲಕ್ಷ ಕೋಟಿ ರೂ. ಗಾತ್ರದ ಆಯವ್ಯಯ ಮಂಡಿಸಿದ್ದಾರೆ. ಈ ಪೈಕಿ ಏಳು ಲಕ್ಷ ಸರ್ಕಾರಿ ನೌಕರರು, ನಿವೃತ್ತ ನೌಕರರಿಗೆ 2.10 ಲಕ್ಷ ಕೋಟಿ ರೂ. ನೀಡಿರುವ ಸರ್ಕಾರ ರಾಜ್ಯದ ಉಳಿದ 7 ಕೋಟಿ ಜನರಿಗೆ 73 ಸಾವಿರ ಕೋಟಿ ರೂ ಮಾತ್ರ ನೀಡಿದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ ಎಂದು ಅರವಿಂದ ಬೆಲ್ಲದ ಹೇಳಿದರು.

ನೀರಾವರಿ ಯೋಜನೆಗೆ ಅನುದಾನವಿಲ್ಲ: ಕೃಷ್ಣಾ ಮೇಲ್ದಂಡೆ ಯೋಜನೆಗೆ 75,000 ಕೋಟಿ ರೂ. ಹೆಚ್ಚುವರಿಗೆ ಅನುದಾನ ಬೇಕಿದೆ. ಆದರೆ, ಕೃಷ್ಣೆಯ ಉಳಿವಿಗೆ ಯಾತ್ರೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದು ಅಲ್ಪ ಮಾತ್ರ. ಇದರಿಂದ 20 ವರ್ಷವಾದರೂ ಯೋಜನೆ ಪೂರ್ಣಗೊಳ್ಳುತ್ತಿಲ್ಲ. ಮಹಾದಾಯಿ ಹಾಗೂ ಮೇಕೆದಾಟು ಯೋಜನೆಗೆ 1000 ಕೋಟಿ ರೂ. ಅನುದಾನ ಹೆಸರಿಗೆ ಮೀಸಲಿಟ್ಟಿರುವ ಸರ್ಕಾರ, ಅನುಮೋದನೆಗಾಗಿ ಕಾಯುವ ಪ್ರಕ್ರಿಯೆಯಲ್ಲೇ ಕಾಲಹರಣ ಮಾಡುತ್ತಿದೆ. ಹೀಗೆ ರೈತರಿಗೆ ಅನುಕೂಲವಾಗುವಂತಹ ಯಾವುದೇ ನೀರಾವರಿ ಯೋಜನೆ ತರುವುದಿರಲಿ ಸೂಕ್ತ ಅನುದಾನ ನೀಡುವ ಕೆಲಸವೂ ಆಗಿಲ್ಲ ಎಂದು ದೂರಿದರು.

ರಾಜ್ಯದಲ್ಲಿ 77,11,374 ಇಪಿಎಫ್ ಖಾತೆದಾರರಿದ್ದಾರೆ. ಇದರಲ್ಲಿ ಶೇ. 78 ಜನರು ಬೆಂಗಳೂರಿನವರೇ. ಇದನ್ನು ಗಮನಿಸಿದರೆ ಎಲ್ಲ ಉದ್ಯೋಗದ ಸೃಷ್ಟಿ ಬೆಂಗಳೂರು ಹಾಗೂ ಅದರ ಸುತ್ತಲಿನ ಜಿಲ್ಲೆಗಳಲ್ಲೇ ಎಂಬುದು ಸ್ಪಷ್ಟ. ಇದು ಸರ್ಕಾರ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ನಿರ್ಲಕ್ಷ್ಯ ವಹಿಸಿರುವುದಕ್ಕೆ ಸಾಕ್ಷಿ. ಮೂರು ವರ್ಷಗಳಲ್ಲಿ ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಮೂಲಕ ಒಟ್ಟು 3,409 ಉದ್ಯೋಗ ದೊರೆತಿದೆ ಎಂದರು.

ಶಿವಮೊಗ್ಗದಲ್ಲಿ ಭರ್ಜರಿ ಆಲಿಕಲ್ಲು ಸಹಿತ ಮಳೆ

• **ಶಿವಮೊಗ್ಗ:** ನಗರದಲ್ಲಿ ಬುಧವಾರ ಆಲಿಕಲ್ಲು ಸಹಿತ ಭರ್ಜರಿ ಮಳೆ ಸುರಿದಿದ್ದು, ಇಡಿ ನಗರದ ರಸ್ತೆಗಳು, ಕಟ್ಟಡಗಳ ಮಹಡಿಗಳು ಮಲ್ಲಿಗೆ ಹೂವು ಚೆಲ್ಲದಂತಾಗಿದ್ದು, ಆಲಿಕಲ್ಲಿನ ಅವತಾರ ಕಂಡು ಜನ ಪುಳಕಿತರಾಗಿದ್ದರು.

ಮಳೆ, ಜಡಿಗಾಳಿ, ಆಲಿಕಲ್ಲಿನ ರಭಸಕ್ಕೆ ಸುಮಾರು ಅರ್ಧ ಗಂಟೆಕಾಲ ಇಡೀ ನಗರ ಸ್ತಬ್ಧವಾಗಿತ್ತು. ಪಟಪಟನೆ ಉದುರುತ್ತಿದ್ದ ಆಲಿಕಲ್ಲಿನ ಸುರಿಮಳೆ ನೋಡುವುದೇ ಜನರಿಗೆ ಹಬ್ಬದಂತಾಗಿದ್ದು, ಈ ಚಿತ್ರಣವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯದವರೇ ಇಲ್ಲ ಎನ್ನುವಂತಾಗಿತ್ತು. ಕ್ಷಣ ಮಾತ್ರದಲ್ಲಿ ಸ್ಟೇಟಸ್‌ಗಳಲ್ಲಿ ಫೋಟೋ ಅಪ್‌ಲೋಡ್ ಮಾಡಿ ತಮ್ಮ ಭಾವಾಭಿವ್ಯಕ್ತಿಯನ್ನು ಹರಿಬಿಟ್ಟದ್ದು ಮಳೆಯ ಮೋಡಿಯೂ ಎಂಬಂತಾಗಿತ್ತು.

ಗಾಳಿಯ ರಭಸಕ್ಕೆ ಅನೇಕ ಕಡೆಗಳಲ್ಲಿ ಮರದ ಕೊಂಬೆಗಳು ರಸ್ತೆ ಮೇಲೆ ಬಿದ್ದು ಸಂಚಾರಕ್ಕೆ ಅಡಚಣೆಯಾಗಿತ್ತು. ವಿನೋಬನಗರದ ಶುಭಮಂಗಳ ಬಳಿ ರಸ್ತೆ ಮೇಲೆ ಕೊಂಬೆ ಬಿದ್ದಿದ್ದರಿಂದ ಕೆಲಹೊತ್ತು ಸಂಚಾರ ಸ್ಥಗಿತವಾಗಿತ್ತು. ಮನೆ ಅಂಗಳದ ಹುಲ್ಲು ಹಾಸಿನ ಮೇಲೆ ಆಲಿಕಲ್ಲು ಮನಮೋಹಕವಾಗಿ ಕಂಡರೆ, ಮಹಾನಗರ ಪಾಲಿಕೆಯ ಆವರಣದಲ್ಲಿನ ಕಲ್ಲು ಹಾಸಿನ ಮೇಲೆ ಆಲಿಕಲ್ಲು ಉಪ್ಪು ಸುರಿದಂತಾಗಿತ್ತು. ಜೈಲ್ ರಸ್ತೆ, ನೆಹರು ರಸ್ತೆ, ಕಾಂಗ್ರೆಸ್ ಕಚೇರಿ ರಸ್ತೆ, ಮಿಳಘಟ್ಟ ರಸ್ತೆ, ಕಾಮಾಕ್ಷಿ ಬೀದಿ, ಸಿಮ್ಸ್ ಕಾಲೇಜು ಎದುರು, ವೆಂಕಟೇಶ್ ನಗರದ ಸೇರಿದಂತೆ ಕೆಲವು ತಗ್ಗು ಪ್ರದೇಶಗಳಲ್ಲಿನ ಚರಂಡಿ ಕಟ್ಟಿಕೊಂಡು ರಸ್ತೆ ಮೇಲೆ ನೀರು ಹರಿದು ಅವಾಂತರ ಸೃಷ್ಟಿಯಾಗಿತ್ತು. ನಗರದ ಬಹುತೇಕ ಕಡೆಗಳಲ್ಲಿ ವಿದ್ಯುತ್ ಕೂಡ ಸ್ಥಗಿತವಾಗಿತ್ತು.

ಯುಗಾದಿಯ ವ್ಯಾಪಾರಕ್ಕೆ ತಂದಿದ್ದ ಮಾವು, ಬೇವಿನ ಸೊಪ್ಪಿನ ವ್ಯಾಪಾರಿಗಳಿಗೂ ಮಳೆ ಸಂಚಕಾರ ತಂದಿತ್ತು. ಏಕಾಏಕಿ ಮಳೆ ಬಂದಿದ್ದರಿಂದಾಗಿ ವ್ಯಾಪಾರಿಗಳು ಫುಟ್‌ಪಾತ್ ಮೇಲೆಯೇ ಬಿಟ್ಟು ಕಟ್ಟಡದೊಳಗೆ ಆಶ್ರು ಪಡೆಯುವಂತಾಗಿತ್ತು.



ಹಸಿರು ಹಾಸಿನ ಮೇಲೆ ಬಿದ್ದ ಆಲಿಕಲ್ಲಿನ ದೃಶ್ಯ

ಸಚಿವಾಕಾಂಕ್ಷಿಗಳು ಭೇಟಿಯಾಗಿಲ್ಲ: ಡಿಕೆ

ಪುಟ 1➡ **ಅಸ್ಸಾಂ ಜನರು ಬದಲಾವಣೆ ಬಯಸಿದ್ದಾರೆ:** ಅಸ್ಸಾಂ ಕಾಂಗ್ರೆಸ್ ಸಂಸದ ಹಾಗೂ ಪಕ್ಷದ ನಿಷ್ಠಾವಂತ ನಾಯಕ ಪಕ್ಷ ತೊರೆದಿರುವುದು ನಮಗೆ ಅಚ್ಚರಿ ತಂದಿದೆ. ನಾನು ಅವರ ಜತೆ ಮಾತನಾಡುವ ಪ್ರಯತ್ನ ಮಾಡಿದೆ. ಆದರೆ ಅಷ್ಟು ಹೊತ್ತಿಗೆ ಅವರು ತೀರ್ಮಾನ ಮಾಡಿದ್ದರು. ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಅವರು ಕಾಂಗ್ರೆಸ್ ಪಕ್ಷದಲ್ಲಿ ರೋಲ್ ಮಾಡೆಲ್ ಆಗಿದ್ದರು ಎಂದು ತಿಳಿಸಿದರು.



ಕೆಪಿಎಸ್ಸಿ ಪರೀಕ್ಷೆಯಲ್ಲಿ ಲೋಪವಾಗಿಲ್ಲ: ಸಚಿವ

ಪುಟ 1➡ ಈ ವೇಳೆ ಸುರೇಶ್ ಕುಮಾರ್ ಅವರು ತಮ್ಮಲ್ಲಿರುವ ದಾಖಲಾತಿಗಳನ್ನು ತನಿಖೆಗೆ ನೀಡುವುದಾಗಿ ತಿಳಿಸಿದರು.



ಹೂಟಾ ಸಮಿತಿಯ ಶಿಫಾರಸು ಅನುಷ್ಠಾನ: ಶೇ.99ರಷ್ಟು ಹೂಟಾ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನ ಮಾಡಿದ್ದು, ಸದಸ್ಯರ ನೇಮಕಕ್ಕೆ ಸ್ವಂತ ಕಮಿಟಿ ಮಾಡಿದ್ದು, ಸಂದರ್ಶನದಲ್ಲಿ ಏನೆಲ್ಲ ನಡೆಯುತ್ತದೆ ಎಂಬುದೆಲ್ಲ ಸತ್ಯ, ಶೇ.80ರಷ್ಟು ಅಂಕ ನೀಡಿದರೆ ಕಾರಣ ನೀಡಬೇಕಿದೆ. ಈಗ ಸಿ ಗ್ರೂಪ್ ಹುದ್ದೆಗಳ ನೇಮಕಕ್ಕೆ ಸಂದರ್ಶನ ರದ್ದು ಮಾಡಲಾಗಿದೆ ಎಂದರು. ಪ್ರತಿ ವರ್ಷ ನೇಮಕಾತಿ ಘೋಷಣೆ ಸೇರಿದಂತೆ ಪರೀಕ್ಷೆ ದಿನಾಂಕ ನಿಗದಿ ಮಾಡಬೇಕು. ಸಂದರ್ಶನದ ಅಂಕಗಳನ್ನು ಕಡಿಮೆ ಮಾಡಿದ್ದು, 150ಕ್ಕೆ ಇದ್ದಿದ್ದನ್ನು 25ಕ್ಕೆ ಇಳಿಸಲಾಗಿದೆ. ಆ ವರ್ಷದ ನೇಮಕಾತಿ ಆ ವರ್ಷಕ್ಕೆ ಮುಗಿಯಬೇಕು ಆದರೆ ಅದು ಪ್ರಾಯೋಗಿಕವಾಗಿ ಅನುಷ್ಠಾನ ವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಪ್ರತಿ ವರ್ಷ ಡಿ.31ರೊಳಗೆ ಇಲಾಖೆಗಳು ತಮ್ಮಲ್ಲಿ ಖಾಲಿ ಇರುವ ಹುದ್ದೆಗಳ ವಿವರವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಮೂಲಕ ಕೆಪಿಎಸ್‌ಸಿಗೆ ಕಳುಹಿಸಬೇಕು, ನಿಗದಿಯಾದ ತಿಂಗಳಿನ ವಾರದ ದಿನದಂದೇ ಪರೀಕ್ಷೆ ನಡೆಯಬೇಕು, ಆ ವರ್ಷದ ಪರೀಕ್ಷೆ ಗೊಂದಲ ಉಂಟಾದರೂ ಪ್ರತಿ ವರ್ಷದ ಪರೀಕ್ಷೆ ನಡೆಯುತ್ತಲೇ ಇರಬೇಕು, 5 ವರ್ಷದ ಕ್ಯಾಲೆಂಡರ್ ಸಿದ್ಧಪಡಿಸಬೇಕು ಮತ್ತು ಈ ಬಗ್ಗೆ ಹಣಕಾಸು ಇಲಾಖೆ ಅಧಿಕಾರಿಗಳ ಜತೆಗೂ ಮಾತನಾಡಲಾಗಿದೆ ಎಂದರು.

ತಿರುಪತಿ ಭಕ್ತಾದಿಗಳಿಗೆ ಪಂಚತಾರಾ ವಸತಿ ಸೌಲಭ್ಯ

• **ಬೆಂಗಳೂರು:** ತಿರುಪತಿಗೆ ಭೇಟಿ ನೀಡುವ ರಾಜ್ಯದ ಭಕ್ತಾದಿಗಳ ಅನುಕೂಲಕ್ಕಾಗಿ ಇರುವ ಕರ್ನಾಟಕ ಭವನದ ಆಡಳಿತ ಮತ್ತು ನಿರ್ವಹಣೆಯಲ್ಲಿ ಮಹತ್ವದ ಬದಲಾವಣೆಯಾಗಿದೆ. ಈವರೆಗೆ ಮುಜರಾಯಿ ಇಲಾಖೆಯ ಸುಪರ್ದಿಯಲ್ಲಿದ್ದ ಈ ಭವನದ ಜವಾಬ್ದಾರಿಯನ್ನು ಈಗ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ(ಕೆಎಸ್‌ಟಿಡಿಸಿ) ಹಸ್ತಾಂತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ತಿರುಪತಿ ಭಕ್ತಾದಿಗಳಿಗೆ ಪಂಚತಾರಾ ವಸತಿ ಸೌಲಭ್ಯ ನೀಡಲು ಸರ್ಕಾರ ನಿರ್ಧರಿಸಿದೆ.

ಈ ವಿಚಾರವಾಗಿ ವಿಧಾನ ಪರಿಷತ್ ಸದಸ್ಯ ಕೆ. ಗೋವಿಂದರಾಜು ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸಾರಿಗೆ ಹಾಗೂ ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ಲಿಖಿತ ಉತ್ತರ ನೀಡಿದ್ದಾರೆ.ತಿರುಪತಿ ಭಕ್ತಾದಿಗಳಿಂದ ಕೇಳಿಬಂದ ಸಾಲು ಸಾಲು ದೂರುಗಳು ಹಾಗೂ ಸ್ವಚ್ಛತೆಯ ಕೊರತೆಯ ಹಿನ್ನೆಲೆಯಲ್ಲಿ, ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದ ಖಾಸಗಿ ಸಂಸ್ಥೆಗೆ ಭಾರಿ ದಂಡ ವಿಧಿಸುವುದರ ಜೊತೆಗೆ, ವಸತಿ ಗೃಹಗಳನ್ನು ಉತ್ಕೃಷ್ಟವಾಗಿ ನಿರ್ವಹಿಸುವ ಸಲುವಾಗಿ, ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಕೆಎಸ್‌ಟಿಡಿಸಿಗೆ ಹಸ್ತಾಂತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ. ಫೆಬ್ರವರಿಯಲ್ಲಿ ನಡೆದ ಉನ್ನತಮಟ್ಟದ ಸಭೆಯಲ್ಲಿ ಆಡಳಿತಾತ್ಮಕ ಬದಲಾವಣೆಗಳು, ಕೆಎಸ್‌ಟಿಡಿಸಿಗೆ ವಹಿಸಬೇಕಾದ ಜವಾಬ್ದಾರಿಗಳು ಮತ್ತು ಭಕ್ತಾದಿಗಳಿಗೆ ನೀಡಬೇಕಾದ ರಿಯಾಯಿತಿ ದರಗಳ ಕುರಿತು ಸಮಗ್ರವಾಗಿ ಚರ್ಚಿಸಲಾಗಿದೆ. ತಿರುಮಲದ ಕರ್ನಾಟಕ ಭವನದಲ್ಲಿ ಕೊಠಡಿಗಳ ಸ್ವಚ್ಛತೆ, ಶೌಚಾಲಯಗಳ ನಿರ್ವಹಣೆ ಮತ್ತು ಭಕ್ತಾದಿಗಳಿಗೆ ನೀಡಬೇಕಾದ ಕನಿಷ್ಠ ಸೌಲಭ್ಯಗಳಲ್ಲಿ ಖಾಸಗಿ ಏಜೆನ್ಸಿಯು ತೀವ್ರ ನಿರ್ಲಕ್ಷ್ಯ ತೋರಿರುವುದು ಸರ್ಕಾರದ ಗಮನಕ್ಕೆ ಬಂದ ಬಳಿಕ ಈ ಕ್ರಮ ಕೈಗೊಂಡಿದೆ. ನಿರ್ವಹಣಾ ವೆಚ್ಚದ ಬಿಲ್ಲಿನಲ್ಲಿ ಶೇ. 20 ರಷ್ಟು ಮೊತ್ತವನ್ನ ದಂಡದ ರೂಪದಲ್ಲಿ ಕಡಿತಗೊಳಿಸಲಾಗಿದೆ.

ಕೇಂದ್ರ ಸರ್ಕಾರವೂ ಗಮನಿಸಲಿ

ಪುಟ 1➡ ಹೆಚ್ಚು ಗೌರವ ಧನ ಕೊಡುತ್ತಿರುವವರ ಪೈಕಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಸರ್ಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಕಾಳಜಿ ವಹಿಸುತ್ತದೆ. ಹರ್ಯಾಣ, ತೆಲಂಗಾಣ ಹಾಗೂ ಕೇರಳ ರಾಜ್ಯಗಳ ಬಳಿಕ ಹೆಚ್ಚು ಗೌರವಧನ ಕೊಡಲಾಗುತ್ತಿದೆ ಎಂದರು.

ಅಂಗನವಾಡಿ ಕಾರ್ಯಕರ್ತರಿಗೆ ಕೇಂದ್ರ ಸರ್ಕಾರ 2700 ರೂ. ಗೌರವ ಧನವನ್ನು ಪಾವತಿಸಿದರೆ, ಉಳಿದ 9800 ರೂ.ಗಳನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಕಳೆದ ಏಪ್ರಿಲ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ 1000 ರೂ., ಸಹಾಯಕಿಯರಿಗೆ 750 ರೂ. ಏರಿಕೆ ಮಾಡಲಾಯಿತು. ಅವರು ಮಾಡುತ್ತಿರುವ ಕೆಲಸಕ್ಕೆ ಇದು ಸಾಕಾಗುತ್ತಿಲ್ಲ, ಸಹಾಯಧನ ಏರಿಕೆ ಮಾಡಬೇಕು ಎಂದು ಮನವಿ ಬಂದಿದ್ದು, ಈ ಸಂಬಂಧ ನಾವು ಈಗಾಗಲೇ ಹಣಕಾಸು ಇಲಾಖೆಗೆ ಮನವಿ ಸಲ್ಲಿಸಿದ್ದೇವೆ. ಆದರೆ, ಈ ವಿಷಯದಲ್ಲಿ ಕೇಂದ್ರ ಸರ್ಕಾರ ಒಂದು ಹೆಜ್ಜೆ ಮುಂದೆ ಹೋದರೆ ನಾವೂ ಒಂದು ಹೆಜ್ಜೆ ಮುಂದೆ ಹೋಗುತ್ತೇವೆ. ಅವರೂ ಕಣ್ತೆರೆಯಬೇಕು ಎಂದು ಸಚಿವರು ತಿಳಿಸಿದರು.

5 ಸಾವಿರ ಅಂಗನವಾಡಿಗಳಲ್ಲಿ ಮಾಂಟೆಸ್ಸರಿ

ಪ್ರಸಕ್ತ ವರ್ಷದಿಂದ 5,000 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರಿ ಮಾಂಟೆಸ್ಸರಿ ಆರಂಭಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಪೌಷ್ಟಿಕ ಆಹಾರದ ಜತೆ ಗುಣಮಟ್ಟದ ಶಿಕ್ಷಣ ನೀಡುವುದೇ ನಮ್ಮ ಉದ್ದೇಶ. ಬಿಎ, ಬಿ.ಇಡಿ, ಎಂಎ, ಎಂಕಾಂ ಪದವಿ ಪಡೆದಿರುವ ಸುಮಾರು 17 ಸಾವಿರ ಅಂಗನವಾಡಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಮಾಂಟೆಸ್ಸರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ನಮ್ಮ ಗುರಿಯಾಗಿದೆ ಎಂದರು.

ಗೌರವ ಡಾಕ್ಟರೇಟ್ ನೀಡಲು ಮಾರ್ಗಸೂಚಿ

• **ಬೆಂಗಳೂರು:** ರಾಜ್ಯದ ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್ ಪದವಿಗಳ ಘನತೆಯನ್ನು ಉಳಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಒಬ್ಬರೇ ವ್ಯಕ್ತಿಗೆ ಹಲವು ವಿಶ್ವವಿದ್ಯಾಲಯಗಳು ಡಾಕ್ಟರೇಟ್ ನೀಡುತ್ತಿರುವುದು ಮತ್ತು ಗೌರವ ಡಾಕ್ಟರೇಟ್ ನೀಡುವುದರಲ್ಲಿನ ಪಾರದರ್ಶಕತೆಯ ಕೊರತೆಯ ಬಗ್ಗೆ ದೂರುಗಳು ಬರುತ್ತಿರುವ ಹಿನ್ನೆಲೆ, ಇನ್ನುಮುಂದೆ ಈ ಗೌರವ ಡಾಕ್ಟರೇಟ್ ನೀಡಲು ಮಾರ್ಗಸೂಚಿ ರೂಪಿಸಲು ಸರ್ಕಾರ ಮುಂದಾಗಿದೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರಿಗೆ ಈ ಕುರಿತು ಪತ್ರ ಬರೆದಿದ್ದು, ಏಕರೂಪದ ಮಾರ್ಗಸೂಚಿಗಳನ್ನು ರೂಪಿಸಲು ತಜ್ಞರ ಸಮಿತಿಯನ್ನು ರಚಿಸುವಂತೆ ಪತ್ರ ಬರೆದು ಮನವಿ ಮಾಡಿದ್ದಾರೆ. ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಎಲ್ಲಾ ರಾಜ್ಯ, ಖಾಸಗಿ ಮತ್ತು ವಿಶೇಷ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವಂತೆ ಸಮಾನ ನಿಯಮಗಳನ್ನು ರೂಪಿಸಬೇಕು. ಒಬ್ಬ ವ್ಯಕ್ತಿಗೆ ಹಲವು ವಿಶ್ವವಿದ್ಯಾಲಯಗಳಿಂದ ಗೌರವ ಪದವಿ ಸಿಗದಂತೆ ಮಿತಿಯನ್ನು ನಿಗದಿ ಮಾಡಬೇಕು ಎಂದು ಸಚಿವರು ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಪದವಿಯ ಪವಿತ್ರತೆಯನ್ನು ಕಾಪಾಡಲು ಈ ಕ್ರಮ ಅನಿವಾರ್ಯವಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿಯಾಗಲಿ

• **ವಿಧಾನ ಪರಿಷತ್:** ಪರಿಶಿಷ್ಟ ಜಾತಿಗಳಿಗೆ ನೀಡಿದಂತೆ ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿ ಮಾಡಬೇಕು ಎಂಬ ಕೂಗು ಸದನದಲ್ಲಿ ಬುಧವಾರ ಕೇಳಿಬಂದಿದೆ.

ಈ ಬಗ್ಗೆ ಮೇಲ್ಮನೆಯಲ್ಲಿ ಶಾಂತಾರಾಮ್ ಸಿದ್ದಿ ಅವರು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ಪರಿಶಿಷ್ಟ ಪಂಗಡಗಳಲ್ಲೂ ಒಳ ಮೀಸಲಾತಿ ಜಾರಿ ಮಾಡಲು, ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಆಯೋಗ ರಚಿಸಿ, ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಮಾತ್ರ ಒಳ ಮೀಸಲಾತಿ ಜಾರಿ ಮಾಡಿದೆ, ಆದರೆ, ಪರಿಶಿಷ್ಟ ಪಂಗಡಗಳಿಗೂ ಒಳ ಮೀಸಲಾತಿ ವಿಸ್ತರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರಿನಲ್ಲಿ ನಡೆದ ವಿವಿಧ ಬುಡಕಟ್ಟು ಸಮುದಾಯಗಳ ನಾಯಕರ ಸಭೆಯಲ್ಲಿ ಆಗ್ರಹಿಸಲಾಗಿದೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರಿಗೆ ಮನವಿ ಕೂಡ ಸಲ್ಲಿಸಲಾಗಿದೆ ಎಂದು ಪತ್ರಿಕೆಗಳಲ್ಲಿ ಉಲ್ಲೇಖಿಸಲಾಗಿದೆ ಎಂದರು. 2024ರ ಆ.1ರಂದು ಪ್ರಕಟವಾದ ಒಳ ಮೀಸಲಾತಿ ಕುರಿತ ಐತಿಹಾಸಿಕ ತೀರ್ಪಿನಲ್ಲಿ, ಪರಿಶಿಷ್ಟ ಜಾತಿ ಜತೆಗೆ ಪರಿಶಿಷ್ಟ ಪಂಗಡದಲ್ಲೂ ಒಳ ಮೀಸಲಾತಿ ವರ್ಗೀಕರಣ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ, ರಾಜ್ಯ ಸರ್ಕಾರ ಅದನ್ನು ಪಾಲಿಸಿಲ್ಲ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಶಾಂತಾರಾಮ್ ಸಿದ್ದಿ ತಿಳಿಸಿದರು. ಪರಿಶಿಷ್ಟ ಪಂಗಡಗಳಲ್ಲಿ ಸಣ್ಣ ಬುಡಕಟ್ಟು, ಸೂಕ್ಷ್ಮ, ದುರ್ಬಲ, ಪ್ರಬಲ ಸಮುದಾಯಗಳು ಒಂದೇ ಗುಂಪಿನಲ್ಲಿ ಮೀಸಲಾತಿ ಹಂಚಿಕೊಳ್ಳುವಂತಾಗಿದೆ ಎಂದು ಅನೇಕ ಪತ್ರಿಕೆಗಳು ವರದಿ ಮಾಡಿವೆ. ಈ ಕುರಿತು ಸರ್ಕಾರ ಮುತುವರ್ಜಿ ವಹಿಸಿ, ನಿವೃತ್ತ ನ್ಯಾಯಮೂರ್ತಿಗಳ ಆಯೋಗ ರಚಿಸಬೇಕು ಎಂದು ಬುಡಕಟ್ಟು ಸಮುದಾಯಗಳ ಮುಖಂಡರು ಒತ್ತಾಯಿಸುತ್ತಿದ್ದಾರೆ ಎಂದು ತಿಳಿಸಿದರು.

ಮರ್ಯಾದೆ ಹತ್ಯೆಗೆ ಐದು ವರ್ಷ ಜೈಲು

ಪುಟ 1➡ ಮರ್ಯಾದೆಯ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರಿಗೆ ತೀವ್ರ ಗಾಯವಾಗಲು ಕಾರಣನಾದ ವ್ಯಕ್ತಿಗೆ 3 ವರ್ಷಗಳ ಜೈಲು, 3 ಲಕ್ಷ ರೂ.ವರೆಗೆ ದಂಡ ಹಾಕಲಾಗುತ್ತದೆ. ಸಣ್ಣ ಗಾಯವಾಗಲು ಕಾರಣವಾದರೆ 2 ವರ್ಷದವರೆಗೆ ಜೈಲು ಶಿಕ್ಷೆ ಮತ್ತು 2 ಲಕ್ಷ ರೂ. ವರೆಗೆ ದಂಡ ವಿಧಿಸಬಹುದಾಗಿದೆ. ಇದನ್ನು 7 ವರ್ಷದವರೆಗೂ ವಿಸ್ತರಿಸಬಹುದಾಗಿದೆ. ಮದುವೆಯಾಗುವ ಜೋಡಿಯ ಯಾವುದೇ ಕಡೆಯ ಸಂಬಂಧಿ ಅಥವಾ ಬೆಂಬಲಿಗರನ್ನು ಬೆದರಿಸಿದರೆ 3 ವರ್ಷಗಳಿಂದ 5 ವರ್ಷಗಳ ಜೈಲು ಮತ್ತು 2 ಲಕ್ಷ ರೂ.ವರೆಗೆ ದಂಡ ವಿಧಿಸಬಹುದಾಗಿದೆ. ಸಂತ್ರಸ್ತರ ಸಂಬಂಧಿಕರು ಮತ್ತು ಸಾಕ್ಷಿಗಳ ವಿರುದ್ಧ ಹಿಂಸೆ ಅಥವಾ ಬಲವಂತದ ಬೆದರಿಕೆಗಳಿಗೆ ರಕ್ಷಣೆ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಪೊಲೀಸರು ರಕ್ಷಣೆ ಕೋರಿಕೆಯನ್ನು ಸ್ವೀಕರಿಸಿದ್ದಲ್ಲಿ ತಕ್ಷಣವೇ ಮತ್ತು 6 ಗಂಟೆಯೊಳಗೆ ಈ ವ್ಯಕ್ತಿಗಳಿಗೆ ಸೂಕ್ತ ಎನಿಸುವ ವಿಧಾನದಲ್ಲಿ ಸುರಕ್ಷತಾ ಕ್ರಮಗಳನ್ನು ಒದಗಿಸಬೇಕು ಮತ್ತು ಜಿಲ್ಲಾ ಕೇಂದ್ರದಲ್ಲಿ ವಾಸಸ್ಥಳ ಸ್ಥಾಪಿಸಬೇಕಾಗುತ್ತದೆ.

ಡಿಜೆ ನಿಷೇಧಿಸುವ ಕುರಿತು ಚರ್ಚೆ

ಪುಟ1➡ ಇದೇ ವೇಳೆ, ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರು ಕೊಪ್ಪಳದಲ್ಲಿ ಆನೆಗುಂದಿ ಉತ್ಸವವನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು. ಮಧ್ಯಪ್ರವೇಶಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಎಲ್ಲ ಜಯಂತಿಗಳ ಆಚರಣೆ ಸಂದರ್ಭದಲ್ಲಿ ಡಿಜೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಯಾವುದೇ ಆಚರಣೆ, ಮೆರವಣಿಗೆ ಸಂದರ್ಭದಲ್ಲಿ ಡಿಜೆ, ಐಟಂ ಸಾಂಗ್‌ಗಳು ಪ್ರಸಾರ ಆಗಲಿಲ್ಲವೆಂದರೆ ದೇವರು ಮುಂದೆ ಸಾಗುವುದೇ ಇಲ್ಲ, ಇದು ಅಸಹ್ಯವಾಗುತ್ತದೆ, ಈ ಬಗ್ಗೆ ಚರ್ಚೆಯಾಗಬೇಕಿದೆ. ಡಿಜೆಗಳು, ಐಟಂ ಸಾಂಗ್‌ಗಳು ಯಾವುದೇ ಸಂಸ್ಕೃತಿಗೆ ಒಳ್ಳೆಯದಲ್ಲ, ಆದ್ದರಿಂದ ಡಿಜೆ ನಿಷೇಧಿಸಬೇಕು ಎಂದು ಪ್ರತಿಪಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ತಂಗಡಗಿ, ಡಿಜೆಯಿಂದಾಗಿ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ನಾವು ಈ ಸಂಬಂಧ ಆದೇಶ ಹೊರಡಿಸುತ್ತೇವೆ. ಆದರೆ, ಬಿಜೆಪಿಯವರು ಸಹಕಾರ ಕೊಡಬೇಕು. ಎಲ್ಲರೂ ಸಹಮತ ಸೂಚಿಸಿದರೆ, ಡಿಜೆ ನಿಷೇಧಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಮಧ್ಯಪ್ರವೇಶ ಮಾಡಿ, ನಮ್ಮಲ್ಲಿ ಡಿಜೆ ಸಂಸ್ಕೃತಿ ಇರಲಿಲ್ಲ, ಡಿಜೆ ಸಂಸ್ಕೃತಿ ಈಗ ಹುಟ್ಟಿದ್ದು. ಡಿಜೆಗಳಲ್ಲಿ ಹಾಕುವ ಹಾಡುಗಳ ಬಗ್ಗೆ ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಭಜನೆಗಳಿಗೆ ಯಾರೂ ಬೇಡ ಎನ್ನುತ್ತಿಲ್ಲ ಎಂದರು. ಈ ವೇಳೆ ಸ್ಪಷ್ಟನೆ ನೀಡಿದ ಸಭಾಧ್ಯಕ್ಷ ಯು.ಟಿ. ಖಾದರ್, ಡೆಸಿಬಲ್ ಪ್ರಮಾಣ ಎಷ್ಟಿರಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ನಿಗದಿಪಡಿಸಿದೆ. ಎಲ್ಲ ಸರ್ಕಾರಗಳೂ ಅದನ್ನು ಅನುಸರಿಸಬೇಕು ಎಂದು ಹೇಳಿದರು. ಸಭಾಧ್ಯಕ್ಷರು ಚರ್ಚೆಗೆ ಅವಕಾಶ ನೀಡುವುದಾಗಿ ತಿಳಿಸಿದರು.

ಇವ ನಮ್ಮವ ವೇದಿಕೆ

ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಮ್ಯಾಜಿಸ್ಟ್ರೇಟರು ಇವ ನಮ್ಮವ ವೇದಿಕೆ ರಚಿಸಬೇಕಿದ್ದು, ಇದರಲ್ಲಿ ನಿವೃತ್ತ ನ್ಯಾಯಾಧೀಶರು, ಪೊಲೀಸ್ ಅಧಿಕಾರಿ, ಕಂದಾಯ ಉಪನೋಂದಣಿ ಅಧಿಕಾರಿ ಮತ್ತು ಸರ್ಕಾರ ನೇಮಿಸಬಹುದಾದ ಸದಸ್ಯರು ಇರುತ್ತಾರೆ. ವೇದಿಕೆಯು ಮದುವೆ ವಿಧಿವಿಧಾನಕ್ಕೆ ಅನುಕೂಲ ಕಲ್ಪಿಸಿಕೊಡಲಿದ್ದು, ಸಮಾಲೋಚನಾ ಸೇವೆಗಳನ್ನು ಒದಗಿಸಲಿದೆ.

ಕಿರುಸುದ್ದಿ

ಐಪಿಎಲ್ ಹೆಸರಿನ ವಿರುದ್ಧ ಪಿಐಎಲ್: ಅರ್ಜಿ ವಜಾ

ತಿರುವನಂತಪುರ: ಇಂಡಿಯನ್ ಪ್ರೀಮಿಯರ್ ಲೀಗ್ ಎಂಬ ಹೆಸರು ಬಳಸಿದ್ದಕ್ಕಾಗಿ ಭಾರತೀಯ ಕ್ರಿಕೆಟ್ ಸಂಸ್ಥೆ ವಿರುದ್ಧ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕೇರಳ ಹೈಕೋರ್ಟ್ ವಜಾಗೊಳಿಸಿತು. ಎರ್ನಾಕುಲಮ್‌ನ ಆಶಿಖ ಎಂಬುವವರು, ಕೂಟ ಒಂದು ಫ್ರಾಂಚೈಸಿ ಆಧರಿತ ಪಂದ್ಯಾವಳಿಯಾದರೂ ಇದರ ಹೆಸರನ್ನು ಭಾರತದೊಂದಿಗೆ ಜೋಡಿಸಲಾಗಿದೆ. ಇದು ಪಂದ್ಯಾವಳಿಯನ್ನು ರಾಷ್ಟ್ರೀಯ ಕೂಟವೆಂಬಂತೆ ಸೂಚಿಸುತ್ತದೆ. ಹೀಗಾಗಿ ಬಿಸಿಸಿಐ ಈ ಇಂಡಿಯನ್ ಪ್ರೀಮಿಯರ್ ಲೀಗ್ ಹೆಸರಲ್ಲಿ ನಡೆಸುತ್ತಿರುವುದು ಅಕ್ರಮ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಬುಧವಾರ ಈ ಬಗ್ಗೆ ವಿಚಾರಣೆ ನಡೆಸಿದ್ದ ನ್ಯಾ. ಸೌಮೆನ್ ಸೇನ್ ಹಾಗೂ ನ್ಯಾ. ಸ್ಯಾಮ್ ಕುಮಾರ್ ವಿ. ಎಮ್. ಅವರಿದ್ದ ವಿಭಾಗೀಯ ಪೀಠವು ಅರ್ಜಿಯನ್ನು ಆಧಾರರಹಿತ ಎಂದು ಪರಿಗಣಿಸಿ ವಜಾಗೊಳಿಸಿದೆ.



ಕಣಕ್ಕಿಳಿದ ಕಿಂಗ್ ಕೊಹ್ಲಿ



ಹೊಸದಿಲ್ಲಿ: ಮುಂದಿನ ವಾರದಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಬೆಂಗಳೂರಿಗೆ ಬಂದಿಳಿದರು. ಹಾಲಿ ಚಾಂಪಿಯನ್ ಬೆಂಗಳೂರು ಮತ್ತು ಹೈದರಾಬಾದ್ ಪಂದ್ಯದೊಂದಿಗೆ ಮಾರ್ಚ್ 28ಕ್ಕೆ ಐಪಿಎಲ್ ಶುರುವಾಗಲಿದೆ. ಇದಕ್ಕೂ ಮುನ್ನ ಲಂಡನ್‌ನಿಂದ ವಿರಾಟ್ ಕೊಹ್ಲಿ ಭಾರತಕ್ಕೆ ಆಗಮಿಸಿದ್ದಾರೆ. ಬೆಂಗಳೂರಿಗೆ ತಲುಪಿದ್ದು, ತಂಡ ಸೇರಿಕೊಂಡಿದ್ದಾರೆ. ಶೀಘ್ರದಲ್ಲೇ ಅಭ್ಯಾಸಕ್ಕಿಳಿಯಬಹುದು. ಇನ್ನೊಂದೆಡೆ ಚೆನ್ನೈ ತಂಡದ ಧೋನಿ ಮತ್ತು ಮುಂಬೈನ ರೋಹಿತ್ ಶರ್ಮ ಕೂಡ ನೆಟ್ಸ್‌ನಲ್ಲಿ ಕಾಣಿಸಿಕೊಂಡಿದ್ದು, ದೇಶದಲ್ಲಿ ಐಪಿಎಲ್ ಜ್ವರ ಶುರುವಾದಂತಿದೆ.

ಥಾಮಸ್ ಮತ್ತು ಉಬರ್ ಕಪ್: ಭಾರತ ಎ ಗುಂಪಿನಲ್ಲಿ

ಹೊಸದಿಲ್ಲಿ: ಥಾಮಸ್ ಮತ್ತು ಉಬರ್ ಕಪ್ ಚಾಂಪಿಯನ್‌ಶಿಪ್ ಡ್ರಾ ಬುಧವಾರ ನಡೆದಿದ್ದು ಏಪ್ರಿಲ್ 24ರಿಂದ ಮೇ 3ರವರೆಗೆ ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆಯಲಿದೆ. ಭಾರತ ಪುರುಷರ ತಂಡವನ್ನು ಎ ಗುಂಪಿನಲ್ಲಿ ಹಾಲಿ ಚಾಂಪಿಯನ್ ಚೀನಾ, ಓಶಿಯಾನಿಯಾ ಚಾಂಪಿಯನ್ ಆಸ್ಟ್ರೇಲಿಯಾ ಮತ್ತು ಪ್ಯಾನ್‌ಅಮ್ ಚಾಂಪಿಯನ್ ಕೆನಡಾ ಜೊತೆ ಸೇರಿಸಲಾಗಿದೆ. ಮಹಿಳಾ ತಂಡಕ್ಕೆ ಇನ್ನಷ್ಟು ಕಠಿಣ ಸವಾಲು ಎದುರಾಗಿದ್ದು, ಚೀನಾ, ಯುರೋಪಿನ ಬಲಿಷ್ಠ ತಂಡ ಡೆನ್ಮಾರ್ಕ್ ಹಾಗೂ ಉಕ್ರೇನ್ ತಂಡಗಳ ವಿರುದ್ಧ ಆಡಬೇಕಿದೆ. ನಾಲ್ಕು ಗುಂಪುಗಳಲ್ಲಿ ಮೊದಲ ಎರಡು ಸ್ಥಾನ ಗಳಿಸಿದ ತಂಡಗಳು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಲಿವೆ. 2022ರಲ್ಲಿ ಈ ಪ್ರಶಸ್ತಿ ಗೆದ್ದಿದ್ದ ಭಾರತ ಪುರುಷರ ತಂಡ, ಕಳೆದ ಬಾರಿ ಕ್ವಾರ್ಟರ್ ಫೈನಲ್‌ನಲ್ಲಿ ನಂತರದ ಚಾಂಪಿಯನ್ ಚೀನಾ ವಿರುದ್ಧ ಸೋತು ಹೊರಬಿದ್ದಿತ್ತು.

ಭಾರತ ಜಗತ್ತಿನ ಅತಿ ದೊಡ್ಡ ಶಕ್ತಿ

ಅಯೋಧ್ಯೆ: ಭಾರತ ಜಗತ್ತಿನ ಅತಿ ದೊಡ್ಡ ಶಕ್ತಿಯಾಗಿದೆ. ಅದು ಸಂಹಾರಕ್ಕಾಗಿ ಅಲ್ಲ ಸಂರಕ್ಷಣೆಗಾಗಿ, ಭಾರತ ಆದರ್ಶವನ್ನು ಮರೆತರೆ ಜಗತ್ತಿನಲ್ಲಿ ಆದರ್ಶ ಮರೆಯಾಗಿಬಿಡುತ್ತದೆ ಎಂದು ಆರ್‌ಎಸ್‌ಎಸ್ ನ ಪ್ರಮುಖರಾದ ಸುರೇಶ ಭಯ್ಯಾಜಿ ಜೋಶಿ ಹೇಳಿದ್ದಾರೆ. ಅಯೋಧ್ಯೆ ಹಿಂದೂ ಹೊಸವರ್ಷದ ಪ್ರಯುಕ್ತ ಪ್ರತಿವರ್ಷದಂತೆ ಈ ವರ್ಷವೂ ಕೂಡ ಸಂಜೆಯ ವೇಳೆ ನಡೆದ ರಾಮಕೋಟ್ ವಿಶೇಷ ಪರಿಕ್ರಮದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಶ್ವಕ್ಕೆ ಆದರ್ಶದ ಬಗ್ಗೆ ತಿಳುವಳಿಕೆ ನೀಡುವವರು ಇರುವುದಿಲ್ಲ ಎಂದು ಹೇಳಿದರು. ಹಿಂದೂ ಶಕ್ತನಾಗಿದ್ದು ಒಗ್ಗಟ್ಟಿನಲ್ಲಿ ಬಲವಿದೆ ಎಂದು ತೋರಿಸಿ ಕೊಟ್ಟಿದ್ದಾನೆ ಎಂದರು. ಈ ಕಾರ್ಯಕ್ರಮದಲ್ಲಿ ಹಲವಾರು ಜನ ಸಾಧು,ಸಂತ ಮಹಾತ್ಮರು ಪಾಲ್ಗೊಂಡಿದ್ದರು, ಮತ್ ಗಜೇಂದ್ರ ಮಂದಿರದಿಂದ ಆರಂಭವಾದ ಪರಿಕ್ರಮ ಶ್ರೀ ರಾಮ ಜನ್ಮಭೂಮಿ ಸಮೇತವಾಗಿ ಹಲವಾರು ಮಂದಿರಗಳ ಪರಿಕ್ರಮದ ನಂತರ ಮರಳಿ ಮತ್ ಗಜೇಂದ್ರ ಮಂದಿರಕ್ಕೆ ತಲುಪಿದ ನಂತರ ಪರಿಕ್ರಮ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಕ್ಷೇತ್ರ ಪ್ರಚಾರಕರಾದ ಅನೀಲ ಜಿ, ವೈದೇಹಿ ವಲ್ಲಭ ಶರಣ, ರಾಜ ಕುಮಾರ ದಾಸ ಹೀಗೆ ಹಲವಾರು ಜನ ಪಾಲ್ಗೊಂಡಿದ್ದರು.

ಎಫ್‌ಐಎಚ್ ವಿಶ್ವಕಪ್ ಡ್ರಾ ಬಿಡುಗಡೆ | ಡಿ ಗುಂಪಿನಲ್ಲಿ ಭಾರತ | ಚೀನಾ ಮತ್ತಿತರ ತಂಡಗಳ ವಿರುದ್ಧ ಮಹಿಳೆಯರ ಆಟ

ಹಾಕಿ ವಿಶ್ವಕಪ್‌ನಲ್ಲಿ ಭಾರತ-ಪಾಕ್ ಪಂದ್ಯ

ಹೊಸದಿಲ್ಲಿ: ಭಾರತ ಹಾಗೂ ಪಾಕಿಸ್ತಾನ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗಲು ಸಜ್ಜಾಗಿದ್ದು, ಅಂತಾರಾಷ್ಟ್ರೀಯ ಹಾಕಿ ಸಂಸ್ಥೆಯ ಹಾಕಿ ವಿಶ್ವಕಪ್ ಪಂದ್ಯಾವಳಿಯ ಪುರುಷರಲ್ಲಿ ಉಭಯ ತಂಡಗಳು ಎದುರಾಗಲಿವೆ. ಮಹಿಳೆಯರ ವಿಭಾಗದಲ್ಲಿ ಭಾರತ ಚೀನಾ ತಂಡವನ್ನು ಮೊದಲ ಪಂದ್ಯದಲ್ಲಿ ಎದುರಿಸಲಿದೆ.

ಎಫ್‌ಐಎಚ್ ಹಾಕಿ ವಿಶ್ವಕಪ್ ಪಂದ್ಯಾವಳಿಯ ಮುಖ್ಯ ಡ್ರಾ, ಪಂದ್ಯಗಳ ವೇಳಾಪಟ್ಟಿ ಬಿಡುಗಡೆಯಾಗಿದೆ. ಭಾರತ ಮತ್ತು ಪಾಕಿಸ್ತಾನ ಹಾಕಿ ತಂಡಗಳು ಮತ್ತೆ ಮುಖಾಮುಖಿಯಾಗಲು ಸಜ್ಜಾಗಿವೆ. ಎಫ್‌ಐಎಚ್ ಪುರುಷರ ಹಾಕಿ ವಿಶ್ವಕಪ್‌ನಲ್ಲಿ ಈ ಎರಡು ಪೈಪೋಟಿ ತಂಡಗಳು ಡಿ ಗುಂಪಿನಲ್ಲಿವೆ. ಈ ಗುಂಪಿನಲ್ಲಿ ಇಂಗ್ಲೆಂಡ್ ಮತ್ತು ವೇಲ್ಸ್ ತಂಡಗಳೂ ಸೇರಿವೆ. ಈ ವಿಶ್ವಕಪ್ ಆಗಸ್ಟ್ ತಿಂಗಳಲ್ಲಿ ಬೆಲ್ಜಿಯಂ ಮತ್ತು ನೆದರ್‌ಲ್ಯಾಂಡ್ಸ್‌ನಲ್ಲಿ ನಡೆಯಲಿದೆ. ಪ್ರೋ ಲೀಗ್ ಪಂದ್ಯಾವಳಿಯಲ್ಲಿ ಹಿನ್ನಡೆ ಅನುಭವಿಸಿದರೂ ಭಾರತ ಏಷ್ಯಾಕಪ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿ ಅರ್ಹತೆ ಪಡೆದಿದೆ. ಮಹಿಳೆಯರು ಕೂಡ ಏಷ್ಯಾಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಅರ್ಹತೆ ಗಿಟ್ಟಿಸಿಕೊಂಡಿದ್ದರು.

ಭಾರತ ಮತ್ತು ಪಾಕಿಸ್ತಾನ ಕೊನೆಯದಾಗಿ 2024ರಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಮುಖಾಮುಖಿಯಾಗಿದ್ದು, ಭಾರತ 2-1 ಅಂತರದಲ್ಲಿ ಜಯ ಸಾಧಿಸಿತ್ತು. ಇತ್ತೀಚಿನ ಪಂದ್ಯಗಳಲ್ಲಿ ಭಾರತ ಮೇಲುಗೈ ಸಾಧಿಸಿದ್ದರೂ, ಒಟ್ಟು ಮುಖಾಮುಖಿ ದಾಖಲೆಗಳಲ್ಲಿ ಪಾಕಿಸ್ತಾನ ಇನ್ನೂ ಮುನ್ನಡೆಯಲ್ಲಿದೆ. ವಿಶ್ವಕಪ್‌ಗೆ ಮುನ್ನ ಈ ಎರಡು ತಂಡಗಳು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿಯೂ ಮತ್ತೆ ಎದುರಾಗಲಿವೆ. ಒಲಿಂಪಿಕ್ ಚಾಂಪಿಯನ್ ನೆದರ್‌ಲೆಂಡ್ಸ್ ತಂಡವನ್ನು ಎ ಗುಂಪಿನಲ್ಲಿ ಅರ್ಜೆಂಟಿನಾ, ನ್ಯೂಜಿಲೆಂಡ್ ಮತ್ತು ಜಪಾನ್ ಜೊತೆ ಸೇರಿಸಲಾಗಿದೆ. ಹಾಲಿ ಚಾಂಪಿಯನ್ ಜರ್ಮನಿ ತಂಡ ಬಿ ಗುಂಪಿನಲ್ಲಿ ಬೆಲ್ಜಿಯಂ, ಫ್ರಾನ್ಸ್ ಮತ್ತು ಮಲೇಶಿಯಾ ಜೊತೆ ಇದೆ.

ಭಾರತಕ್ಕೆ ಯಾವ್ಯಾವ ತಂಡ ಎದುರಾಳಿ?: ಭಾರತ ಇರುವ ಗುಂಪಿನಲ್ಲಿ ಇಂಗ್ಲೆಂಡ್, ವೇಲ್ಸ್ ಹಾಗೂ ಪಾಕಿಸ್ತಾನ ತಂಡಗಳಿವೆ. ವೇಳಾಪಟ್ಟಿ ಇನ್ನೂ ಪ್ರಕಟವಾಗಬೇಕಿರುವ ಹೊತ್ತಿನಲ್ಲಿ ಭಾರತ ಎಫ್‌ಐಎಚ್ ನಲ್ಲಿ ಹಿನ್ನಡೆ ಅನುಭವಿಸಿದೆ. ಈ ಹಿಂದಿನ ಪಂದ್ಯಗಳಲ್ಲಿ ಭಾರತ ಭಾರೀ ಹಿನ್ನಡೆ ಅನುಭವಿಸಿದೆ. ಸತತ ಸೋಲು ಗಳಿಸಿದರೂ, ಪ್ರೋ ಲೀಗ್ ಬಿಟ್ಟು ಬೇರೆ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಬೆನ್ನಲ್ಲೇ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ.

ಮಹಿಳೆಯರಿಗೆ ದೊಡ್ಡ ಸವಾಲು: ಎಫ್‌ಐಎಚ್ ಪ್ರೋ ಲೀಗ್‌ನಲ್ಲಿ ಉತ್ತಮ ಪ್ರದರ್ಶನವನ್ನೇ ನೀಡಿರುವ ಭಾರತ ಮಹಿಳೆಯರ ತಂಡವು ಹೈದರಾಬಾದ್‌ನಲ್ಲಿ ನಡೆದಿದ್ದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಎಲ್ಲಿಲ್ಲದ ಉತ್ತಮ ಪ್ರದರ್ಶನ ನೀಡಿ ರನ್ನರ್-ಅಪ್ ಆಗಿತ್ತು. ಅರ್ಹತೆ ಕೂಡ ಗಿಟ್ಟಿಸಿಕೊಂಡಿತು. ಪ್ರತಿಯೊಬ್ಬ ಆಟಗಾರ್ತಿ ಕೂಡ ಭರ್ಜರಿ ಪ್ರದರ್ಶನ ನೀಡಿರುವುದು ತಂಡ ವಿಶ್ವಾಸದಲ್ಲಿದೆ. ಆದಾಗ್ಯೂ ವಿಶ್ವಕಪ್‌ನಲ್ಲಿ ಭಾರತ ಮಹಿಳಾ ತಂಡವು ಚೀನಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.



ಯಾವ ಪಂದ್ಯ ಎಲ್ಲಿ?

ಪುರುಷರ ವಿಭಾಗದಲ್ಲಿ ಎ ಗುಂಪಿನಲ್ಲಿರುವ ತಂಡಗಳ ಪಂದ್ಯವು ನೆದರ್ಲೆಂಡ್ಸ್‌ನಲ್ಲಿ ನಡೆಯಲಿವೆ. ಬಿ ಮತ್ತು ಸಿ ಗುಂಪಿನ ಪಂದ್ಯಗಳು ಬೆಲ್ಜಿಯಂನಲ್ಲಿ ಮತ್ತು ಡಿ ಗುಂಪಿನ ಪಂದ್ಯಗಳು ನೆದರ್ಲೆಂಡ್ಸ್‌ನಲ್ಲೇ ನಡೆಯಲಿವೆ. ಮಹಿಳೆಯರ ವಿಭಾಗದಲ್ಲೂ ಇದೇ ಮಾದರಿಯಿದ್ದು, ಎ ಮತ್ತು ಡಿ ಪಂದ್ಯಗಳು ನೆದರ್ಲೆಂಡ್ಸ್, ಬಿ-ಸಿ ಪಂದ್ಯಗಳು ಬೆಲ್ಜಿಯಂನಲ್ಲಿ ನಡೆಯಲಿವೆ.

ಪುರುಷರ ಗುಂಪು

- ಎ ಗುಂಪು: ನೆದರ್ಲೆಂಡ್ಸ್, ಅರ್ಜೆಂಟಿನಾ, ನ್ಯೂಜಿಲೆಂಡ್, ಜಪಾನ್
- ಬಿ ಗುಂಪು: ಬೆಲ್ಜಿಯಂ, ಜರ್ಮನಿ, ಫ್ರಾನ್ಸ್, ಮಲೇಶಿಯಾ
- ಸಿ ಗುಂಪು: ಆಸ್ಟ್ರೇಲಿಯಾ, ಸ್ಪೇನ್, ಐರ್ಲೆಂಡ್, ದಕ್ಷಿಣ ಆಫ್ರಿಕಾ
- ಡಿ ಗುಂಪು: ಇಂಗ್ಲೆಂಡ್, ಭಾರತ, ಪಾಕಿಸ್ತಾನ, ವೇಲ್ಸ್

ಮಹಿಳೆಯರ ವಿಭಾಗದಲ್ಲಿ

- ಪೂಲ್ ಎ: ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಚಿಲಿ, ಜಪಾನ್
- ಪೂಲ್ ಬಿ: ಅರ್ಜೆಂಟೀನಾ, ಜರ್ಮನಿ, ಯುಎಸ್‌ಎ, ಸ್ಕಾಟ್ಲೆಂಡ್
- ಪೂಲ್ ಸಿ: ಬೆಲ್ಜಿಯಂ, ಸ್ಪೇನ್, ನ್ಯೂಜಿಲೆಂಡ್, ಐರ್ಲೆಂಡ್
- ಪೂಲ್ ಡಿ: ಚೀನಾ, ಇಂಗ್ಲೆಂಡ್, ಭಾರತ, ದಕ್ಷಿಣ ಆಫ್ರಿಕಾ
- ಮಹಿಳೆಯರ ವಿಶ್ವಕಪ್ ಗುಂಪುಗಳು

ಬೂಮ್ರಾ ವೇತನ ಹೆಚ್ಚಳ?

ಮುಂಬೈ: ವಾರ್ಷಿಕ ಗುತ್ತಿಗೆಯಲ್ಲಿ ಎ ಗ್ರೇಡ್ ನಲ್ಲಿರುವ ಜಸ್‌ಪ್ರೀತ್ ಬೂಮ್ರಾ ಅವರ ವೇತನ ಹೆಚ್ಚುಗೊಳಿಸಲು ಬಿಸಿಸಿಐ ಚಿಂತನೆ ನಡೆಸಿದೆ. ಭಾರತ ತಂಡ ಇತ್ತೀಚಿಗೆ ಮುಕ್ತಾಯಗೊಂಡಿರುವ ಟಿ20 ವಿಶ್ವಕಪ್ ಗೆದ್ದುಕೊಂಡಿದೆ. ಈ ಗೆಲುವಿನಲ್ಲಿ ಬೂಮ್ರಾ ಪಾತ್ರ ಪ್ರಮುಖವಾಗಿರುವುದನ್ನು ಗಮನಿಸಿರುವ ಬಿಸಿಸಿಐ ಅವರಿಗೆ ಉಡುಗೊರೆಯಾಗಿ 2 ಕೋಟಿ ರೂ. ಹೆಚ್ಚುವರಿ ಮೊತ್ತ ನೀಡುವುದಕ್ಕೆ ಮುಂದಾಗಿದೆ ಎಂದು ವರದಿಯಾಗಿದೆ.

ಫೆಬ್ರವರಿಯಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ವಾರ್ಷಿಕ ಗುತ್ತಿಗೆಯ ಪಟ್ಟಿ ಬಿಡುಗಡೆ ಮಾಡಿತ್ತು. ಪ್ರಮುಖ ಬದಲಾವಣೆಯಲ್ಲಿ ಈ ಬಾರಿ ಮೂರೇ ದರ್ಜೆಗಳಲ್ಲಿ ಆಟಗಾರರನ್ನು ವಿಂಗಡಿಸಲಾಗಿದೆ. ಎ ಗ್ರೇಡ್‌ನಲ್ಲಿ ಶುಭಮನ್ ಗಿಲ್, ರವೀಂದ್ರ ಜಡೇಜಾ ಮತ್ತು ಜಸ್‌ಪ್ರೀತ್ ಬೂಮ್ರಾ ಇದ್ದು, ಬಿ ಮತ್ತು ಸಿ ಗ್ರೇಡ್ ನಲ್ಲಿ ಪ್ರಮುಖ ಆಟಗಾರರು ಸೇರಿಕೊಂಡಿದ್ದಾರೆ. ಮತ್ತೊಂದು ಬದಲಾವಣೆಯಲ್ಲಿ ಬಿಸಿಸಿಐ ವಾರ್ಷಿಕ ಮೊತ್ತವನ್ನೂ ಕಡಿತಗೊಳಿಸಿದೆ. ಎ ಗ್ರೇಡ್ ನಲ್ಲಿದ್ದವರಿಗೆ 5 ಕೋಟಿ ರೂ. ಬಿನಲ್ಲಿರುವವರಿಗೆ 3 ಮತ್ತು ಸಿನಲ್ಲಿರುವವರಿಗೆ 2 ಕೋಟಿ ನೀಡುವುದಾಗಿ ಘೋಷಿಸಿತ್ತು.



- ಬಿಸಿಸಿಐ ವಾರ್ಷಿಕ ಗುತ್ತಿಗೆಯಲ್ಲಿ ಬದಲಾವಣೆ ಸಾಧ್ಯತೆ
- ಅಕ್ಷರ್‌ಗೆ ಬಡ್ತಿ ಗಿಫ್ಟ್

ಆದರೆ ಈ ವೇತನದಲ್ಲಿ ಬದಲಾವಣೆ ಮಾಡಿ, ಬೂಮ್ರಾ ಅವರಿಗೆ ಮಾತ್ರ 7 ಕೋಟಿ ರೂ. ನೀಡುವ ಬಗ್ಗೆ ಬಿಸಿಸಿಐ ಚಿಂತನೆ ನಡೆಸುತ್ತಿದೆ. ಇದಲ್ಲದೆ, ಸಿ ಗ್ರೇಡ್‌ನಲ್ಲಿರುವ ಅಕ್ಷರ್ ಪಟೇಲ್ ಅವರಿಗೆ ಬಡ್ತಿ ನೀಡುವ ಕುರಿತು ವರದಿಯಾಗಿದ್ದು, ಕೆ.ಎಲ್. ರಾಹುಲ್, ಹಾರ್ದಿಕ್ ಪಾಂಡ್ಯ ಹಾಗೂ ರಿಷಭ್ ಪಂತ್ ಅವರನ್ನು ಎ ಗ್ರೇಡ್‌ನಲ್ಲಿ ಸೇರಿಸುವ ಚಿಂತನೆ ಕೂಡ ನಡೆಸಿದೆ ಎನ್ನಲಾಗಿದೆ.

ಆರ್‌ಸಿಬಿ ಖರೀದಿಗೆ ಎರಡು ಪಾರ್ಟಿ ನಡುವೆ ಪೈಪೋಟಿ

ಹೊಸದಿಲ್ಲ: ಐಪಿಎಲ್ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಾರಾಟ ಪ್ರಕ್ರಿಯೆ ಅಂತಿಮ ಹಂತಕ್ಕೆ ಪ್ರವೇಶಿಸಿದ್ದು, ಎರಡು ಪ್ರಮುಖ ಪಾರ್ಟಿಗಳು ಅಂತಿಮ ಪೈಪೋಟಿಗೆ ಉಳಿದಿವೆ ಎಂದು ವರದಿಯಾಗಿದೆ.

ಒಂದು ಕಡೆ ಸ್ವೀಡನ್ ಮೂಲದ ಖಾಸಗಿ ಇಕ್ವಿಟಿ ಸಂಸ್ಥೆ ಇಕ್ವೂಟಿ ದೊಡ್ಡ ಮೊತ್ತದ ಬಿಡ್ ಸಲ್ಲಿಸಿದೆ. ಇನ್ನೊಂದು ಕಡೆ ಮಣಿಪಾಲ್ ಆಸ್ಪತ್ರೆಗಳ ರಂಜನ್ ಪೈ, ಅಮೆರಿಕದ ಖಾಸಗಿ ಹೂಡಿಕೆ ಸಂಸ್ಥೆ ಕೋಹ್ಲ್‌ಬರ್ಗ್ ಕ್ರಾವಿಸ್ ರಾಬರ್ಟ್ಸ್ ಅಂಡ್ ಕಂಪನಿ ಹಾಗೂ ಸಿಂಗಾಪುರದ ಟೆಮಸೆಕ್ ಸೇರಿಕೊಂಡ ಒಕ್ಕೂಟವೂ ಪೈಪೋಟಿಯಲ್ಲಿ ಇದೆ. ಇದರ ನಡುವೆ ಮ್ಯಾಂಚೆಸ್ಟರ್ ಯುನೈಟೆಡ್ ಸಹ ಮಾಲೀಕರಾದ ಗ್ಲೇಜರ್ ಕುಟುಂಬ ಹಾಗೂ ಆದಾರ್ ಪೂನಾವಲ್ಲಾ ಈ ರೇಸ್‌ನಿಂದ ಹಿಂದೆ ಸರಿದಿದ್ದಾರೆ. ಈ ಒಪ್ಪಂದದ ಮೌಲ್ಯ ಸುಮಾರು 2 ಬಿಲಿಯನ್ ಡಾಲರ್ ಮಟ್ಟದಲ್ಲಿ ಇರಬಹುದು ಎಂದು ಅಂದಾಜಿಸಲಾಗಿದೆ. ಗ್ಲೇಜರ್‌ಗಳು ಸುಮಾರು 14.9 ಸಾವಿರ ಕೋಟಿ ರೂ. ಮೊತ್ತದ ಆಫರ್ ನೀಡಿದ್ದರೆ, ಇಕ್ವೂಟಿ ಅದರಿಗಿಂತ ಹೆಚ್ಚಾಗಿ ಸುಮಾರು 1.86 ಲಕ್ಷ ಕೋಟಿ ರೂ. ಮಟ್ಟದ ಬಿಡ್ ನೀಡಿದೆ ಎಂದು ವರದಿಯಾಗಿದೆ. ಡಿಯಾಜಿಯೋ ಗುಂಪು ಮಾರ್ಚ್ 31ರೊಳಗೆ ಈ ಒಪ್ಪಂದವನ್ನು ಅಂತಿಮಗೊಳಿಸಲು ಗಡುವು ನಿಗದಿ ಮಾಡಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ. ಇನ್ನೊಂದೆಡೆ, ರಾಜಸ್ಥಾನ್ ರಾಯಲ್ಸ್ ತಂಡಕ್ಕೂ ಸಾಕಷ್ಟು ಹೂಡಿಕೆದಾರರಿಂದ ಆಸಕ್ತಿ ವ್ಯಕ್ತವಾಗಿದೆ. ಈ ಫ್ರಾಂಚೈಸಿಗೆ ಮೂರು ಬಾಂಧವ್ಯ ಬಿಡ್‌ಗಳು ಬಂದಿದ್ದು, ಆದಿತ್ಯ ಬಿರ್ಲಾ ಗುಂಪು ಮುಂಚೂಣಿಯಲ್ಲಿದೆ.



ಹೈದರಾಬಾದ್‌ಗೆ ಕಿಶನ್ ಹಂಗಾಮಿ ನಾಯಕ

ಹೈದರಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಪ್ಯಾಟ್ ಕಮ್ಮಿನ್ಸ್ ಅವರು ಕೆಲವು ಪಂದ್ಯಗಳ ಮಟ್ಟಿಗೆ ಅಲಭ್ಯರಿರುವ ಬಗ್ಗೆ ಖಚಿತ ಪಡಿಸಿರುವ ಸನ್‌ರೈಸರ್ಸ್ ಹೈದರಾಬಾದ್ ಇಶಾನ್ ಕಿಶನ್ ಅವರನ್ನು ಹಂಗಾಮಿ ನಾಯಕರನ್ನಾಗಿ ಮಾಡಿದೆ. ಇನ್ನು 9 ದಿನಗಳಲ್ಲಿ ಐಪಿಎಲ್ ಶುರುವಾಗಲಿದೆ. ಎಲ್ಲಾ ತಂಡಗಳು ಅಭ್ಯಾಸಕ್ಕಿಳಿದಿವೆ. ಲೀಗ್‌ಗಾಗಿ ಎಲ್ಲಾ ಆಟಗಾರರು ಸಜ್ಜಾಗುತ್ತಿದ್ದಾರೆ. ಈ ಮಧ್ಯೆ ಪ್ಯಾಟ್ ಕಮ್ಮಿನ್ಸ್ ಗಾಯದ ನಿಟ್ಟಿನಲ್ಲಿ ಕೆಲವು ಪಂದ್ಯಗಳ ಮಟ್ಟಿಗೆ ವಿಕೆಟ್ ಕೀಪರ್-ಬ್ಯಾಟರ್ ಇಶಾನ್ ಕಿಶನ್ ನಾಯಕರನ್ನಾಗಿ, ಅಭಿಷೇಕ್ ಶರ್ಮ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ ಎಂದು ಫ್ರಾಂಚೈಸಿ ಘೋಷಣೆ ಮಾಡಿದೆ. ಗಾಯದ ಬಿಸಿ ಬಹುತೇಕ ಎಲ್ಲ ಫ್ರಾಂಚೈಸಿಗಳಿಗೂ ತಟ್ಟುತ್ತಿದೆ. ಈ ಮಧ್ಯೆ ಪ್ಯಾಟ್ ಕಮ್ಮಿನ್ಸ್ ತೀವ್ರ ಗಾಯದಿಂದ ಅಲಭ್ಯರಾಗಿದ್ದಾರೆಂದು ಹೇಳಲಾಗುತ್ತಿದೆ. ಹೀಗಿರುವಾಗ ವಿಶ್ವಕಪ್ ಪಂದ್ಯಾವಳಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ಮಿಂಚಿರುವ ಇಶಾನ್ ಕಿಶನ್ ಅವರಿಗೆ ನಾಯಕತ್ವ ನೀಡಲಾಗಿದೆ. ವೈಯಕ್ತಿಕ ಪ್ರದರ್ಶನ ಹೊರತುಪಡಿಸಿ, ಅವರು ಜಾರ್ಖಂಡ್ ತಂಡವನ್ನು ಸೈಯದ್ ಮುಷ್ತಾಕ್ ಅಲಿ ಟ್ರೋಫಿಯನ್ನು ನಾಯಕರಾಗಿ ಗೆಲ್ಲಿಸಿದ್ದಾರೆ.



ಜಾಲತಾಣ ನಿರ್ಬಂಧ ಇನ್ನಷ್ಟು ವಿಸ್ತಾರ: ಸಚಿವ ಅಶ್ವಿನಿ ವೈಷ್ಣವ್

ಹೊಸದಿಲ್ಲಿ: ಐಟಿ ಮಾತ್ರವಲ್ಲ, ಸರಕಾರದ ಇತರ ಎಲ್ಲಾ ಮಹತ್ವಪೂರ್ಣ ಸಚಿವಾಲಯಗಳೂ ಸಾಮಾಜಿಕ ಜಾಲತಾಣ ನಿರ್ಬಂಧಿಸುವ ಅಧಿಕಾರವನ್ನು ಶೀಘ್ರವೇ ಪಡೆಯಲಿವೆ. ಐಟಿ ಕಾಯ್ದೆಯನ್ನೇ ಮಾರ್ಪಾಡು ಮಾಡುವ ಬದಲು, ಈಗಾಗಲೇ ಅಸ್ತಿತ್ವದಲ್ಲಿರುವ ನಿಯಮಗಳನ್ನು ತಿದ್ದುಪಡಿ ಮಾಡಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ನಕಲಿ ಅಥವಾ ಹಾನಿಕಾರಕ ವಿಚಾರಗಳ ಪ್ರಸಾರ ತಡೆಹಿಡಿವ ನಿಟ್ಟಿನಲ್ಲಿ , ಸರ್ಕಾರದ ಬಹುತೇಕ ಖಾತೆಗಳಿಗೂ ಸಾಮಾಜಿಕ ಜಾಲತಾಣ ಬ್ಲಾಕಿಂಗ್ ಆದೇಶ ಹೊರಡಿಸುವ ಅಧಿಕಾರವೀಗ ಪ್ರಸ್ತಾವವೊಂದು ಅಂತರ್ ಸಚಿವಾಲಯ ತಂಡದ ಪರಿಗಣನೆಯಲ್ಲಿದೆ. ಅಧಿಕಾರ ವಿಕೇಂದ್ರೀಕರಣ ಮುಖೇನ, ತಪ್ಪು ಮಾಹಿತಿಗಳ ಪ್ರಸಾರವನ್ನು ಪರಿಣಾಮಕಾರಿಯಾಗಿ ತಡೆ ಹಿಡಿಯುವುದು ಪ್ರಸ್ತುತ ಉಪಕ್ರಮ ಹಿಂದಿನ ಮೂಲೋದ್ದೇಶವಾಗಿದೆ. ಸರಕಾರದ ಪ್ರಸ್ತುತ ಉಪಕ್ರಮದಿಂದ ನಕಲಿ ಅಥವಾ ತಪ್ಪು ಮಾಹಿತಿಗಳು ವೈರಲ್ ಆಗುವುದನ್ನು ಯಶಸ್ವಿಯಾಗಿ ತಡೆಹಿಡಿಯಲು ಸಾಧ್ಯವೆಂದು ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಒಮ್ಮೆ ಡೀಪ್‌ಫೇಕ್‌ಗಳನ್ನು ಗುರುತಿಸಿ, ಪಿಐಬಿ ಮುಖೇನ ಸತ್ಯಶೋಧಿಸಿದಲ್ಲಿ, ಜನರಿಗೆ ತಪ್ಪು ಮಾಹಿತಿ ರವಾನೆಯಾಗೋದನ್ನು ತ್ವರಿತ ತಡೆಹಿಡಿಯಲು ಸಾಧ್ಯವಾಗುವುದು ಎಂದು ಸಚಿವರು ತಿಳಿಸಿದ್ದಾರೆ.



ರಕ್ಷಣೆ, ವಿದೇಶಾಂಗ ಖಾತೆಗೂ ವಿಸ್ತರಣೆ?: ಸದ್ಯ ಮಾಹಿತಿ ತಂತ್ರಜ್ಞಾನ ಕಾಯ್ದೆ 2000ದ ಕಲಂ 69ಎ ಅನ್ವಯ ಬ್ಲಾಕ್ ಆದೇಶ ಹೊರಡಿಸುವ ಅಧಿಕಾರ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಗೆ ಸೀಮಿತವಾಗಿದೆ. ಈ ಅಧಿಕಾರವನ್ನು ವಿದೇಶ ವ್ಯವಹಾರಗಳ ಖಾತೆ, ಹಣಕಾಸು ಖಾತೆ ಮತ್ತು ರಕ್ಷಣೆಯಂತಹ ಪ್ರಮುಖ ಖಾತೆಗಳಿಗೂ ವಿಸ್ತರಿಸುವ ಬಗ್ಗೆ ಕೇಂದ್ರ ಸರ್ಕಾರ ಪರಾಮರ್ಶೆ ನಡೆಸುತ್ತಿದೆ.

ಬಹುತೇಕ ರಾಷ್ಟ್ರೀಯ ಭದ್ರತೆ, ವಿದೇಶ ವ್ಯವಹಾರಗಳು, ಆರ್ಥಿಕ ಸ್ಥಿರತೆ ಇತ್ಯಾದಿ ಸೂಕ್ಷ್ಮಸಂವೇದಿ ರಂಗಗಳನ್ನು ಟಾರ್ಗೆಟ್ ಮಾಡಿಕೊಂಡು ಡೀಪ್‌ಫೇಕ್ ಮಾಡಲಾಗುತ್ತಿದೆ. ಸರ್ಕಾರದ ಇತರ ಪ್ರಮುಖ ಖಾತೆಗಳಿಗೂ ಡೀಪ್ ಫೇಕ್ ವಿರುದ್ಧ ಕಾರ್ಯಾಚರಿಸುವ ಅಧಿಕಾರವಿತ್ತಲ್ಲಿ, ಇಂತಹ ಬೆದರಿಕೆಗಳಿಗೆ ಸಕಾಲಿಕವಾಗಿ ಪ್ರತ್ಯುತ್ತರಿಸಲು ಸಾಧ್ಯವಾಗುವುದೆಂಬುದು ಸರ್ಕಾರದ ಭರವಸೆ. ಮಾಜಿ ಸೇನಾಧಿಕಾರಿ ಮನೋಜ್ ಪಾಂಡೆ ಕುರಿತು ನಕಲಿ ವಿಡಿಯೊ ವೈರಲ್ ಆದ ಹಿನ್ನೆಲೆಯಲ್ಲಿ ಸರಕಾರ ಪ್ರಸ್ತುತ ಅಧಿಕಾರ ವಿಕೇಂದ್ರೀಕರಣ ಚಿಂತನೆ ನಡೆಸಿದೆ.

ಭಾರತೀಯ ಸೇನೆ ನೈತಿಕ ಪಡೆಯಾಗೋ ಬದಲು ಜನಾಂಗೀಯ ಸ್ವರೂಪ ಪಡೆಯುತ್ತಿದೆ ಮತ್ತು ಶೀಘ್ರ ದಂಗೆ ಸಾಧ್ಯತೆಯೂ ಇದೆ ಎಂದು ಮನೋಜ್ ಪಾಂಡೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆಂದು ಆರೋಪಿಸುವ ಡೀಪ್‌ಫೇಕ್ ವಿಡಿಯೊ ಈಚೆಗೆ ವೈರಲ್ ಆಗಿತ್ತು. ವಿಡಿಯೋದಲ್ಲಿ ಅಸ್ಸಾಂ ಬಗ್ಗೆಯೂ ಉಲ್ಲೇಖವಿದೆ. ಅಸ್ಸಾಂನ ಸಶಸ್ತ್ರಪಡೆ ವಿದೇಶಿ ಪ್ರಭಾವಕ್ಕೀಡಾಗಿದೆ ಎಂದು ವಿಡಿಯೋದಲ್ಲಿ ಸುಳ್ಳು ಮಾಹಿತಿ ನೀಡಲಾಗಿತ್ತು. ಬೆನ್ನಲ್ಲೇ, ಈ ವಿಡಿಯೋ ನಕಲಿ, ಇಂತಹ ಮಿಥ್ಯೆಯನ್ನು ಪಾಕಿಸ್ತಾನ ಪ್ರಸಾರ ಮಾಡುತ್ತಿದೆ. ದೇಶದ ಸೇನೆ ಬಗ್ಗೆ ಜನರಲ್ಲಿ ಅಪನಂಬಿಕೆ ಮೂಡಿಸುವುದು ಈ ರೀತಿಯ ನಕಲಿ ವಿಡಿಯೋ ಹಿಂದಿನ ದುರುದ್ದೇಶವೆಂದು ಪ್ರೆಸ್ ಇನ್ ಫಾರ್ಮೇಶನ್ ಬ್ಯೂರೋ (ಪಿಐಬಿ) ತಕ್ಷಣ ಸ್ಪಷ್ಟಪಡಿಸಿತ್ತು. ಇಂತಹ ವಿಡಿಯೋಗಳ ಶೇರ್ ಮಾಡೋ ಮುನ್ನ, ಮಾಹಿತಿಗಳ ಸತ್ಯಾಸತ್ಯತೆಯನ್ನು ನಂಬಲಾರ್ಹ ಮೂಲಗಳ ಮುಖೇನ ದೃಢೀಕರಿಸಿಕೊಳ್ಳುವಂತೆ ಸರಕಾರ ಜನರಿಗೆ ಸಲಹೆ ಮಾಡಿದೆ.

ಆಮಿಷಗಳಿಗೆ ಒಳಗಾಗಬೇಡಿ

ಬೆಂಗಳೂರು: ಪರೀಕ್ಷಾ ಸಿದ್ಧತೆಗಾಗಿ ಈಗಾಗಲೇ 3 ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಲಾಗಿದ್ದು, ಇದು ಮಕ್ಕಳಲ್ಲಿನ ಭಯವನ್ನು ಹೋಗಲಾಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಸುದ್ದಿಗಳು ಆಮಿಷಗಳಿಗೆ ಒಳಗಾಗಿ ತಪ್ಪು ದಾರಿ ಹಿಡಿದು ಮೋಸಹೋಗಬಾರದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ವಿನಂತಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರ ಆರಂಭದ ಹಿನ್ನೆಲೆಯಲ್ಲಿ ಬೆಂಗಳೂರಿನ ಮಲ್ಲೇಶ್ವರದ 13ನೇ ಅಡ್ಡರಸ್ತೆಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಗೆ (ಕೆಪಿಎಸ್) ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಪರೀಕ್ಷಾ ಅಕ್ರಮಗಳನ್ನು ತಡೆಯಲು ಎಲ್ಲ ಕೇಂದ್ರಗಳಲ್ಲೂ ವೆಬ್‌ಕ್ಯಾಸ್ಟಿಂಗ್ ಮೂಲಕ ನಿಗಾ ವಹಿಸಲಾಗಿದೆ. ಪ್ರತಿದಿನ ಪ್ರಶ್ನೆಪತ್ರಿಕೆಗಳನ್ನು ಸುರಕ್ಷಿತವಾಗಿ ಪೊಲೀಸ್ ಸಿಬ್ಬಂದಿಯೊಂದಿಗೆ ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗುತ್ತಿದೆ. ಆಯಾ ಜಿಲ್ಲಾ ಆಡಳಿತದ ಮೂಲಕ ಪರೀಕ್ಷೆಯನ್ನು ವ್ಯವಸ್ಥಿತವಾಗಿ ನಡೆಸಲು ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಹಾರೈಸಿದರು.

ಏ.7ಕ್ಕೆ ಪಿಯು ಫಲಿತಾಂಶ ನಿರೀಕ್ಷೆ: ಪದವಿ ಪೂರ್ವ ಶಿಕ್ಷಕರು ಮೌಲ್ಯಮಾಪನ ಬಹಿಷ್ಕಾರ ಮಾಡುತ್ತಿಲ್ಲ, ಆದ್ದರಿಂದ ತಾತ್ಕಾಲಿಕ ಗುರಿಯಂತೆ ಏ.7ಕ್ಕೆ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಿಸುವ ನಿರೀಕ್ಷೆಯಿದೆ ಎಂದರು. ಹಾಗೆಯೇ 1ನೇ ತರಗತಿಗೆ ಸೇರಲು 6 ವರ್ಷ ಕಡ್ಡಾಯವಾಗಬೇಕು ಎಂಬ ನಿಯಮದ ಸಡಿಲಿಕೆಯ ಬಗ್ಗೆ ಮುಖ್ಯಮಂತ್ರಿಗಳು ಹೇಳಿದಂತೆ ನಡೆಯುತ್ತೇವೆ ಎಂದು ಸಚಿವರು ತಿಳಿಸಿದರು.

ಪರೀಕ್ಷೆಗೆ 12,175 ಮಂದಿ ಗೈರು

ಬುಧವಾರ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ಪ್ರಥಮ ಭಾಷೆ ಪರೀಕ್ಷೆಗೆ 12,175 ಮಂದಿ ಗೈರಾಗಿದ್ದಾರೆ. ಈ ಪರೀಕ್ಷೆಗೆ 8,28,477 ಮಂದಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, ಈ ಪೈಕಿ 8,16,302 ಮಂದಿ ಪರೀಕ್ಷೆ ಬರೆದಿದ್ದಾರೆ. ಈ ಮೂಲಕ ಶೇ. 98.53 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಮಾ.23 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.15ರವರೆಗೆ ವಿಜ್ಞಾನ ಮತ್ತು ರಾಜ್ಯಶಾಸ್ತ್ರ ಹಾಗೂ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15ರವರೆಗೆ ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ ಪರೀಕ್ಷೆಗಳು ನಡೆಯಲಿವೆ.

ಪಾಲಿಕೆ ಗದ್ದುಗೆ ಹಿಡಿದ ಬಿಜೆಪಿ

ಬೆಳಗಾವಿ: ಕುತೂಹಲ ಕೆರಳಿಸಿದ ಬೆಳಗಾವಿ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಉಪಮೇಯರ್ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯ ದಾಖಲಿಸಿದೆ. ಕಾಂಗ್ರೆಸ್ ನೀಡಿದ ಪೈಪೋಟಿ ನಡುವೆಯೂ ಸಂಖ್ಯಾಬಲ ಪ್ರದರ್ಶಿಸಿದ ಕೇಸರಿ ಪಡೆ, ಪಾಲಿಕೆಯ ಅಧಿಕಾರ ತನ್ನದಾಗಿಸಿಕೊಂಡಿದೆ.

ಬುಧವಾರ ಬೆಳಗಾವಿ ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ನೇಕಾರ ಸಮುದಾಯದ ಪ್ರೀತಿ ಕಾಮಕರ್ ಹಾಗೂ ಉಪಮೇಯರ್ ಆಗಿ ಲಿಂಗಾಯತ ಸಮುದಾಯದ ಹನುಮಂತ ಕೊಂಗಾಲಿ ಆಯ್ಕೆಯಾಗಿದ್ದಾರೆ. ಪ್ರಾದೇಶಿಕ ಆಯುಕ್ತ ಜಾನಕಿ ಅವರ ಸಮ್ಮುಖದಲ್ಲಿ ನಡೆದ ಚುನಾವಣೆಯಲ್ಲಿ, ಬಿಜೆಪಿ ಅಭ್ಯರ್ಥಿಗಳು ತಲಾ 39 ಮತಗಳನ್ನು ಪಡೆಯುವ ಮೂಲಕ ಸ್ಪಷ್ಟ ಬಹುಮತ ಸಾಬೀತು ಪಡಿಸಿದರು. ಕಾಂಗ್ರೆಸ್ ಅಭ್ಯರ್ಥಿಗಳಾದ ಖುರ್ಷಿದಾ ಮುಲ್ಲಾ ಹಾಗೂ ಮೋದಿನಸಾಬ್ ಮತ್ತೇವಾಲೆ ತಲಾ 20 ಮತಗಳನ್ನು ಪಡೆದು ಪರಾಭವಗೊಂಡರು. ಅವಿರೋಧ ಆಯ್ಕೆಯ ನಿರೀಕ್ಷೆಯಲ್ಲಿದ್ದ ಬಿಜೆಪಿಗೆ ಕಾಂಗ್ರೆಸ್ ಸ್ಪರ್ಧೆಯೊಡ್ಡಿದರೂ ಅಂತಿಮವಾಗಿ ಸಂಖ್ಯಾಬಲದೊಂದಿಗೆ ಬಿಜೆಪಿ ವಿಜಯಮಾಲೆ ಧರಿಸಿತು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಕೇವಲ ರಾಜಕೀಯ ಸಮೀಕರಣವನ್ನಷ್ಟೇ ಅಲ್ಲದೆ, ಪ್ರಾದೇಶಿಕ ಅಸ್ಮಿತೆಗೂ ಆದ್ಯತೆ ನೀಡಿದ್ದು ವಿಶೇಷ. ಆಯ್ಕೆಯಾದ ಇಬ್ಬರೂ ಅಭ್ಯರ್ಥಿಗಳು ಅಪ್ಪಟ ಕನ್ನಡಿಗರಾಗಿರುವುದು ಕನ್ನಡಪರ ಸಂಘಟನೆಗಳ ಮೆಚ್ಚುಗೆಗೆ ಪಾತ್ರವಾಗಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿ ಶಾಸಕರು ಮಾತ್ರ ಭಾಗವಹಿಸಿದ್ದು, ಸಂಸದರು ಹಾಗೂ ಎಂಎಲ್ಸಿಗಳ ಗೈರು ಹಾಜರಿ ಕಂಡು ಬಂದಿತು. ಆದರೂ, ಎರಡೂ ಪ್ರಮುಖ ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಬೆಳಗಾವಿ ಪಾಲಿಕೆಯಲ್ಲಿ ತನ್ನ ಹಿಡಿತವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡಿದೆ ಎಂದು ಪಾಲಿಕೆಯ ನೂತನ ಮೇಯರ್-ಉಪಮೇಯರ್‌ಗೆ ಅಭಿನಂದನೆ ಸಲ್ಲಿಸಲಾಗುತ್ತಿದೆ.

ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣ

39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ


ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದ್ದು, ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಲೋಕಸಭೆ ಚುನಾವಣೆ ವೇಳೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಆಗಿತ್ತು. ಈ ಕುರಿತು 2024 ರ ಲೋಕಸಭಾ ಚುನಾವಣೆಯ ಜೆಡಿಎಸ್ ಚುನಾವಣೆ ಏಜೆಂಟ್ ವಕೀಲ ಪೂರ್ಣಚಂದ್ರ ಅವರು ಪೆನ್‌ಡ್ರೈವ್ ಹಂಚಿಕೆ ಮಾಡಿದವರ ವಿರುದ್ಧ ದೂರು ನೀಡಿದ್ದರು. ಆಧರಿಸಿ ತನಿಖೆ ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಹಾಸನ ಸಿವಿಲ್ ಕೋರ್ಟ್‌ಗೆ ಎಸ್‌ಐಟಿ 13,712 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. ಅಶ್ಲೀಲ ವಿಡಿಯೋ ಹಂಚಲು ಆರೋಪಿಗಳು 70 ಪೆನ್ ಡ್ರೈವ್ ಖರೀದಿಸಿದ್ದರು. ಹಾಸನದಲ್ಲೇ 70 ಪೆನ್ ಡ್ರೈವ್ ಖರೀದಿ ಮಾಡಿರುವುದು ತನಿಖೆಯಿಂದ ಬಯಲಾಗಿದೆ. ಪ್ರಕರಣದಲ್ಲಿ 52 ಮಂದಿ ಹೆಸರು ಉಲ್ಲೇಖ ಮಾಡಲಾಗಿತ್ತು. 52 ಮಂದಿಯಲ್ಲಿ 39 ಮಂದಿ ಆರೋಪ ಸಾಬೀತಾಗಿದೆ. ವಕೀಲ ಪೂರ್ಣಚಂದ್ರ ನೀಡಿದ ದೂರಿನ ಮೇರೆಗೆ ಎಫ್ ಐಆರ್ ದಾಖಲಾಗಿತ್ತು. ಎಸ್‌ಐಟಿ ತನಿಖೆ ವೇಳೆ ಮಹತ್ವದ ವಿಚಾರಗಳು ಬೆಳಕಿಗೆ ಬಂದಿವೆ. 70 ಪೆನ್ ಡ್ರೈವ್ ಖರೀದಿಸಿ ವಿಡಿಯೋ ವೈರಲ್ ಮಾಡಿರುವುದು ತನಿಖೆ ವೇಳೆ ಬಹಿರಂಗವಾಗಿದೆ. ಈ ಸಂಬಂಧ 277 ಸಾಕ್ಷಿಗಳ ಹೇಳಿಕೆಯನ್ನು ಎಸ್‌ಐಟಿ ದಾಖಲಿಸಿದೆ. ತಾಂತ್ರಿಕ ವರದಿ, ಎಫ್‌ಎಸ್‌ಎಲ್ ಸಾಕ್ಷಿಗಳ ವರದಿ ಆಧರಿಸಿ ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಲಾಗಿದೆ. ಪ್ರಕರಣದಲ್ಲಿ ಎರಡು ಪಕ್ಷದ ಕಾರ್ಯಕರ್ತರ ವಿರುದ್ಧ ಆರೋಪ ಕೇಳಿಬಂದಿದೆ. ವಿಡಿಯೋ ವೈರಲ್ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಹೆಸರು ಕೈಬಿಡಲಾಗಿದೆ. ತನಿಖೆ ಪೂರ್ಣಗೊಳಿಸಿ ಹಾಸನ ಕೋರ್ಟ್‌ಗೆ ಎಸ್‌ಐಟಿ ದೋಷಾರೋಪ ಪಟ್ಟಿ ಸಲ್ಲಿಸಿದೆ. ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಯಾರು ಪ್ರಮುಖ ವ್ಯಕ್ತಿಗಳು ಸಹ ಇದ್ದಾರೆ ಅವರ ಹೆಸರು ಬಹಿರಂಗಗೊಳಿಸಬೇಕು ಎಂದು ದೂರುದಾರ ಹಾಗೂ ವಕೀಲ ಪೂರ್ಣಚಂದ್ರ ಅವರು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಳೆದ ಲೋಕಸಭಾ ಚುನಾವಣೆ ವೇಳೆ ಜಾತ್ಯಾತೀತ ಜನತಾದಳದ ಅಭ್ಯರ್ಥಿ ಸೋಲಿಸಬೇಕು ಎಂದು ಸಂಚು ಹೂಡಿ ರಸ್ತೆ, ರಸ್ತೆಯಲ್ಲಿ ಪೆನ್ ಡ್ರೈವ್ ಹಂಚಿದರು. ಹಾಸನ ಜಿಲ್ಲೆಗೆ ಅಂಟಿದ ಕಳಂಕವನ್ನು ತೊಡೆದು ಹಾಕಬೇಕೆಂದು ಯಾರು ಹಂಚಿದರು ಅವರ ವಿರುದ್ಧ ದೂರು ಸಲ್ಲಿಸಿದ್ದೆ, ಅದರ ತನಿಖೆ ಪೂರ್ಣಗೊಳಿಸಿ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಆದರೆ ನಾನು ಕೊಟ್ಟ ದೂರಿನಲ್ಲಿ ಇದ್ದಂತಹ ಹೆಸರುಗಳನ್ನು ಚಾರ್ಜ್‌ಶೀಟ್‌ನಲ್ಲಿ ಎಸ್‌ಐಟಿ ತಂಡ ಕೈಬಿಟ್ಟಿದ್ದಾರೆ. ಇನ್ನಷ್ಟು ಆಳವಾಗಿ ತನಿಖೆ ನಡೆಸಿ ಅಡಿಷನಲ್ ಚಾರ್ಜ್‌ಶೀಟ್ ಸಲ್ಲಿಸಬೇಕು ಎಂದು ಒತ್ತಾಯಿಸಿದರು.

ಪದಬಂಧ 5928

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಸಂಸಾರವೆಂಬ ಬಂಧನ (4)
3.ಶುಭಲಕ್ಷಣಗಳಿಂದ ಕೂಡಿದ ಆನೆ (4)
5.ಜನರ ಕಡೆಗೆ ತಿರುಗಿದ ಮಡಿವಾಳ (3)
7.ಲಿಖಿತವಾದ ಒಪ್ಪಂದವಿದು (4)
9.ಮನುಷ್ಯಜಾತಿಯಲ್ಲಿ ತಿರುಗಿದೆ (4)
11.ವಸ್ತು-ಹಣ ಕೊಡದೆ ಉಳಿಸಿಕೊಂಡವನು (4)
14.ವಿಷ್ಣು ಶಿವರನ್ನು ಒಳಗೊಂಡ ನಗರ (4)
16.ಕಡೆಯ ಸಲ ನೋಡಿದಾಗ ಕಂಡ ಎಲ್ಲವೂ (3)
17.ಸ್ಥಿರವಾಗಿ ನೆಲೆಸು-ತಳವೂರು (4)
18.ಅನುಮಾನ ಬರದಂತಿರುವ ಸಂಚಿನ ರಹಸ್ಯ (4)

ಮೇಲಿನಿಂದ ಕೆಳಕ್ಕೆ
2.ಇದು ಅರಣ್ಯದಲ್ಲಿ ಹುಟ್ಟಿದುದು (4)
4.ಸಮಯ ತಿಳಿಸುವ ಸಾಧನ (4)
5.ಮೇರೆ ಮೀರಿ ಹೋದಾಗ ಕಂಡ ಲಕ್ಷ್ಮಿ (2)
6.ಕಲಹದಲ್ಲಡಗಿದ ಮಧುರವಾದುದು (2)
8.ತ್ರಿಲೋಕಸಂಚಾರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
10.ಕುರಿಯ ನಡುವೆ ಹುಲ್ಲಿನ ಮೆದೆಯಿದೆ (3)
12.ಕೋಪದಿಂದ ಕೆಟ್ಟಮಾತುಗಳನ್ನಾಡು (4)
13. ಇದು ಸತ್ವದಿಂದ ಕೂಡಿದ್ದು (2)
14. ಇದು ಬಲರಾಮನ ಆಯುಧ (2)
15. ಲೆಕ್ಕಹಾಕು-ಯೋಚಿಸು ಎಂಬರ್ಥದ ಶಬ್ದ (4)

5927 ಉತ್ತರ

ಎಡದಿಂದ ಬಲಕ್ಕೆ:
2.ಮರುತ 5.ಕೀರ್ತಿವಂತ
6.ಪಾಠಹೇಳು 7.ಕದನ
8.ವರಿಸು 10.ಸಂಚಾಲಕ
12.ಕುಂಜರಾರಿ
14.ಸಪಾಟು 15.ಸುಧಾಕರ
16.ಪರಿತ್ಯಕ್ತ

ಮೇಲಿನಿಂದ ಕೆಳಕ್ಕೆ :
1.ವಕೀಲ 2.ಮತದಾನ
3.ತಪಾಸಿಸು 4.ಬಾಳುವೆ
7.ಚಾಲಕ 9.ವಜೀರಾ
10.ಸಂಕೇತಿಸು 11.ಕಸವರ
12.ಕುಂಟುನೆಪ
13.ರಿಣಮುಕ್ತ

ಆಹಾರ ನಿರೀಕ್ಷಕ ಎಂ.ಸಿ. ಮಂಜುನಾಥ್

ಹರಿಹರದಲ್ಲಿ ಗ್ಯಾಸ್ ಟ್ರಬಲ್ ಇಲ್ಲ



◆ **ಹರಿಹರ:** ಹರಿಹರ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೇಳಿಕೊಳ್ಳುವಂತಹ ಗ್ಯಾಸ್ ಸಿಲಿಂಡರ್ ಗಳ ಅಭಾವ ಇಲ್ಲ ಎಂದು ಆಹಾರ ನಿರೀಕ್ಷಕ ಎಂ.ಸಿ ಮಂಜುನಾಥ್ ಸ್ಪಷ್ಟಪಡಿಸಿದರು.

ನಗರದ ಲಕ್ಷ್ಮಿ ಗ್ಯಾಸ್ ಏಜೆನ್ಸಿಗೆ ಭೇಟಿ ನೀಡಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಹಕರು ಸಿಲಿಂಡರ್ ಸಿಗುತ್ತದೆಯೋ ಇಲ್ಲವೋ ಎನ್ನುವ ಸಂದಿಗ್ಧತೆಗೊಳಗಾಗಿ ನಾ ಮುಂದುತಾ ಮುಂದು ಎಂದು ವಿತರಕರ ಬಳಿ ಬರುತ್ತಿದ್ದು ಕೃತಕ ಅಭಾವ ಸೃಷ್ಟಿಯಾಗಿದೆ ಎಂದರು.

ಸಿಲಿಂಡರ್‌ಗಳನ್ನು ವಿತರಣೆ ಮಾಡುವಾಗ ಮೊದಲು ಕಾಯ್ದಿರಿಸಿದವರಿಗೆ ಮೊದಲ ವಿತರಣೆ ಎನ್ನುವ ಆದ್ಯತೆಯ ಮೇರೆಗೆ ವಿತರಕರು ಸಿಲಿಂಡರ್‌ಗಳನ್ನು ವಿತರಣೆ ಮಾಡುವಂತೆ ಲಕ್ಷ್ಮಿ ಗ್ಯಾಸ್ ಏಜೆನ್ಸಿ ಅವರಿಗೆ ಸೂಚನೆ ನೀಡಿರುತ್ತೇನೆ. ಯಾವುದೇ ರೀತಿಯ ಗದ್ದಲ, ಗೊಂದಲಗಳಿಗೆ ಅವಕಾಶ ನೀಡಿದಂತೆ ವಿತರಣೆ ಮಾಡುವಂತೆ ಸ್ಪಷ್ಟವಾಗಿ ತಿಳಿಸಲಾಗಿದೆ ಎಂದು ಹೇಳಿದರು.

ದಿ ಮೈಸೂರ್ ಕಿರ್ಲೋಸ್ಕರ್ ಕಾರ್ಮಿಕರ ಸಹಕಾರಿ ಸಂಘದಿಂದ ಸಿಲಿಂಡರ್‌ಗಳ ವಿತರಣೆಯೂ ಸಹ ನಡೆಯುತ್ತಿದೆ. ಅಲ್ಲಿಯೂ ಬಹಳಷ್ಟು ಜನದಟ್ಟನೆ ಆಗುತ್ತಿದೆ. ಸಿಲೆಂಡರ್‌ನ ಲೋಡುಗಳು ಬಂದಾಗ ಅಲ್ಲಿಯೇ ಜನರು ವಿತರಣೆ ತೆಗೆದುಕೊಳ್ಳುತ್ತಿರುವ ಕಾರಣಕ್ಕಾಗಿ ಮನೆಮನೆಗೆ ಸರಬರಾಜು ಮಾಡಲು ಸ್ವಲ್ಪ ತಾತ್ಕಾಲಿಕ ಅಡೆತಡೆ ಉಂಟಾಗಿದೆ ಎಂದರು.

ಕಿರ್ಲೋಸ್ಕರ್ ಸೊಸೈಟಿ ಅಧ್ಯಕ್ಷ ಬಿರಾದಾರ್ ಮಾತನಾಡಿ, ಮಾ.8ರಿಂದ ಜನದಟ್ಟನೆ ಹೆಚ್ಚಾಗಿ ಕೃತಕ ಭಾವ ಸೃಷ್ಟಿಯಾಗಿದೆ. ಮೊದಲಿನಂತೆ ಪ್ರತಿದಿನ ಒಂದೊಂದು ಲೋಡು ಸಿಲಿಂಡರ್‌ಗಳು ಬರುತ್ತಿವೆ. ಆದರೆ ಗ್ರಾಹಕರ ಅಭಾವವಿದೆ ಎಂದುಕೊಂಡು ಭ್ರಮನೀರಸರಾಗಿ ಖರೀದಿಗೆ ಬರುತ್ತಿದ್ದಾರೆ ಎಂದರು.

ಜನರ ರಕ್ಷಣೆಯ ಕಾರಣಕ್ಕೆ ಮನೆ ಬಾಗಿಲಿಗೆ ಸರಬರಾಜು ಮಾಡುವ ಕೆಲಸದಲ್ಲಿ ಸ್ವಲ್ಪ ವೆಚ್ಚವಾಗಿದೆ. ಮುಂಬರುವ ದಿನಗಳಲ್ಲಿ ಅದನ್ನು ಸರಿಪಡಿಸಿಕೊಂಡು ಮನೆ ಬಾಗಿಲಿಗೆ ಸರಬರಾಜು ಮಾಡುವ ಕಾರ್ಯ ಮುಂದುವರಿಯಲಿದೆ. ಆದಾಗ ಶಾಲೆ ಮತ್ತು ಹಾಸ್ಟೆಲ್‌ಗಳಿಗೆ ಹೋಗಿ ಸರಬರಾಜು ಮಾಡಲಾಗುತ್ತಿದೆ. ಇದನ್ನು ನಿಲ್ಲಿಸಿರುವುದಿಲ್ಲ ಎಂದರು.

ಹಿಂದೂಗಳಿಗೆ ಯುಗಾದಿ ಹಬ್ಬ, ಮುಸ್ಲಿಮರಿಗೆ ರಂಜಾನ್ ಹಬ್ಬ ಒಟ್ಟಿಗೆ ಬಂದಿರುವ ಕಾರಣಕ್ಕೆ ಸ್ವಲ್ಪ ಒತ್ತಡ ಹೆಚ್ಚಾಗಿದೆ. ಆದರೆ ಯಾವುದೇ ರೀತಿಯ ಗೊಂದಲಗಳಿಲ್ಲ, ಗ್ರಾಹಕರು ತಾವೇ ತಾ ಮುಂದುತಾ ಮುಂದು ಎಂದು ಬಂದು ವಿತರಣೆಗೆ ತೊಂದರೆ ಕೊಡುತ್ತಿದ್ದಾರೆ. ಆದರೂ ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ನೀಡಿದಂತೆ ವಿತರಣೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಸಿಡಿಲು ಬಡಿದು ಹೊತ್ತಿ ಉರಿದ ತೆಂಗಿನ ಮರ ತಪ್ಪಿದ ಅನಾಹುತ



◆ **ರಿಪ್ಪನ್ ಪೇಟೆ:** ಪಟ್ಟಣ ದಲ್ಲಿ ಬುಧವಾರ ಸಂಜೆ ಸಂಭವಿಸಿದ ಭಾರಿ ಗಾಳಿ-ಮಳೆ ಸಹಿತ ಸಿಡಿಲಿನ ಪರಿಣಾಮವಾಗಿ ಶ್ರೀ ರಾಮನಗರದಲ್ಲಿರುವ ಶಿಕ್ಷಕ ಗುರುಮೂರ್ತಿ ಅವರ ಮನೆ ಹಿಂಭಾಗದ ಖಾಲಿ ನಿವೇಶನದಲ್ಲಿದ್ದ ತೆಂಗಿನ ಮರಕ್ಕೆ ಸಿಡಿಲು ಬಡಿದು ಅದು ಹೊತ್ತಿ ಉರಿದ ಘಟನೆ ನಡೆಯಿತು.

ಸ್ಥಳೀಯರ ಮಾಹಿತಿ ಪ್ರಕಾರ, ಮಳೆ ಆರಂಭವಾಗುತ್ತಿದ್ದಂತೆ ಗಾಳಿ ತೀವ್ರಗೊಂಡು, ಆಕಸ್ಮಿಕವಾಗಿ ಸಿಡಿಲು ಬಡಿದ ಪರಿಣಾಮ ತೆಂಗಿನ ಮರಕ್ಕೆ ಬೆಂಕಿ ಹೊತ್ತಿಕೊಂಡಿತು. ಕೆಲ ಹೊತ್ತಿನವರೆಗೆ ಮರ ಉರಿದರೂ, ನಂತರ ಮಳೆಯ ಕಾರಣದಿಂದಲೇ ಬೆಂಕಿ ತಾನೇ ನಂದಿತು ಎಂದು ತಿಳಿದುಬಂದಿದೆ. ಅದೃಷ್ಟವಶಾತ್ ಘಟನೆ ನಡೆದ ಸ್ಥಳ ಖಾಲಿ ನಿವೇಶನವಾಗಿದ್ದರಿಂದ ಯಾವುದೇ ಪ್ರಾಣಾಪಾಯ ಅಥವಾ ಆಸ್ತಿ ಹಾನಿ ಸಂಭವಿಸಿಲ್ಲ. ಸಮೀಪದ ಮನೆಗಳಿಗೂ ಯಾವುದೇ ಹಾನಿಯಾಗಿಲ್ಲವೆಂದುಸ್ಥಳೀಯರುತಿಳಿಸಿದ್ದಾರೆ.ಘಟನೆಬಳಿಕಸ್ಥಳೀಯರು ಆತಂಕಗೊಂಡರೂ, ದೊಡ್ಡ ಅನಾಹುತ ತಪ್ಪಿದ ಹಿನ್ನೆಲೆಯಲ್ಲಿ ನಿಟ್ಟುಸಿರು ಬಿಟ್ಟಿದ್ದಾರೆ

ಕೃಷಿ ಮತ್ತು ತೋಟಗಾರಿಕೆ ವಿವಿ ಆಶ್ರಯದಲ್ಲಿ

ಮಾರ್ಚ್ 23ರಿಂದ ರಾಷ್ಟ್ರೀಯ ಸಮ್ಮೇಳನ

◆ **ಶಿವಮೊಗ್ಗ:** ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಭಾರತೀಯ ಅಲಂಕಾರಿಕ ತೋಟಗಾರಿಕೆ ಸಂಘ, ಐಸಿಎಆರ್-ಐಎಆರ್‌ಐ ನವದೆಹಲಿ, ಐಸಿಎಆರ್ -ಪುಷ್ಪ ಕೃಷಿ ಸಂಶೋಧನಾ ನಿರ್ದೇಶನಾಲಯ ಪುಣೆ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ಐಸಿಎಆರ್- ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಬೆಂಗಳೂರು ಸಂಸ್ಥೆಗಳ ಸಹಯೋಗದೊಂದಿಗೆ ಮಾರ್ಚ್ 23ರಿಂದ 25ರವರೆಗೆ ಶಿವಮೊಗ್ಗದ ನವಿಲೆ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ ಮೂರು ದಿನಗಳ ಕಾಲ ವಿಕಸಿತ ಭಾರತ-2047ರ ಪುಷ್ಪ ಕೃಷಿ ಮತ್ತು ಭೂದೃಶ್ಯ ಕುರಿತ ರಾಷ್ಟ್ರೀಯ ಸಮ್ಮೇಳನ ನಡೆಸಲಾಗುತ್ತಿದೆ.

ಈ ಸಮ್ಮೇಳನವು ಭಾರತದಲ್ಲಿನ ಪುಷ್ಪ ಕೃಷಿ ಮತ್ತು ಭೂದೃಶ್ಯ ವಲಯವನ್ನು ಬಲಪಡಿಸಲು ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು, ನಾವೀನ್ಯತೆಗಳನ್ನು ಪರಸ್ಪರ ಹಂಚಿಕೊಳ್ಳಲು ಹಾಗೂ ಹೊಸ ತಂತ್ರಜ್ಞಾನಗಳನ್ನು ಅನ್ವೇಷಿಸಲು ಒಂದು ಪ್ರಮುಖ ವೇದಿಕೆಯಾಗಲಿದೆ. ಈ ವಿಶಿಷ್ಟ ವಲಯದಲ್ಲಿನ ಸಂಶೋಧನೆ, ತಂತ್ರಜ್ಞಾನಗಳ ಅಳವಡಿಕೆ ಹಾಗೂ ಸುಸ್ಥಿರ ಅಭಿವೃದ್ಧಿಯನ್ನು ಮುನ್ನಡೆಸುವತ್ತ ಗಮನಾರ್ಹವಾಗಿ ಕೊಡುಗೆ ನೀಡುವಲ್ಲಿ ಸಮ್ಮೇಳನ ಆಯೋಜಿಸಲಾಗಿದೆ.

ಸಮ್ಮೇಳನದಲ್ಲಿ ಎರಡು ಪುಸ್ತಕಗಳನ್ನು ಬಿಡುಗಡೆ ಗೊಳಿಸಲಾಗುತ್ತಿದೆ. ವಿಕಸಿತ ಭಾರತ 2047ರ ಪುಷ್ಪ ಕೃಷಿ ಮತ್ತು ಭೂ ವಿನ್ಯಾಸ್ಯ ಕುರಿತ ಸ್ಮರಣ ಸಂಚಿಕೆ ಹಾಗೂ ಜಿಯೋಗ್ರಾಫಿಕಲ್ ಇಂಡಿಕೇಶನ್ ಫ್ಲವರ್ಸ್ ಆಫ್ ಇಂಡಿಯಾ ಎಂಬ ಕೃತಿಗಳನ್ನು ಬಿಡುಗಡೆಗೊಳಿಸಲಾಗುತ್ತಿದೆ.

ಸಮ್ಮೇಳನದಲ್ಲಿ ವಿಶೇಷವಾಗಿ 6 ಮಂದಿ ವಿಜ್ಞಾನಿಗಳಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಮೂರು ಮಂದಿ ಪುಷ್ಪ ಕೃಷಿ ವಿಜ್ಞಾನಿಗಳಿಗೆ ಲೋಟಸ್ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ. ಸಣ್ಣ ರೈತ ವರ್ಗದ ಮೂರು ಮಂದಿ ಅತ್ಯುತ್ತಮ ಗುಲಾಬಿ ಬೆಳೆಗಾರರನ್ನು ಗುರುತಿಸಿ, ರೋಸ್ ಪುರಸ್ಕಾರ ಹಾಗೂ ದೊಡ್ಡ ಪ್ರಮಾಣದ ರೈತ ವರ್ಗದ ಮೂರು ಮಂದಿ ಅತ್ಯುತ್ತಮ ಗುಲಾಬಿ ಬೆಳೆಗಾರರು ಮತ್ತು ರಫ್ತುದಾರರಿಗೆ ರೋಸ್ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ.

ಭಾರತೀಯ ಅಲಂಕಾರಿಕ ತೋಟಗಾರಿಕೆ ಸಂಘದ ವತಿಯಿಂದ 5 ಮಂದಿ ಪುಷ್ಪ ಕೃಷಿ ವಿಜ್ಞಾನಿಗಳಿಗೆ ಫೆಲೋಷಿಪ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಇಬ್ಬರು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಡಾಕ್ಟೋರಲ್ ಸಂಶೋಧನಾ ಪ್ರಬಂಧಕ್ಕೆ ಅತ್ಯುತ್ತಮ ಸಂಶೋಧನಾ ಪ್ರಬಂಧ ಪ್ರಶಸ್ತಿ ಹಾಗೂ 4 ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಸಂಶೋಧನಾ ಪ್ರಬಂಧಕ್ಕೆ ಅತ್ಯುತ್ತಮ ಪ್ರಬಂಧ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಇಬ್ಬರಿಗೆ ಅತ್ಯುತ್ತಮ ಸಂಶೋಧನಾ ಪ್ರಬಂಧ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ಪುಷ್ಪ ಕೃಷಿ ಆಸಕ್ತರು ಭಾಗವಹಿಸಲು ಕೋರಿದೆ.

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.

ಸಂಖ್ಯೆ:ದಾವಿ:ಅಭಿ:355/2025–26/5459 ದಿನಾಂಕ: 16.03.2026

ಇ–ಟೆಂಡರ್ ಪ್ರಕಟಣೆ

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗಕ್ಕೆ VGST ಪ್ರಾಯೋಜಿತ ಯೋಜನೆಗೆ ಅಗತ್ಯವಿರುವ ವೈಜ್ಞಾನಿಕ ಉಪಕರಣಗಳನ್ನು ಖರೀದಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ 1999, ನಿಯಮಗಳು 2000ರ ಪ್ರಕಾರ E-Portal Tender ಮೂಲಕ ಆಹ್ವಾನಿಸಲಾಗಿದೆ.

Tender Name: Supply For Scientific Equipments For Department of Studies in Microbiology

Tender No: DU/2025-26/IND0036

ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 10.04.2026

ಹೆಚ್ಚಿನ ಮಾಹಿತಿಗಾಗಿ website:-www.kppp.karnataka.gov.in ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದೂ.ಸಂ:08192–208029 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದಾವಣಗೆರೆ

ವಾಸಾಇ/ದಾವಣಗೆರೆ/831/ಕೆಎಸ್‌ಎಂಸಿಎ/2025–26

ಸಹಿ/– ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

ನಗರಸಭಾ ಕಾರ್ಯಾಲಯ
ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.

Website: www.gowribidanurtown.gov.in
Email: ka.gouribidanur.cmc@gmail.com

ಸಂಖ್ಯೆ: ನಸಗೌ/ಆಶಾ/ಟೆಂಡರ್/ಸಿಆರ್–06/2025–26 ದಿನಾಂಕ: 13.03.2026

ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭಾ ನಿಧಿಯಲ್ಲಿ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಅನುಭವಿ ಸರ್ಕಾರೇತರ ಸಂಘ ಸಂಸ್ಥೆಗಳಿಂದ/ಕಂಪನಿಗಳಿಂದ/ ಏಜನ್ಸಿಗಳಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಈ ವೆಬ್‌ಸೈಟ್ **www.kppp.karnataka.gov.in** ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ **www.gouribidanurcity.gov.in** ನಲ್ಲಿ ಪರಿಶೀಲಿಸಬಹುದು. (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 30.03.2026ರ ಸಂಜೆ 5.00 ಗಂಟೆಯವರೆಗೆ** (2) ಟೆಂಡರ್ ತೆರೆಯುವ **ದಿನಾಂಕ: 01.04.2026ರ ಸಂಜೆ 5.15 ಗಂಟೆಗೆ.**

ಕ್ರ ಸಂ	ಕಾಮಗಾರಿ	ಅಂದಾಜು ಮೊತ್ತ (ಲಕ್ಷಗಳಲ್ಲಿ)
	ನಗರಸಭಾ ನಿಧಿ	
1	ಗೌರಿಬಿದನೂರು ನಗರಸಭೆಯ ಘನತ್ಯಾಜ್ಯ ನಿರ್ವಹಣೆ ಅಡಿಯಲ್ಲಿ ಖಾಯಂ ಹಾಗೂ ಹೊರ ಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೆ ಬೆಳಗಿನ ಉಪಹಾರ ಸರಬರಾಜು ಮಾಡುವುದು	12.70

ಸಹಿ/– ಪೌರಾಯುಕ್ತರು, ನಗರಸಭೆ, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:491/ಕೆ.ಎಸ್.ಎಂ.ಸಿ.ಎ/2025–26

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ, ಗಜೇಂದ್ರಗಡ

ಕ್ರಸಂ:ಪುಸಗ/ಕಾವಿ/15ನೇ ಹಣಕಾಸು/ಉಳಿಕೆ ಮೊತ್ತ/ವಹಿ/ವಿ.ಅ/2025–26 ದಿನಾಂಕ:17–03–2026

(ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಇ–ಪ್ರೋಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಗಜೇಂದ್ರಗಡ ಪುರಸಭೆಗೆ ಸರ್ಕಾರದಿಂದ ಬಿಡುಗಡೆಯಾದ ಸನ್–2023–24 ಮತ್ತು 2024–25ನೇ ಸಾಲಿನ 15ನೇ ಹಣಕಾಸು ಯೋಜನೆಯ ಉಳಿಕೆ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ **1) DMA/2025-26/BR/WORK_INDENT56546, ರೂ. 9.33 ಲಕ್ಷ, 2) DMA/2025-26/BR/WORK_INDENT56543 ರೂ.14.15ಲಕ್ಷ,** ಒಟ್ಟು 02 ಕಾಮಗಾರಿಗಳ ಮೊತ್ತ **ರೂ. 23.48 ಲಕ್ಷಗಳ** ಕಾಮಗಾರಿಗಳ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯೂ–1 ದಸ್ತಾವೇಜ್‌ನಲ್ಲಿ ಇ–ಪ್ರೊಕ್ಯೂರವೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ದಾಖಲೆಗಳಿಗಾಗಿ **http://eproc.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು.

1. ಇ–ಪ್ರ್ಯೋಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 25–03–2026 ಸಾಯಂಕಾಲ 4:30 ಗಂಟೆಯ** ವರೆಗೆ
2. ಟೆಂಡರ್‌ನ್ನು ತೆರೆಯುವ ದಿನಾಂಕ: **26–03–2026ರಂದು ಸಮಯ ಸಂಜೆ 4:30.00 ಗಂಟೆಗೆ.**

ನಿಗದಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್. **http://eproc.karnataka.gov.in** ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/–ಮುಖ್ಯಾಧಿಕಾರಿ ಪುರಸಭೆ ಗಜೇಂದ್ರಗಡ

ಸಹಿ/–ಆಡಳಿತಾಧಿಕಾರಿ ಪುರಸಭೆ ಗಜೇಂದ್ರಗಡ

ವಾ.ಸಾ.ಇ/ಗದಗ/718/ದೇಶಪಾಂಡೆಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕೊಪ್ಪ ವಿಭಾಗ, ಕೊಪ್ಪ

E.mail:koppaacf@gmail.com

ಸಂಖ್ಯೆ: ಸ.ಅ.ಸಂ:ಕೊಪ್ಪ:ಟೆಂಡರ್:18/2025–26 ದಿನಾಂಕ:13–03–2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2026–27 ನೇ ಸಾಲಿನಲ್ಲಿ ಕೊಪ್ಪ ಅರಣ್ಯ ವಿಭಾಗದ. ಚಿಕ್ಕಗ್ರಹಾರ ವಲಯ ವ್ಯಾಪ್ತಿಯ ಸಾರ್ಯದಿಂದ ಕರ್ಕೂಟ ಪ್ರದೇಶದಲ್ಲಿ ವನ್ಯಪ್ರಾಣಿಗಳ ಹಾವಳಿಯನ್ನು ನಿಯಂತ್ರಿಸುವ ಸಂಬಂಧ 2.810 ಕಿ.ಮೀ ರೈಲ್ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಗಳ ಬಾಬ್ತು **ದಿನಾಂಕ:18–04–2026** ರಂದು ಇ–ಟೆಂಡರ್ ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿರುವ ಕಾಮಗಾರಿಯ ಅಂದಾಜು ಮೊತ್ತ 3,99,03,111/– (ಜಿ.ಎಸ್‌ಟಿ ಹೊರತುಪಡಿಸಿ) ಆಗಿರುತ್ತದೆ. ಈ ಕಛೇರಿಯ ದಿನಾಂಕ:13–03–2026ರ ಟೆಂಡರ್ ಅಧಿಸೂಚನೆಯಲ್ಲಿರುವ ಎಲ್ಲಾ ಷರತ್ತುಗಳಿಗೆ ಒಳಪಟ್ಟು ಇ–ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ಪೋರ್ಟಲ್ ನಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕೊಪ್ಪ ವಿಭಾಗ, ಕೊಪ್ಪ

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)

ಇ–ಮೇಲ್: **midhly@yahoo.co.in** ಫೋ.ನಂ: 08284–220113

ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/4702/2025–26/2614 ದಿನಾಂಕ: 16/03/2026

ಅಲ್ಪಾವಧಿ ಟೆಂಡರ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಕೆ.ಡಬ್ಲ್ಯೂ–1,2 & 4

ಕರ್ನಾಟಕ ಲೋಕೋಪಯೊಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ **KW-1, 2 & 4** (ದ್ವಿ–ಲಕೋಟೆ) ಪದ್ಧತಿಯಲ್ಲಿ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ" ಮುಖಾಂತರ ಟೆಂಡರ ಕರೆಯಲಾಗಿದೆ.

(1) ಇಂಟೆಂಡ್ ನಂ: 11492 (ಎಸ್.ಟಿ) (2) ಇಂಟೆಂಡ್ ನಂ: 11493 (ಎಸ್.ಸಿ) (3) ಇಂಟೆಂಡ್ ನಂ:10549 2ನೇ ಕರೆ **(CAT-I)** (4) ಇಂಟೆಂಡ್ ನಂ: 11475 (ಸಾಮಾನ್ಯ) (5) ಇಂಟೆಂಡ್ ನಂ:11476 **(CAT-II A)** (6) ಇಂಟೆಂಡ್ ನಂ: 11012 (ಸಾಮಾನ್ಯ) (7) ಇಂಟೆಂಡ್ ನಂ: 11013 (ಸಾಮಾನ್ಯ) (8) ಇಂಟೆಂಡ್ ನಂ: 11014 (ಸಾಮಾನ್ಯ)

ಖಾಲಿ ಟೆಂಡರ ಫಾರಂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ವೆಬಸೈಟ್ ವಿಳಾಸ: **"https://kppp.karnataka.gov.in"** ದಲ್ಲಿ ದಿನಾಂಕ: 18–03–2026 ರ ನಂತರ ದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ದಿನಾಂಕ: 25–03–2026 ರೊಳಗಾಗಿ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕಚೇರಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ: 26–03–2026 ರ ಸಾಯಂಕಾಲ 05.15 ಗಂಟೆಯವೆರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 27–03–2026 ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಟ ಅರ್ಹತಾ ಮಾನದಂಡಗಳನ್ನು ಕೆ.ಡಬ್ಲ್ಯೂ–1,2&4 ಬಿಡ್ ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–, (ಎಂ. ನಾಗರಾಜ)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ)

DIPR/KWR/KSMCA/1218/25-26 Dt.18.03.2026

ಜಿಲ್ಲಾ ಪಂಚಾಯತ್ ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ–563101. ದೂರವಾಣಿ ಸಂಖ್ಯೆ: 08152–222570, ಇ–ಮೇಲ್ ವಿಳಾಸ: eepredkolar1@gmail.com

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸರಬರಾಜು ಟೆಂಡರ್ ಪ್ರಕಟಣೆ ಸಂಖ್ಯೆ: SG05/25-26 ದಿನಾಂಕ:17.03.2026.

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KG-1 ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆ.ಪಿ.ಪಿ.ಪಿ ದ್ವಿ–ಲಕೋಟೆ ಪದ್ಧತಿಯಲ್ಲಿ (Two Cover System) ಸೂಕ್ತ ದರ್ಜೆಯಲ್ಲಿ, ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಸರಬರಾಜುದಾರರಿಂದ ಕೋಲಾರ ಜಿಲ್ಲೆ ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲ್ಲೂಕಿಗೆ ಸಂಬಂಧಪಟ್ಟಂತೆ **ರೂ 5.94 ಲಕ್ಷಗಳಿಂದ 11.72 ಲಕ್ಷಗಳವರೆಗೆ 09 ಸಂಖ್ಯೆ** ನಿರ್ಮಾಣ ಕಾಮಗಾರಿಗೆ ಸಾಮಾಗ್ರಿ ಪೂರೈಕೆ ಮಾಡಲು ಸರಬರಾಜು ಟೆಂಡರುಗಳನ್ನು ಆಹ್ವಾನಿಸುತ್ತಿದ್ದು, ಇ.ಎಂ.ಡಿ. ಮತ್ತು ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ ಮುಂತಾದ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **https://kppp.karnataka.gov.in** ಮುಖಾಂತರ ಪಡೆದು ಟೆಂಡರಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಕೆ.ಪಿ.ಪಿ.ಪೋರ್ಟಾಲ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಆರೋಹಿಸಿ ಸಲ್ಲಿಸಲು ಕೊನೆಯ **ದಿನಾಂಕ: 24.03.2026 ರ ಸಂಜೆ 4.00 ಗಂಟೆವರೆಗೆ** (2) ಟೆಂಡರಗಳನ್ನು ಕೆ.ಪಿ.ಪಿ.ಪೋರ್ಟಾಲ್‌ನಲ್ಲಿ ತೆರೆಯುವ **ದಿನಾಂಕ: 25.03.2026 ರಂದು ಸಂಜೆ 4.30 ಗಂಟೆಗೆಂದು** ನಿಗದಿ ಪಡಿಸಲಾಗಿದೆ. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆಪಿಪಿಪಿ ಸಹಾಯವಾಣಿ ದೂರವಾಣಿ ಸಂಖ್ಯೆ: 91 8046010000 & +91 8022631200, 080–22230960 & 22234115. ಅನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:543/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂಹಾ/ಪಿಬಿ/ಗುತ್ತಿಗೆ/4059–ಎಸ್‌ಸಿಪಿ–ಟಿಎಸ್‌ಪಿ–3054–2059/2025–26/5649/ ದಿನಾಂಕ : 17–03–2026

ಇ–ಟೆಂಡರ್ ಪ್ರಕಟಣೆ

ದಿನಾಂಕ: 17–03–2026ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 34330, 34324, 34314, 34313, 34840, 34485, 34490, 34361, 34853, 33686, 34001, 34804, 34805, ಕ್ರಸಂ.14, 34315, 34909, 34501, 34358, 34577, 34587, 34404, 34002, 34807, 34000 ಮತ್ತು 34475ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **25–03–2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/– (ಎನ್.ಎನ್.ಪಾಟೀಲ) ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/821/2025–26

ದಾಖಲೆ ಪತ್ರ ಕಳೆದಿದೆ

ಹೆಚ್.ತುಳಸಿರಾಮ್‌ಪ್ರಸಾದ್, ವಾಸ: 4ನೇಕ್ರಾಸ್, ಗಾಂಧಿಬಜಾರ್,ಶಿವಮೊಗ್ಗ ಆದ ನಾನು ಈ ಮೂಲಕ ತಿಳಿಸುವುದೇನೆಂದರೆ, ಸ್ವತ್ತಿನ ವಿಭಾಗ ತೃತೀಯ ಪತ್ರದ ಸಂಖ್ಯೆ:5572/2000-01 1ನೇ ಬುಕ್ಕಿನ 2773ನೇ ಸಂಪುಟದ ಪುಟ ಸಂಖ್ಯೆ 42–48ನೇ ಪುಟಗಳ ದಾಖಲೆ ಪತ್ರ (ನೋಂದಣಿ ದಿನಾಂಕ:18–12–2000) ದಿನಾಂಕ:12–03–2026 ರಂದು ಕಳೆದು ಹೋಗಿರುತ್ತದೆ.ಆದ್ದರಿಂದ ದಿನಾಂಕ:17–03–2026 ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದು (E Lost Report No:2113385/2026) ಈ ಪತ್ರವು ಯಾರಿಗಾದರೂ ಸಿಕ್ಕಲ್ಲಿ ದಯಮಾಡಿ ನನ್ನ ಮೇಲ್ಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.

ಹೆಚ್.ತುಳಸಿರಾಮ್‌ಪ್ರಸಾದ್,
4ನೇ ಕ್ರಾಸ್,ಗಾಂಧಿಬಜಾರ್,ಶಿವಮೊಗ್ಗ
ಮೊ: 9008916117

ಪ್ರಮಾಣ ಪತ್ರಕಳೆದಿದೆ

ಕೆಂಚಮ್ಮ ಎಂ. ಕೋಂ ದಿ|| ಎಂ.ಚಂದ್ರಪ್ಪ, ವಯಸ್ಸು 62 ವರ್ಷ, ವಾಸ: ಅಬ್ಬಲಗೆರೆ ಗ್ರಾಮ ಮತ್ತು ಅಂಚೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ವಾಸಿ, ಆದ ನಾನು ಈ ಮೂಲಕ ಪ್ರಮಾಣೀಕರಿಸಿ ಹೇಳುವುದೇನೆಂದರೆ, ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ಶಿವಮೊಗ್ಗ ನಗರದ, ಮಹಾನಗರ ಪಾಲಿಕೆಯ 35ನೇ ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ತಾಲ್ಲೂಕು, ಕಸಬಾ 2ನೇ ಹೋಬಳಿ, ಕಾಶಿಪುರ ಗ್ರಾಮದ ಸರ್ವೆ ನಂ.51/4 ರಲ್ಲಿರುವ 0.01.13.00 ಗುಂಟೆ ವಿಸ್ತೀರ್ಣದ ಸ್ವತ್ತನ್ನು ನಾನು ಈ ಹಿಂದೆ ಶ್ರೀಮತಿ ಶಶಿಕಲಾ ಕೋಂ ದಿ|| ರಾಮು ಹಾಗೂ ಅವರು ಮಕ್ಕಳುಗಳಿಂದ ನೋಂದಾಯಿತ ಕ್ರಯ ಪತ್ರದ ಮೂಲಕ ಪಡೆದಿದ್ದು ಸದರಿ ಕ್ರಯ ಪತ್ರವು ಎಸ್.ಎಂ. ಜಿ–1–6462/2019–20 ಆಗಿ ದಿನಾಂಕ:16–09–2019 ರಂದು ಶಿವಮೊಗ್ಗ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ. ನನಗೆ ಈ ಕ್ರಯಕ್ಕೆ ಕೊಟ್ಟ ಸ್ವತ್ತನ್ನು ಶ್ರೀಮತಿ ಶಶಿಕಲಾರವರ ಗಂಡ ಶ್ರೀರಾಮು ಬಿನ್ ದಿ|| ಡಿ. ನಾಗರಾಜ್ ರವರು ನೋಂದಾಯಿತ ಕ್ರಯಪತ್ರದ ಮೂಲಕ ಶ್ರೀಲೋಕೇಶಪ್ಪ ಬಿನ್ ದಿ|| ಪೂಜಾರಿ ಕರಿಯಪ್ಪ ಹಾಗೂ ಇತರರಿಂದ ಕ್ರಯ ಪಡೆದಿದ್ದು, ಸದರಿ ಕ್ರಯ ಪತ್ರದ ಎಸ್.ಆರ್. ನಂ.4208/2003–04 ಆಗಿ ದಿನಾಂಕ:21–02–2004 ರಂದು ನೋಂದಣಿಯಾದ ಕ್ರಯ ಪತ್ರದ ಮೂಲಕ ಪಡೆದಿದ್ದು, ಸದರಿ ಅಸಲು ಕ್ರಯ ಪತ್ರವನ್ನು ನನಗೆ ಕ್ರಯಕ್ಕೆ ಕೊಟ್ಟ ಶ್ರೀಮತಿ ಶಶಿಕಲಾ ಇವರು ಕೊಟ್ಟಿರುವುದಿಲ್ಲ ಹಾಗೂ ಈಗ ಅವರುಗಳ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ನಾನು ಸದರಿ ಕ್ರಯದ ಪತ್ರದ ಆಧಾರದ ಮೇಲೆ ಯಾವುದೇ ಬ್ಯಾಂಕ್ ಸಂಸ್ಥೆಗಳಲ್ಲಿ ಸಾಲ ಪಡೆದುಕೊಂಡಿರುವುದಿಲ್ಲ ಹಾಗೂ ಅದನ್ನು ಯಾವುದೇ ನ್ಯಾಯಾಲಯದಲ್ಲಿ ವ್ಯಾಜ್ಯದ ಸಂಬಂಧ ಹಾಜರುಪಡಿಸಿರುವುದಿಲ್ಲ ಮತ್ತು ಎಲ್ಲಿಯೂ ಅಡಮಾನ ವಗೈರೆ ಮಾಡಿರುವುದಿಲ್ಲ, ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸದರಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆ/ ಕಛೇರಿಗೆ ಸಲ್ಲಿಸಿ, ಸದರಿ ಕ್ರಯ ಪತ್ರವು ಕಳೆದು ಹೋಗಿರುವ ಬಗ್ಗೆ ಸಾರ್ವಜನಿಕ ಪತ್ರಿಕಾ ಪ್ರಕಟಣೆಯಲ್ಲಿ ಪ್ರಚಾರ ಮಾಡಿಸುವ ಸಲುವಾಗಿ ಈ ಪತ್ರ ಮಾಡಿಸಿರುತ್ತೇನೆ. ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯ ವಾಗಿರುತ್ತದೆ.

ಸ್ಥಳ: ಶಿವಮೊಗ್ಗ
ದಿನಾಂಕ:17–03–2026

ಪ್ರಮಾಣ ಕರ್ತೆ
ಕೆಂಚಮ್ಮ

ಸಾರ್ವಜನಿಕ ಪ್ರಕಟಣೆ

ಸಹ್ಯಾದ್ರಿ ವಿವಿದೋದ್ದೇಶ ಅಡಿಕೆ ಬೆಳೆಗಾರರ ಮಾರಾಟ ಸಹಕಾರ ಸಂಘ ನಿಯಮಿತ, ತೀರ್ಥಹಳ್ಳಿ, ಇದರ ಪರವಾಗಿ ಇದರ ವ್ಯವಸ್ಥಾಪಕ ನಿರ್ದೇಶಕರು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಸಂಸ್ಥೆಗೆ ಸೇರಿದ ತೀರ್ಥಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ವಾರ್ಡ್–13, ಬಾಳೇಬೈಲು, ತೀರ್ಥಹಳ್ಳಿ, ಇಲ್ಲಿರುವ ಇ–ಆಸ್ತಿ ಸಂಖ್ಯೆ:22–1–194/1. ಅಸೆಸ್ಮೆಂಟ್ ರಿಜಿಸ್ಟರ್ ನಂ.1678/1/3057/1/3373/1ರಂತೆ ಖಾತೆ ದಾಖಲು ಕಂಡಿರುವ ಪೂರ್ವ–ಪಶ್ಚಿಮ 11 ಮೀಟರ್. ಉತ್ತರ–ದಕ್ಷಿಣ 28.4 ಮೀಟರ್. ಒಟ್ಟು 312.4 ಚದರಮೀಟರ್ ವಿಸ್ತೀರ್ಣದಲ್ಲಿರುವ ನಿವೇಶನ ಮತ್ತು ಇದರಲ್ಲಿ 260.592915 ಚದರ ಮೀಟರ್ ವಿಸ್ತೀರ್ಣದಲ್ಲಿರುವ ಎ.ಸಿ.ಶೀಟಿನ ಕಟ್ಟಡದ ಸ್ವತ್ತಿನ ಬಾಬ್ತು ಸ್ವತ್ತಿನ ಪೂರ್ವ ಮಾಲೀಕರಾದ ಪಿ.ಚಂದ್ರಶೇಖರ ಶೆಟ್ಟಿ ಬಿನ್ ದಿ|| ಚೀಂಪ ಶೆಟ್ಟಿ, ಬಾಳೇಬೈಲು, ತೀರ್ಥಹಳ್ಳಿ ಇವರು ತಮ್ಮ ಖಾಸಾ ಮಗನಾದ ಪಿ.ಸತೀಶ್ ಶೆಟ್ಟಿ ಬಿನ್ ಪಿ.ಚಂದ್ರಶೇಖರ ಶೆಟ್ಟಿ, ಬಾಳೇಬೈಲು, ತೀರ್ಥಹಳ್ಳಿ, ಇವರಿಗೆ ಬರೆಯಿಸಿಕೊಟ್ಟ ತೀರ್ಥಹಳ್ಳಿ ಉಪನೋಂದಣಾಧಿಕಾರಿ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ ಟಿಟಿಹೆಚ್–1–00903–2013–14ಆಗಿ ಸಿಡಿ.ನಂಬರ್ ಟಿಟಿಹೆಚ್‌ಡಿ 43ನೇದ್ದ ರಲ್ಲಿ ದಿನಾಂಕ:15/10/2013ರಂದು ನೋಂದಣಿಯಾದ ಮೂಲ ದಾನಪತ್ರವನ್ನು ಲ್ಯಾಮಿನೇಷನ್ ಮಾಡಿಸಿದ್ದು, ಸದರಿ ಸ್ವತ್ತನ್ನು ಪಿ.ಸಿ.ಸತೀಶ್ ಶೆಟ್ಟಿ ಇವರ ವಾರಸುದಾರರಿಂದ ನಮ್ಮ ಸಂಸ್ಥೆ ಖರೀದಿಸಿದಾದ ಅದನ್ನೇ ನಮಗೆ ಹಸ್ತಾಂತರಿಸಿರುತ್ತಾರೆ. ಸದರಿ ಮೂಲ ದಾಖಲೆಯನ್ನು ಸುರಕ್ಷಿತವಾಗಿ ಇಡುವ ಸದುದ್ದೇಶದಿಂದ ಈ ರೀತಿ ಲ್ಯಾಮಿನೇಷನ್ ಮಾಡಿಸಿರುವುದಾಗಿ ನಮಗೆ ತಿಳಿಸಿರುತ್ತಾರೆ.ನಾವು ಸದರಿ ಸ್ವತ್ತನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ವಗೈರೆಗಳಲ್ಲಿ ಹಣಕಾಸು ನೆರವು ಪಡೆಯುವುದು, ವ್ಯವಹಾರ, ಇತರೆ ಪತ್ರ ವ್ಯವಹಾರ ನಡೆಸಲು ಉದ್ದೇಶಿಸಿರುತ್ತೇವೆ. ಲ್ಯಾಮಿನೇಷನ್ ಮಾಡಿಸಿರುವ ದಾನಪತ್ರವೇ ಮೂಲ ದಾನಪತ್ರವಾಗಿರುತ್ತದೆ. ಸದರಿ ಲ್ಯಾಮಿನೇಷನ್ ಮಾಡಿಸಿರುವ ದಾನಪತ್ರವೇ ಮೂಲ ದಾನಪತ್ರವಾಗಿರುವುದನ್ನು ಸಾರ್ವಜನಿಕವಾಗಿ ದೃಢೀಕರಿಸುವ ಸಲುವಾಗಿ ಸಾರ್ವಜನಿಕ ಪ್ರಕಟಣೆ ನೀಡಿರುತ್ತೇವೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಸಹ್ಯಾದ್ರಿ ವಿವಿದೋದ್ದೇಶ ಅಡಿಕೆ ಬೆಳೆಗಾರರ ಮಾರಾಟ ಸಹಕಾರ ಸಂಘ ನಿಯಮಿತ,
ತೀರ್ಥಹಳ್ಳಿ,

ಕರ್ನಾಟಕ ಸರ್ಕಾರ

ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ಚಿಕ್ಕಮಗಳೂರು

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ರಿ), ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ಚಿಕ್ಕಮಗಳೂರು ಇಲ್ಲಿಗೆ ಪ್ರಯೋಗ ಶಾಲಾ ರಾಸಾಯನಿಕ ಮತ್ತು ಸಾಮಗ್ರಿ ಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಇ–ಟೆಂಡರನ್ನು ಕರೆಯಲಾಗಿದೆ.

ಕ್ರ.ಸಂ.	ವಿವರ	ದಿನಾಂಕ
1	ಇ–ಟೆಂಡರ್ ಪ್ರಕಟಿಸುವ ದಿನಾಂಕ	17–03–2026
2	ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	25–03–2026
3	ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	26–03–2026
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	27–03–2026
5	ಟೆಂಡರ್ ತೆರೆಯುವ ಸ್ಥಳ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು
6	ಅಂದಾಜು ಮೊತ್ತ	15,00,000/–

ಸಹಿ/– ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು
ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ಕಛೇರಿ,
ಚಿಕ್ಕಮಗಳೂರು

ದಾಖಲೆ ಪತ್ರ ಕಳೆದಿವೆ

ಹಾವೇರಿ ಜಿಲ್ಲೆ ರಟ್ಟೆಹಳ್ಳಿ ತಾ, ರಟ್ಟೆಹಳ್ಳಿ ವ್ಯಾಪ್ತಿಯ ಅರುಣ್ ಮೇಗಳಗೇರಿ ಇವರಿಗೆ ಸಂಬಂಧಿಸಿದ ವಿಭಾಗ ಪತ್ರದ ಸಂಖ್ಯೆ: HRK-1-04931-2023-24 ಈ ಪತ್ರವು ದಿನಾಂಕ:17–03–2026 ರಂದು ಕಳೆದು ಹೋಗಿದ್ದು, ಇದಕ್ಕೆ ಸಂಬಂಧಿಸಿದಂತೆ ರಟ್ಟೆಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದ್ದು,ಇದರ FIR.No:2113809/2026 Dated:17-03-2026 ಆಗಿರುತ್ತದೆ. ಈ ವಿಭಾಗ ಪತ್ರವು ಯಾರಿಗಾದರೂ ಸಿಕ್ಕಲ್ಲಿ ಸ್ಥಳೀಯ ಪೊಲೀಸ್ ಠಾಣೆ ಅಥವಾ ಕೆಳಕಂಡ ನಂಬರ್‌ಗೆ ತಲುಪಿಸಬೇಕಾಗಿ ವಿನಂತಿ.

ಅರುಣ್ ಮೇಗಳಗೇರಿ
ಮೊ: 8310482346

DOCUMENT LOST

I Arun megalageri resident of Rattihalli (T), Haveri (D) Here by declare that I have lost my Partition deed bearing No-HRK-1-04931-2023-24 on Dated:17-03-2026 at Rattihalli and Registered complaint at police station (E Lost No-2113809/2026)If some one finds above mentioned kindly contact below.

Arun Megalageri
mob:8310482346

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)
ಸಹಕಾರ ಸಂಘಗಳ ಉಪ ನಿಬಂಧಕರು(ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು #62,2ನೇ ಮಹಡಿ, ಮಾರ್ಗೋಸಾರಸ್ತೆ,(3ನೇ ಮುಖ್ಯ),18ನೇ ಕ್ರಾಸ್, ಪೈಪಲೈನ್, ಮಲ್ಲೇಶ್ವರಂ,ಬೆಂಗಳೂರು –560055

ವಾದಿ: ಮುಖ್ಯಕಾರ್ಯನಿರ್ವಾಹಕರು: M/s Krishik Souharda Sahakari Niyamitha, Office at U B S Building, Market Road, Sagar-577401.

ಪ್ರತಿವಾದಿ: ವ್ಯಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/1404/2025–26
2.Sri.Deepak S S/o Shamanna,Aged about39years, R/at Jigalemane Village, Ullur,Sagar:- 577412, Ph.no – 7022644819.

ವ್ಯಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/1405/2025–26:
2.Sri. Mohammed Shakeel Ahamed K S/o Khazi Mohammed Shakerel Ahamed, Aged about 51 years, R/at No. 64. 1st Cross, JP Nagar, Guthyappa Colony, Near Masjid Kanakeri, Soraba-577429, Phone No-8310114051.

ವ್ಯಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/1407/2025–26
1) Smt. Sarojamma W/o Late M D Basavaraj, Aged about 60 years R/at #348/9, 1st Ward, Raghavendra Badavane, Kanakeri, Soraba-577429, Phone No-8197472140. **2)** Smt. Jayamma W/o Late Shankar, Aged about 54 years, R/at Raghavendra Badavane, Kanakeri, Soraba-577429, Phone No-8197048718. **3)**Sri. Anil Kumar S/o M D Basavaraj, Aged about 40 years R/at Raghavendra Badavane, Kanakeri, Soraba– 577429, Phone No-9632969167.

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್

ಈ ಮೇಲ್ಕಂಡ ಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ:ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/ **1404/2025–26,1405/2025–26,1407/2025–26**,ರಂತೆ ಸಹಕಾರ ಸಂಘಗಳ ಉಪನಿಬಂಧಕರು(ನಿ.441),ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ **ದಿನಾಂಕ:23/03/2026 ರಂದು ಬೆಳಗ್ಗೆ 11.30 ಗಂಟೆಗೆ** ಸರಿಯಾಗಿ ತಾವಾಗಲೀ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರ ವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದ್ದಲ್ಲಿ ನಿಮ್ಮಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ:11/03/2026 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

(ಸಹಿ/–) ಸಹಕಾರ ಸಂಘಗಳ ಉಪನಿಬಂಧಕರು (ನಿ.441).
ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು,
(ನ್ಯಾಯಾಲಯದಆದೇಶದ ಮೇರೆಗೆ)

ಘನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಕಡೂರು
ಎಸ್.ಸಿ.ಸಂ : 04/2023

ವಾದಿ : ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕಡೂರು

ವಿರುದ್ಧ

ಪ್ರತಿವಾದಿಗಳು : ಶ್ರೀನಿವಾಸ ನಾಯ್ಕ ಮತ್ತು ಇತರರು.
ಪ್ರತಿವಾದಿ ನಂ 1 : ಶ್ರೀನಿವಾಸ ನಾಯ್ಕ ಬಿನ್ ಹನುಮಂತನಾಯ್ಕ, 55 ವರ್ಷ.
ಪ್ರತಿವಾದಿ ನಂ 2 : ವಿನಾಯಕ ಕೆ.ಎಸ್. ಬಿನ್ ಶ್ರೀನಿವಾಸನಾಯ್ಕ, 30 ವರ್ಷ, ವಯಸ್ಸು, ಇಬ್ಬರ ವಾಸ: ಕೇದಿಗೆರೆ ಗ್ರಾಮ, ಹಿರೇನಲ್ಲೂರು ಹೋಬಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ವಾದಿಯು ಘನ ನ್ಯಾಯಾಲಯದಲ್ಲಿ ಮೇಲ್ಕಂಡ ದಾವೆಯನ್ನು ನಿಮ್ಮಗಳ ವಿರುದ್ಧ ಹಣ ವಸೂಲಿಗಾಗಿ ಸಲ್ಲಿಸಿ, ಸದರಿ ದಾವೆಯಲ್ಲಿ ನೀವು ಪ್ರತಿವಾದಿ ನಂ.1 ಮತ್ತು 2ನೇಯವರಾಗಿರುತ್ತೀರಿ. ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಲು ಆದೇಶವಾಗಿದ್ದು, ಸಮನ್ಸ್ ಜಾರಿ ಮಾಡಿದ್ದರೂ ಸಹ ಸಮನ್ಸ್ ತೆಗೆದುಕೊಳ್ಳಲು ವಿಳೀ ಮಾಡುತ್ತಿರುವ ಕಾರಣ ಸಾರ್ವಜನಿಕ ಪ್ರಕಟಣೆಯ ಸಲುವಾಗಿ ವಾದಿಯು ಘನ ನ್ಯಾಯಾಲಯಕ್ಕೆ ಈ ಪ್ರಕಟಣೆಯನ್ನು ಸಾರ್ವಜನಿಕವಾಗಿ ಹೊರಡಿಸಿರುವಂತೆ ಆದೇಶ ಮಾಡುವ ಸಲುವಾಗಿ ಈ ದಿನ ಪ್ರಕಟಣೆ ಹೊರಡಿಸುವಂತೆ ನ್ಯಾಯಾಲಯಕ್ಕೆ ಕೋರಿದ್ದು, ಅದರಂತೆ ಘನ ನ್ಯಾಯಾಲಯವು ಸಾರ್ವಜನಿಕ ಪ್ರಕಟಣೆಯ ಸಲುವಾಗಿ ಆದೇಶ ಮಾಡುವುದು ಮೇಲೆ ಹೇಳಿದ ದಾವೆಯು **ದಿನಾಂಕ: 28–04–2026** ರಂದು ಮುದ್ದತ್ತು ಇದ್ದು, ಆ ದಿನ ಪ್ರತಿವಾದಿಗಳಾಗಲೀ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲೀ ಮೇಲ್ಕಂಡ ದಾವೆಯಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು ಒಂದು ವೇಳೆ ಯಾರು ತಕರಾರು ಸಲ್ಲಿಸದಿದ್ದ ಪಕ್ಷದಲ್ಲಿ ಘನ ನ್ಯಾಯಾಲಯವು ಪ್ರತಿವಾದಿಗಳ ಪರವಾಗಿ ಏಕಪಕ್ಷೀಯವಾಗಿ ನಿರ್ಣಯವು ಕೈಗೊಳ್ಳಲಾಗುವುದು ಎಂದು ಈ ಮೂಲಕ ಆದೇಶಿಸಲಾಗಿದೆ. ಕರಡು ಪತ್ರಿಕಾ ಪ್ರಕಟಣೆಯನ್ನು ಅನುಮೋದಿಸಿದೆ

ದಿನಾಂಕ: 11.03. 2026

ಅರ್ಜಿದಾರರ ಪರ ವಕೀಲರು
ಕೆ.ಅಶೋಕ್,
ವಕೀಲರು,
ಕಡೂರು

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೇದಾರರು,
ಹಿರಿಯ ಸಿವಿಲ್ ನ್ಯಾಯಾಧೀಶರು,
ಕಡೂರು

ಮಾನ್ಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಎಂ.ಎ.ಸಿ.ಟಿ.ಶಿವಮೊಗ್ಗ
ಎಂ.ವಿ.ಸಿ .ಸಂಖ್ಯೆ : 294/2024

ಅರ್ಜಿದಾರರು: ಮೋಹನ ಡಿ. ಬಿನ್ ದೇವೇಂದ್ರಪ್ಪ, ವಯಸ್ಸು ಸುಮಾರು 36 ವರ್ಷ, ವಾಸ:ಆರ್.ಎಂ.ಸಿ.ರಸ್ತೆ, ವಿನೋಬನಗರ. ಶಿವಮೊಗ್ಗ.

ವಿರುದ್ಧ

ಎದುರುದಾರರು :ಬ್ಯಾಂಚ್ ಮ್ಯಾನೇಜರ್ ನ್ಯಾಷನಲ್ ಇನ್ಸುರೆನ್ಸ್ ಕಂಪನಿ ಮತ್ತು ಇತರರು.
ಎದುರುದಾರರು ನಂ 3: ಮೆಹಬೂಬ್ ಪಿ. ಬಿನ್ ಪಾಚಮಿಯ, ವಯಸ್ಸು ಸುಮಾರು 65 ವರ್ಷ, ವಾಸ: ಅಂಜುಮಾನ್ ಜೋಳ ಗುಡ್ಡದ ಹಿಂಭಾಗ, ಚಿತ್ರದುರ್ಗ.

ಪ್ರಕಟಣೆ

ಅರ್ಜಿದಾರರು ಎದುರುದಾರರ ವಿರುದ್ಧ ಮೇಲ್ಕಂಡ ಪ್ರಕರಣವನ್ನು ಮಾನ್ಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ.ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಎಂ.ವಿ.ಸಿ. ನಂ.294/2024ನ್ನು ದಾಖಲಿಸಿರುತ್ತಾರೆ. ಈ ಪ್ರಕರಣ ದಲ್ಲಿ 3ನೇ ಎದುರುದಾರರಿಗೆ ಈ ಮೂಲಕ ತಿಳುವಳಿಕೆ ನೀಡುತ್ತಿರುವುದೇನೆಂದರೆ, ಈ ಮೇಲ್ಕಂಡ ಪ್ರಕರಣವು **ದಿನಾಂಕ:30–04–2026** ರಂದು ವಿಚಾರಣೆಗೆ ಇರುತ್ತದೆ. ಸದರಿ ದಿನಾಂಕದಂದು ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ಪರ ನಿಯೋಜಕ ವಕೀಲರ ಮುಖಾಂತರವಾಗಲೀ ಮೇಲ್ಕಂಡ ನ್ಯಾಯಾಲಯಕ್ಕೆ **ಬೆಳಿಗ್ಗೆ 11 ಗಂಟೆಗೆ** ಹಾಜರಾಗಿ ನಿಮ್ಮ ದೇನಾದರೂ ತಕರಾರು ವಗೈರೆ ಇದ್ದಲ್ಲಿ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ಸದರಿ ಕೇಸಿನಲ್ಲಿ ನೀವು ಗೈರು ಹಾಜರಾಗಿದ್ದೀರಿ ಎಂದು ಪರಿಗಣಿಸಲಾಗುತ್ತದೆ.

ಅರ್ಜಿದಾರರ ಪರ ವಕೀಲರು
ಶ್ರೀನಿವಾಸ್ ಎಂ.ಕೆ.
ವಕೀಲರು, ಶಿವಮೊಗ್ಗ.
ದಿನಾಂಕ:20–02–2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಶಿರಸ್ತೇದಾರರು, ಮಾನ್ಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಎಂ.ಎ.ಸಿ.ಟಿ.ಶಿವಮೊಗ್ಗ

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-1 /2025–26/4375 ದಿ:–17.03.2026

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	PWD/2025-26/IND0217	200.00	7	PWD/2025-26/RD/WORK_INDENT32937	157.88
2	PWD/2025-26/IND0219	300.00	8	PWD/2025-26/RD/WORK_INDENT29666	140.00
3	PWD/2025-26/IND0216	240.00	9	PWD/2025-26/RD/WORK_INDENT32903	200.36
4	PWD/2025-26/IND0215	260.00	10	PWD/2025-26/RD/WORK_INDENT32169/CALL-2	100.00
5	PWD/2025-26/RD/WORK_INDENT34539	105.00	11	PWD/2025-26/BD/WORK_INDENT29214	400.00
6	PWD/2025-26/RD/WORK_INDENT34614	100.00			

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ: **KPP Portal** ನಲ್ಲಿ ಇರುವಂತೆ. 2.ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **27.03.2026 (16.00 ಗಂಟೆಗೆ).** 3.ಕೆ.ಪಿ.ಪಿ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ: **ದಿನಾಂಕ: 30.03.2026 (10.30 ಗಂಟೆಗೆ).** 4.ಕೆ.ಪಿ.ಪಿ ಪೋರ್ಟಲ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ **ದಿನಾಂಕ: KPP Portal** ನಲ್ಲಿ ಇರುವಂತೆ

ವಿಶೇಶ ಸೂಚನೆ:– ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ , ಮರುಟೆಂಡರ್ ಅಹ್ವಾನಿಸಿದ್ದಲ್ಲಿ ಹಾಗೂ ಇನ್ನೀತರೆ ಬದಲಾವಣೆಇದ್ದಲ್ಲಿ ಗುತ್ತಿಗೆದಾರರು **KPP Portal** ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/600

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಸರ್ಕಾರಕ್ಕೆ ಶಾಸಕ ಎಸ್.ಎನ್. ಚನ್ನಬಸಪ್ಪ ಒತ್ತಾಯ

ಸಹ್ಯಾದ್ರಿ-ಮಲೆನಾಡು ಉತ್ಸವ ನಡೆಸಿ



ಶಿವಮೊಗ್ಗ : ಜಿಲ್ಲೆಯ ಸಮೃದ್ಧ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಯನ್ನು ಬಿಂಬಿಸುವ ನಿಟ್ಟಿನಲ್ಲಿ ಹಂಪಿ ಮತ್ತು ಕರಾವಳಿ ಉತ್ಸವಗಳ ಮಾದರಿಯಲ್ಲಿ ಸಹ್ಯಾದ್ರಿ ಉತ್ಸವ ಅಥವಾ ಮಲೆನಾಡು ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಯೋಜಿಸಬೇಕು ಎಂದು ಶಾಸಕ ಚನ್ನಬಸಪ್ಪ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ವಿಧಾನಸಭಾ ಅಧಿವೇಶನದಲ್ಲಿ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ಯಾವುದೇ ಸಾಂಸ್ಕೃತಿಕ ಉತ್ಸವಗಳು ನಡೆಯದ ಕಾರಣ ಜಿಲ್ಲೆಯ ಕಲೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಹಿನ್ನಡೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಜಿಲ್ಲೆಯು ರಾಷ್ಟ್ರಕವಿ ಕುವೆಂಪು ಸೇರಿದಂತೆ ಅನೇಕ ಸಾಹಿತ್ಯ ದಿಗ್ಗಜರ ಹಾಗೂ ಜಾನಪದ ಕಲಾ ಪ್ರಕಾರಗಳ ಬೀಡಾಗಿದೆ. ಇಂತಹ ಶ್ರೀಮಂತ ಪರಂಪರೆಯನ್ನು ಯುವ ಪೀಳಿಗೆಗೆ ಪರಿಚಯಿಸಲು ಕನಿಷ್ಠ ಮೂರು ದಿನಗಳ ಕಾಲ ಜಿಲ್ಲಾ ಉತ್ಸವವನ್ನು ಆಯೋಜಿಸುವುದು ಅನಿವಾರ್ಯವಾಗಿದೆ ಎಂದು ಪ್ರತಿಪಾದಿಸಿದರು.

ಬೇಸಿಗೆ ರಜಾ ಅವಧಿಯಲ್ಲಿ ಇಂತಹ ಉತ್ಸವ ಹಮ್ಮಿಕೊಳ್ಳುವುದರಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಜಿಲ್ಲೆಯ ಇತಿಹಾಸ, ಸಂಸ್ಕೃತಿ ಮತ್ತು ಕಲಾ ಪ್ರಕಾರಗಳ ಬಗ್ಗೆ ಅರಿವು ಮೂಡಿಸಲು ಒಂದು ಸಕಾರಾತ್ಮಕ ವೇದಿಕೆಯಾಗಲಿದೆ. ಇದು ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವುದಲ್ಲದೆ, ಪ್ರವಾಸೋದ್ಯಮದ ಬೆಳವಣಿಗೆಗೂ ಸಹಕಾರಿಯಾಗಲಿದೆ ಎಂದು ಸದನದ ಗಮನ ಸೆಳೆದರು.

ಜಿಲ್ಲೆಯ ಹಿರಿಯ ಸಾಧಕರನ್ನು ಗೌರವಿಸಲು ಮತ್ತು ಮಲೆನಾಡಿನ ಕಲಾ ಸೌಂದರ್ಯವನ್ನು ಜಾಗತಿಕ ಮಟ್ಟಕ್ಕೆ ತಲುಪಿಸಲು ಸರ್ಕಾರವು ಈ ಕೂಡಲೇ ಅನುದಾನ ಬಿಡುಗಡೆ ಮಾಡಿ ಉತ್ಸವಕ್ಕೆ ಚಾಲನೆ ನೀಡಬೇಕು ಎಂದು ಮನವಿ ಮಾಡಿದರು.

ಶಾಸಕ ಚನ್ನಬಸಪ್ಪ ಅವರ ಈ ಪ್ರಸ್ತಾವನೆಗೆ ಸಭಾಧ್ಯಕ್ಷ ಯು.ಟಿ. ಖಾದರ್ ಬೆಂಬಲ ವ್ಯಕ್ತಪಡಿಸಿದರು. ಕಾರ್ಕಳ ಶಾಸಕ ಸುನೀಲ್ ಕುಮಾರ್, ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹಾಗೂ ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಸೇರಿದಂತೆ ಅನೇಕರು ಜಿಲ್ಲಾವಾರು ಸಾಂಸ್ಕೃತಿಕ ಉತ್ಸವಗಳನ್ನು ಆಯೋಜಿಸುವ ಅಗತ್ಯತೆಯನ್ನು ಎತ್ತಿ ಹಿಡಿದರು.

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ



ಶಿವಮೊಗ್ಗ: ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲೇ ಮೊದಲ ಬಾರಿಗೆ ಅತ್ಯಂತ ಗೌರವಯುತ ಸ್ಥಾನದಲ್ಲಿರುವ ಸಭಾಧ್ಯಕ್ಷರಿಗೆ ಅಗೌರವ ತೋರಿಸಿ ಅಪಮಾನ ಮಾಡಿರುವ ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಕ್ಷಮೆ ಕೇಳಬೇಕು ಹಾಗೂ ಉದಾಸೀನ ಮಾಡಿದ ಅಧಿಕಾರಿಗಳ ಮೇಲೆ ಶೀಘ್ರವೇ ಸೂಕ್ತ ಹಾಗೂ ಅಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಬಿಜೆಪಿ ಪ್ರಕೋಷ್ಠಗಳ ಸಂಯೋಜಕ ಎಸ್. ದತ್ತಾತ್ರಿ ಆಗ್ರಹಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಧಾನಸಭೆ ನಡೆಯುವ ಸಂದರ್ಭದಲ್ಲಿ ಶಾಸಕರು ತಮ್ಮ ಕ್ಷೇತ್ರಗಳ ಹಾಗೂ ರಾಜ್ಯದ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳುವ ಮೂಲಕ ತಮ್ಮ ಸಮಸ್ಯೆಗಳಿಗೆ ಸರ್ಕಾರದಿಂದ ಪರಿಹಾರ ಪಡೆಯುವ ಬಗ್ಗೆ ಹಾಗೂ ಸಮಸ್ಯೆಗಳ ಇತ್ಯರ್ಥಗಳ ಬಗ್ಗೆ ಸರ್ಕಾರದ ಕಣ್ಣು ತೆರೆಸುವ ಒಂದು ಅತ್ಯುತ್ತಮವಾಗಿರುವ ಸಂಸದೀಯ ವ್ಯವಸ್ಥೆ ಎಂದು ತಿಳಿಸಿದ್ದಾರೆ.

ಆದರೆ ಈಗ ನಡೆಯುತ್ತಿರುವ ಕಲಾಪದಲ್ಲಿ ಸದಸ್ಯರು ಕೇಳಿದ 250 ಲಿಖಿತ ಪ್ರಶ್ನೆಗಳಿಗೆ ಕೇವಲ 84ಕ್ಕೆ ಮಾತ್ರ ಉತ್ತರ ನೀಡಲಾಗಿದೆ. ಈ ಲಿಖಿತ ಪ್ರಶ್ನೆಗಳಿಗೆ ಉತ್ತರ ಕೊಡಿಸುವ ಜವಾಬ್ದಾರಿ ಸಭಾಧ್ಯಕ್ಷರದು. ಆದರೆ ಸಭಾಧ್ಯಕ್ಷರು ಹಲವಾರು ಬಾರಿ ಉತ್ತರ ನೀಡುವಂತೆ ಕೋರಿದರೂ, ಅಧಿಕಾರಿಗಳು ಉದಾಸೀನ ತೋರಿಸಿರುವುದು ಖಂಡನೀಯ. ಉತ್ತರ ನೀಡುವ ಸಚಿವರುಗಳೇ ಈ ಪ್ರಶ್ನೆಗಳಿಗೆ ನಿರ್ಲಕ್ಷ್ಯ ಮಾಡಿರುವುದರ ವಿರುದ್ಧ ಬೇಸರಗೊಂಡು ಹಾಗೂ ಸಚಿವರ ಅಧಿಕಾರಿಗಳ ಮಂದಗತಿಯ ಕಾರ್ಯ ವೈಖರಿಗೆ ಬೇಸರಪಟ್ಟು ಸದನದಿಂದ ಸಭಾಧ್ಯಕ್ಷರೇ ಸಭಾತ್ಯಾಗ ಮಾಡಿದ ಘಟನೆ ಅತ್ಯಂತ ದುರದೃಷ್ಟಕರ ಮತ್ತು ಖಂಡನೀಯ ಎಂದು ತಿಳಿಸಿದ್ದಾರೆ.



ಶಿವಗಂಗಾ ಯೋಗ ಕೇಂದ್ರದ ಕಾರ್ಯದರ್ಶಿ ಹೆಚ್.ಎಂ. ಚಂದ್ರಶೇಖರಯ್ಯ

ಕೀರ್ತಿಗಾಗಿ ಬೆನ್ನು ಹತ್ತಿರುವ ವ್ಯಕ್ತಿಯ ಮನಸ್ಸು ಬದಲಾಗಬೇಕಿದೆ

ಶಿವಮೊಗ್ಗ : ಮೊದಲು ನಮ್ಮಲಿನ ಚಿಂತನೆಗಳು, ಆಲೋಚನೆಗಳು, ದುರಾಸೆಗಳು, ಹಣ, ಕೀರ್ತಿಗಾಗಿ ಬೆನ್ನು ಹತ್ತಿರುವ ವ್ಯಕ್ತಿಯ ಮನಸ್ಸು ಬದಲಾಗಬೇಕಿದೆ ಎಂದು ಶಿವಗಂಗಾ ಯೋಗ ಕೇಂದ್ರದ ಕಾರ್ಯದರ್ಶಿ ಹೆಚ್.ಎಂ. ಚಂದ್ರಶೇಖರಯ್ಯ ತಿಳಿಸಿದರು.

ಶಿವಗಂಗಾ ಯೋಗ ಕೇಂದ್ರದ ವತಿಯಿಂದ ಕೃಷಿ ನಗರದ ಶಕ್ತಿ ಗಣಪತಿ ಯೋಗ ಶಾಖೆಯಲ್ಲಿ ಆಯೋಜಿಸಿದ್ದ ವಾರ್ಷಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದು ಎಲ್ಲಿ ನೋಡಿದರೂ ಅಶಾಂತಿ, ಅಭದ್ರತೆ, ಅಪನಂಬಿಕೆ, ಭಯ ತಾಂಡವವಾಡುತ್ತಿದೆ. ಬಹುತೇಕ ಕುಟುಂಬಗಳಲ್ಲಿ ಶಾಂತಿ, ನೆಮ್ಮದಿ ಮಾಯವಾಗುತ್ತಿದೆ. ಕಾರಣ ಮಿತಿ ಇಲ್ಲದ ಕಾಮನೆಗಳು, ಸ್ವಾರ್ಥಪರ ಚಿಂತನೆಗಳು, ಅಧಿಕಾರ, ಕೀರ್ತಿ, ಸಂಪತ್ತಿನ ಬೆನ್ನು ಹತ್ತಿರುವ ಜಗತ್ತು ಪ್ರಕ್ಷುಬ್ಧಗೊಂಡಿದೆ. ಹಿಂಸೆ, ಯುದ್ಧಗಳಿಂದ ಜಗತ್ತು ಜರ್ಝರಿತವಾಗುತ್ತಿದೆ. ನಾವೆಲ್ಲ ಜಗತ್ತು ಬದಲಾಗಲಿ ಎಂದು ಹೇಳುತ್ತೇವೆ. ಆದರೆ ನಮ್ಮಲ್ಲಿ ಬದಲಾವಣೆಯಾಗಲಿ ಎಂದು ಯಾರೂ ಬಯಸುತ್ತಿಲ್ಲ ಎಂದರು.



ವ್ಯಕ್ತಿಯ ದೇಹ, ಮನಸ್ಸು, ಬುದ್ಧಿ ಹಾಗೂ ಅಹಂಕಾರಗಳಲ್ಲಿನ ಧನಾತ್ಮಕ ಬದಲಾವಣೆಯೇ ಯೋಗದ ಉದ್ದೇಶ. ಗಣಪತಿ ಸಮೃದ್ಧತೆಯ ಸಂಕೇತ, ಸಡಗರ ಸಂಭ್ರಮದ ಸಂಕೇತ, ಸ್ಥಿತ ಪ್ರಜ್ಞತೆಯ ಸಂಕೇತ. ಈ ತತ್ವಗಳನ್ನು ನಾವು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಈ ಭೂಮಿಯಲ್ಲಿ ನಾಲ್ಕು ದಿನ ಬದುಕಿ ಹೋಗುವುದೇ ಈ ಯೋಗದ ಉದ್ದೇಶವೆಂದು ತಿಳಿಸಿದರು. ಇದು ಯೋಗದ ಅಷ್ಟಾಂಗ ಮಾರ್ಗಗಳಾದ ಆಸನ, ಪ್ರಾಣಯಾಮ ಮತ್ತು ಧ್ಯಾನಗಳಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷೆಯನ್ನು ಸಂಸ್ಥೆಯ ಖಜಾಂಚಿ ಸೂರ್ಯನಾರಾಯಣ ಹೊಸತೋಟ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಳ್ಳೆಕೆರೆ ಸಂತೋಷ್ ಆಗಮಿಸಿದ್ದರು. ಹಿರಿಯ ಯೋಗ ಶಿಕ್ಷಕ ನೀಲಕಂಠ ರಾವ್ ಕಾರ್ಯಕ್ರಮ ನಿರೂಪಿಸಿದರು. ಗಣಪತಿ ವಂದಿಸಿದರು. ರೋಟರಿ ಜಿ ವಿಜಯ್ ಕುಮಾರ್, ಪ್ರೊ. ಮಂಜುನಾಥ್, ಡಾ. ನಟರಾಜ್, ಪರಮೇಶ್ವರಪ್ಪ, ಕೆ.ಚಂದ್ರಪ್ಪ, ಸಂಸ್ಥೆ ಪೋಷಕರಾದ ಪರಮೇಶ್, ಮನು ಕುಮಾರ್, ಅನಿಲ್, ಸುಮಾ ನಟರಾಜ್, ಜಾನಕಮ್ಮ, ನಾಗರತ್ನ, ಚಂದ್ರಶೇಖರಯ್ಯ, ಶೋಭಾ, ಸರಸ್ವತಿ, ಬಿಂದು ವಿಜಯ್ ಕುಮಾರ್, ಜ್ಯೋತಿ ಠಾಕ್ರೆ, ಕುಸುಮಾ ಹಾಗೂ ಕೃಷಿ ನಗರದ ಯೋಗಾರ್ಥಿಗಳು ಪಾಲ್ಗೊಂಡಿದ್ದರು.

ಸರ್ಕಾರಗಳಿಗೆ ಬೆಂಗಳೂರು ಮಹಾರಾಣಿ ಕ್ಲಸ್ಟರ್ ವಿವಿ ಪ್ರಾಧ್ಯಾಪಕ ಸಿ.ಜಿ. ಲಕ್ಷ್ಮಿಪತಿ ಸಲಹೆ

ಧರ್ಮಗಳನ್ನು ಬದಿಗೊತ್ತಿ ಆಡಳಿತ ನಡೆಸಲಿ

ಶಂಕರಘಟ್ಟ: ಸರ್ಕಾರಗಳು ಧರ್ಮಗಳನ್ನು ಬದಿಗೊತ್ತಿ ಆಡಳಿತ ನಡೆಸಬೇಕು ಎಂದು ಬೆಂಗಳೂರು ಮಹಾರಾಣಿ ಕ್ಲಸ್ಟರ್ ವಿವಿ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಸಿ.ಜಿ. ಲಕ್ಷ್ಮಿಪತಿ ಹೇಳಿದರು.

ಕುವೆಂಪು ವಿವಿ, ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು ಸಂಯುಕ್ತಾಶ್ರಯದಲ್ಲಿ ಜ್ಞಾನ ಸಹ್ಯಾದ್ರಿಯ ಬಸವ ಸಭಾ ಭವನದಲ್ಲಿ ಆಯೋಜಿಸಿದ್ದ ಭಾರತ ಸಂವಿಧಾನ, ಸಾಮಾಜಿಕ ನ್ಯಾಯ ಮತ್ತು ಸುಸ್ಥಿರ ಅಭಿವೃದ್ಧಿ, ಬಹುಶಿಸ್ತೀಯ ದೃಷ್ಟಿಕೋನ ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದರು.

ಸರ್ಕಾರಗಳು ಮತಕ್ಕಾಗಿ ಧರ್ಮಗಳನ್ನು ವಿಜೃಂಭಿಸುವುದು ಸರಿಯಲ್ಲ. ತಮ್ಮ ಅನುಕೂಲಕ್ಕಾಗಿ ಧರ್ಮಗಳ ನಡುವೆ ಒಡಕು ಮೂಡಿಸುವುದು ಅಪಾಯಕಾರಿ ಬೆಳವಣಿಗೆ. ಪರಸ್ಪರ ಜಾತಿ, ಧರ್ಮಗಳನ್ನು ಎತ್ತಿಕಟ್ಟುವ ಜನರನ್ನು ದೇಶ ದ್ರೋಹಿಗಳೆಂದು ಕರೆಯಬೇಕು. ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಮಾನವ ಪ್ರೇಮವನ್ನು ವಿಸ್ತರಿಸುವ ಸಾರ್ವಭೌಮತೆಯನ್ನು ಕಾಪಾಡುವವರೇ ನಿಜವಾದ ದೇಶ ಪ್ರೇಮಿಗಳು ಎಂದರು.

ಇಂದು ಸಾಮಾಜಿಕ ನ್ಯಾಯದ ಅವಶ್ಯಕತೆ ಇದೆ. ಸುಸ್ಥಿರ ಅಭಿವೃದ್ಧಿಯನ್ನು 1984ರ ವರದಿಯಲ್ಲಿಯೇ ಪ್ರಸ್ತುತಪಡಿಸಲಾಗಿದೆ. ಮುಂದಿನ ಪೀಳಿಗೆಯನ್ನು ಗಮನದಲ್ಲಿಟ್ಟುಕೊಂಡು ಬಹುಶಿಸ್ತೀಯ ದೃಷ್ಟಿಕೋನವಿರಬೇಕು. ಹಸಿವು ಮುಕ್ತ ಸಮಾಜ ನಮ್ಮದಾಗಬೇಕು ಎಂದರು.



ಪ್ರಾಚೀನ ಭಾರತದಲ್ಲಿ ನ್ಯಾಯ ಎಂಬ ಪರಿಕಲ್ಪನೆ ಇತ್ತು. ಆದರೆ ಸಾಮಾಜಿಕ ನ್ಯಾಯದ ಕಲ್ಪನೆ ಇರಲಿಲ್ಲ. ಮಹಿಳೆಯರಿಗೆ ಧಕ್ಕೆ ತರುವ ಯಾವ ಪೌರಾಣಿಕ ಅಂಶಗಳು ನಮಗೀಗ ಬೇಡ. ಹಾಗೆಯೇ ಮನುಸ್ಮೃತಿ ಕೂಡ. ಇದು ಸಹ ಅಸಮಾನತೆಯ ಪ್ರತೀಕವಾಗಿತ್ತು. ಇಂತಹ ಅಸಮಾನತೆಯ ಹಳೆಯ ಗ್ರಂಥಗಳು ಆಧುನಿಕ ಜಗತ್ತನ್ನು ಕಟ್ಟಲಾರವು ಎಂದರು.

ಕುಲಸಚಿವ ಎ.ಎಲ್ ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದು ನಮಗೆ ಸಂವಿಧಾನವೇ ಮುಖ್ಯವಾಗಿದೆ. ಸಂವಿಧಾನದ ಓದು ವ್ಯಕ್ತಿತ್ವವನ್ನು ವಿಕಸಿತಗೊಳಿಸುತ್ತದೆ. ಸಾಮಾಜಿಕ ನ್ಯಾಯ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಕಾಪಾಡುತ್ತದೆ ಎಂದರು.

ಯುಎಸ್ಎಂಆರ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಎಂ. ಮುತ್ತಯ್ಯ ಮಾತನಾಡಿ, ವಿದ್ಯಾರ್ಥಿಗಳಿಗೆ ದೊರೆಯುವ ಅಂಕಪಟ್ಟಿಗಳು ಅವರ ಬದುಕನ್ನು ನಿರ್ಮಾಣ ಮಾಡುವುದಿಲ್ಲ. ಅವರಿಗೆ ಬೇಕಾಗಿರುವುದು ಆತ್ಮಸ್ಥೈರ್ಯ. ಶಿಕ್ಷಣ ಕಲಿತವರಿಗೆ ಉದ್ಯೋಗವೇ ಸಿಗದ ವಾತಾವರಣ ನಿರ್ಮಾಣವಾಗಿ ಶಿಕ್ಷಣಕ್ಕೆ ಬೆಲೆ ಇಲ್ಲವಾಗಿದೆ. ಯಾರಿಗೆ ನಿಜವಾದ ಆತ್ಮಸ್ಥೈರ್ಯ, ಪರಿಣಿತಿ ಇರುತ್ತದೆಯೋ ಅವರು ಉತ್ತಮ ಜೀವನ ಕಟ್ಟಿಕೊಳ್ಳುವರು. ಇಲ್ಲವಾದರೆ ಮಕ್ಕಳು ದಾರಿ ತಪ್ಪುವ ಸಾಧ್ಯತೆ ಇರುತ್ತದೆ ಎಂದರು.

ಹಿರಿಯ ಪ್ರಾಧ್ಯಾಪಕ ಪ್ರೊ. ಎನ್. ಗುರುಲಿಂಗಯ್ಯ, ವಿಶ್ರಾಂತ ಪ್ರಾಧ್ಯಾಪಕಿ ಡಾ.ಸಬಿತಾ ಬನ್ನಾಡಿ, ಪ್ರೊ. ಚಂದ್ರಶೇಖರ್ ವಿವಿಧ ವಿಷಯಗಳ ಕುರಿತಂತೆ ಮಾತನಾಡಿದರು. ವೇದಿಕೆಯಲ್ಲಿ ಪ್ರೊ.ಎಚ್.ಎಂ.ಧರ್ಮೇಗೌಡ, ಪ್ರೊ. ಸಿ.ಚನ್ನಪ್ಪ, ಪ್ರೊ.ವಿಶ್ವೇಶ್ವರಯ್ಯ, ಪ್ರೊ.ಜಿ ಸುರೇಶ್, ಪ್ರೊ. ವಸಂತಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಡಾ. ಮೀನಾಕ್ಷಿ, ಸ್ಫೂರ್ತಿ ಪಟೇಲ್ ಪ್ರಾರ್ಥಿಸಿದರು. ಡಾ. ಸಂದೀಪ್ ಆರ್. ಸ್ವಾಗತಿಸಿದರು. ಡಾ. ಹಸೀನಾ ನಿರೂಪಿಸಿದರು.

ಕಾರು ತೊಳೆಯುವ ವಿಚಾರದಲ್ಲಿ ಹೊಡೆದಾಟ

ಶಿವಮೊಗ್ಗ: ಕಾರು ತೊಳೆಯುವ ವಿಚಾರವಾಗಿ ಅಕ್ಕಪಕ್ಕದ ಮನೆಯವರ ಮಧ್ಯೆ ಗಲಾಟೆಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಘಟನೆ ನಡೆದಿದೆ. ಘಟನೆ ಸಂಬಂಧ ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ ದೂರು, ಪ್ರತಿ ದೂರು ದಾಖಲಾಗಿದೆ.

ಕೃಷಿನಗರದಲ್ಲಿ ಕಾರು ಚಾಲಕರೊಬ್ಬರು ತಮ್ಮ ಮನೆಯ ಕಾಂಪೌಂಡ್ ಒಳಗೆ ಕಾರು ತೊಳೆಯುತ್ತಿರುವಾಗ ಇದರ ನೀರು ಪಕ್ಕದ ಮನೆಗೆ ಸಿಡಿಯುತ್ತದೆ ಎಂಬ ವಿಚಾರಕ್ಕೆ ಆಗಾಗ ಜಗಳವಾಗುತ್ತಿತ್ತು. ಈಚೆಗೆ ಇದು ವಿಕೋಪಕ್ಕೆ ತಿರುಗಿ ಕೈ ಕೈ ಮಿಲಾಯಿಸಿದ್ದಾರೆ.

ಕಾರು ಚಾಲಕ ಶನಿವಾರ ರಾತ್ರಿ ಮಂಗಳೂರಿನಿಂದ ವಾಪಸ್ ಬಂದು ತಮ್ಮ ಮನೆಯ ಕಾಂಪೌಂಡ್‌ನಲ್ಲಿ ಕಾರು ತೊಳೆಯುತ್ತಿದ್ದರು. ಈ ವೇಳೆ ನೀರು ತಮ್ಮ ಕಾಂಪೌಂಡಿಗೆ ಸಿಡಿಯುತ್ತಿದೆ ಎಂದು ಪಕ್ಕದ ಮನೆಯವರು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ. ಜಗಳ ವಿಕೋಪಕ್ಕೆ ತಿರುಗಿದಾಗ ಪಕ್ಕದ ಮನೆಯವರು ಕಲ್ಲಿನಿಂದ ಹೊಡೆದಿದ್ದಾರೆ. ಇದರಿಂದ ತನ್ನ ತಲೆಗೆ ಗಾಯವಾಗಿದೆ. ಅಲ್ಲದೆ ಜೀವ ಬೆದರಿಕೆ ಒಡ್ಡಿದ್ದಾರೆ ಎಂದು ಚಾಲಕ ದೂರಿನಲ್ಲಿ ದೂರಿದ್ದಾರೆ.

ತಮ್ಮ ಮನೆಯ ಗೋಡೆಯ ಹತ್ತಿರವೇ ಚಾಲಕ ಪದೇ ಪದೇ ಕಾರು ತೊಳೆಯುತ್ತಾನೆ. ಇದರಿಂದ ಮನೆಯ ಗೋಡೆ ಹಾಳಾಗುತ್ತಿದೆ ಮತ್ತು ಕಿಟಕಿಯಿಂದ ಮನೆ ಒಳಗೆ ನೀರು ಬರುತ್ತಿದೆ ಎಂದು ಹಲವು ಬಾರಿ ಬುದ್ಧಿವಾದ ಹೇಳಿದ್ದೆವು. ಶನಿವಾರ ರಾತ್ರಿ ಚಾಲಕ ಮತ್ತೆ ಗೋಡೆಯ ಬಳಿಯೇ ಕಾರು ತೊಳೆಯುತ್ತಿದ್ದಾಗ ಪ್ರಶ್ನಿಸಿದೆವು. ಇದರಿಂದ ಆಕ್ರೋಶಗೊಂಡ ಚಾಲಕ ಅವಾಚ್ಯವಾಗಿ ನಿಂದಿಸಿ, ಜೋರಾಗಿ ತಳ್ಳಿ ಕೈಯಿಂದ ಗುದ್ದಿದ್ದಾನೆ. ಅಷ್ಟೇ ಅಲ್ಲದೆ, ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಹಣೆಗೆ ಹೊಡೆದಿದ್ದಾನೆ. ಈ ವೇಳೆ ಚಾಲಕನ ತಾಯಿ ಕೂಡ ಬಂದು ಬೈದು, ಜೀವ ಬೆದರಿಕೆ ಹಾಕಿದ್ದಾರೆ ಎಂದು ಪಕ್ಕದ ಮನೆಯವರು ದೂರಿನಲ್ಲಿ ಆರೋಪಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ.

ಜೀವಂತ ಸುಡಲು ಯತ್ನಿಸಿದ ಆರೋಪಿಗಳಿಗೆ ಶಿಕ್ಷೆ

ಶಿವಮೊಗ್ಗ: ಹೊಂಚು ಹಾಕಿ ಪೆಟ್ರೋಲ್ ಸುರಿದು ಬೆಂಕಿಹಚ್ಚಿ ಜೀವಂತವಾಗಿ ಸುಟ್ಟುಹಾಕಲು ಮುಂದಾಗಿದ್ದ ಬೆಳಲಕಟ್ಟೆಯ ಇಬ್ಬರು ಆರೋಪಿಗಳಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ತಾಲೂಕಿನ ಬೆಳಲಕಟ್ಟೆ ಗ್ರಾಮದ ಮಹೇಶಪ್ಪ ಮತ್ತು ಆರೋಪಿತರಾದ ಕುಮಾರ್ (57 ವರ್ಷ), ಕಾರ್ತಿಕ್ (28 ವರ್ಷ) ನಡುವೆ ಈ ಹಿಂದೆ ಜಮೀನಿನ ವಿಚಾರದಲ್ಲಿ ಗಲಾಟೆಗಳಾಗುತ್ತಿತ್ತು. 3-12-23ರಂದು ಆರೋಪಿತರು ಮಹೇಶಪ್ಪನನ್ನು ಕೊಲೆ ಮಾಡುವ ಉದ್ದೇಶದಿಂದ ಮತ್ತೋಡು ಹನಸವಾಡಿ ಸರ್ಕಲ್ ಬಳಿ ಹೊಂಚು ಹಾಕಿ, ಮಹೇಶಪ್ಪ ಸ್ಕೂಟಿಯಲ್ಲಿ ಬರುವಾಗ ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ್ದರು. ಈ ಬಗ್ಗೆ ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಆಗಿನ ತನಿಖಾಧಿಕಾರಿ ಸತ್ಯ ನಾರಾಯಣ ವೈ. ಪ್ರಕರಣದ ತನಿಖೆ ಪೂರೈಸಿ, ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದರು.

ನ್ಯಾಯಾಲಯದಲ್ಲಿ ಸರ್ಕಾರದ ಪರವಾಗಿ ಮಮತಾ ಬಿ.ಎಸ್ ವಾದ ಮಂಡಿಸಿದ್ದರು. 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆದು, ಆರೋಪಿತರ ವಿರುದ್ಧ ಆರೋಪ ದೃಢಪಟ್ಟ ಹಿನ್ನೆಲೆಯಲ್ಲಿ ನ್ಯಾಯಾಧೀಶ ಅಭಯ್ ಧನಪಾಲ್ ಚೌಗಲ ಅವರು ಇಬ್ಬರಿಗೆ ಜೀವಾವಧಿ ಶಿಕ್ಷೆ, 57,000 ರೂ. ದಂಡ ವಿಧಿಸಿ ಆದೇಶಿಸಿದ್ದಾರೆ.

ಶಾಸಕರ ನಿರಾಸಕ್ತಿ | ಶಿವಮೊಗ್ಗ ಹೋದರೂ ಸಿಗದ ಟೌನ್ ಪ್ಲಾನಿಂಗ್ ಅಧಿಕಾರಿ

ಸಾಗರ ಯೋಜನಾ ಪ್ರಾಧಿಕಾರ ಇದ್ದೂ ಇಲ್ಲದಂತೆ

ಜಿ.ನಾಗೇಶ್ ಸಾಗರ

ಸಾಗರ : ನಗರ ಬೆಳೆಯುತ್ತಿರುವ ಹಿನ್ನೆಲೆ ಮತ್ತು ಮುಂದೆ ಸ್ಮಾರ್ಟ್ ಸಿಟಿಯಾಗಿ ಸಾಗರ ನಗರವನ್ನು ರೂಪಿಸುವ ಉದ್ದೇಶದಿಂದ ಐದು ವರ್ಷದ ಹಿಂದೆ ಸಾಗರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ. ಅಂದಿನಿಂದ ಇಂದಿನವರೆಗೆ ಪ್ರಾಧಿಕಾರ ಕಚೇರಿಯ ಬಾಗಿಲು ತೆರೆದದ್ದು ತೀರ ವಿರಳ. ಒಂದರ್ಥದಲ್ಲಿ ಯೋಜನಾ ಪ್ರಾಧಿಕಾರವೇ ಸಾಗರದ ಜನರಿಗೆ ಶಾಪವಾಗಿ ಪರಿಣಮಿಸಿದೆ.

ಬಿಜೆಪಿ ಅವಧಿಯಲ್ಲಿ ಪ್ರಾರಂಭ :

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಶಾಸಕ ಹರತಾಳು ಹಾಲಪ್ಪ ಶಾಸಕರಾಗಿದ್ದ ಸಂದರ್ಭದಲ್ಲಿ ಸಾಗರ ಯೋಜನಾ ಪ್ರಾಧಿಕಾರವನ್ನು ರಚಿಸಿ ಅದಕ್ಕೊಂದು ಕಚೇರಿಯನ್ನು ನಗರಸಭೆಯ ಒಂದು ಭಾಗದಲ್ಲಿ ನಿರ್ಮಿಸಲಾಯಿತು. ಅಂದಿನ ಶಾಸಕ ಹರತಾಳು ಹಾಲಪ್ಪ ಒತ್ತಡದ ನಡುವೆ ಪ್ರಾಧಿಕಾರದ ಅಧ್ಯಕ್ಷ ಸ್ಥಾನ ನಿಭಾಯಿಸಲು ಸಾಧ್ಯವಿಲ್ಲ ಎಂದು ಬಿಜೆಪಿ ಮುಖಂಡ ನಾಗರಾಜ್ ಪೈ ಎಂಬುವವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಆದರೆ ಪ್ರಾಧಿಕಾರಕ್ಕೆ ಬೇಕಾದ ಮೂಲ ಸೌಲಭ್ಯ ಅವರು ಕಲ್ಪಿಸಲಿಲ್ಲ. ಪ್ರಾಧಿಕಾರಕ್ಕೆ ಟೌನ್ ಪ್ಲಾನಿಂಗ್ ಆಫೀಸರ್ ಕಾರ್ಯದರ್ಶಿಯಾಗಿದ್ದು, ಸರ್ಕಾರದ ಕಡೆಯಿಂದ ಇಬ್ಬರು ನಾಮ ನಿರ್ದೇಶನ ಸದಸ್ಯರು ಇರುತ್ತಾರೆ. ಆದರೆ ಅಧಿಕಾರಿ ಸಿಬ್ಬಂದಿ ನೇಮಕ ಸರ್ಕಾರದಿಂದ ಮಾಡಿರಲಿಲ್ಲ. ಹಾಗೂ ಹೀಗೂ ನಾಲ್ಕೈದು ಸಭೆ ನಡೆಸಿ ಸಣ್ಣಪುಟ್ಟ ಚರ್ಚೆ ನಡೆದದ್ದು ಬಿಟ್ಟರೆ ಪ್ರಾಧಿಕಾರ ಇದೆ ಎನ್ನುವುದೇ ಬಹುತೇಕ ಜನರಿಗೆ ಗೊತ್ತಿಲ್ಲ.

ಯಾರನ್ನು ಸಂಪರ್ಕ ಮಾಡಬೇಕು :

ಸಾಗರ ಬೆಳೆಯುತ್ತಿರುವ ನಗರಗಳಲ್ಲಿ ಮುಂಚೂಣಿ ಕಾಯ್ದುಕೊಂಡಿದೆ. ಹೊಸದಾಗಿ ಕಟ್ಟಡ ನಿರ್ಮಾಣ ಪರವಾನಗಿ, ಭೂಪರಿವರ್ತನೆ ಪರವಾನಗಿ, ಲೇಔಟ್ ನಿರ್ಮಾಣಕ್ಕೆ ಪರವಾನಗಿ ಸೇರಿ ಎಲ್ಲದಕ್ಕೂ ಈಗ ಯೋಜನಾ ಪ್ರಾಧಿಕಾರವನ್ನು ಅವಲಂಭಿಸಬೇಕಾಗಿದೆ. ಒಂದು ಅಂದಾಜಿನ ಪ್ರಕಾರ ಸುಮಾರು 50 ಕಡತಗಳು ಪ್ರಾಧಿಕಾರದ ಎದುರು ಇದ್ದು ಮನೆ ಕಟ್ಟುವವರು, ಭೂಪರಿವರ್ತನೆ, ಲೇಔಟ್ ನಿರ್ಮಾಣ ಮಾಡುವವರು ಪ್ರತಿದಿನ ನಗರಸಭೆಗೆ ಬಂದು ಪ್ರಾಧಿಕಾರದ ಮುಚ್ಚಿದ ಬಾಗಿಲು ನೋಡಿಕೊಂಡು ಹೋಗುತ್ತಿದ್ದಾರೆ. ಬಹುತೇಕ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಬಗ್ಗೆ ಸರಿಯಾದ ಮಾಹಿತಿಯನ್ನು ಸಹ ಕೊಡುವವರು ಇಲ್ಲವಾಗಿದ್ದಾರೆ.

ಶಾಸಕರ ನಿರಾಸಕ್ತಿ :

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷತೆಯನ್ನು ಶಾಸಕರು ತಮ್ಮ ಬಳಿಯೆ ಉಳಿಸಿ ಕೊಂಡಿದ್ದಾರೆ. ಆದರೆ ಪ್ರತಿತಿಂಗಳು ಸಭೆ ನಡೆಸಿ ಇರುವ ಕಡತಗಳನ್ನು ವಿಲೇವಾರಿ ಮಾಡಲು ಶಾಸಕರು ಯಾಕೋ ಆಸಕ್ತಿ ತೋರಿಸುತ್ತಿಲ್ಲ ಎನ್ನಲಾಗುತ್ತಿದೆ. ಸರ್ಕಾರದಿಂದ ಪ್ರಾಧಿಕಾರದ ಕಚೇರಿ ನಿರ್ಮಾಣಕ್ಕೆ, ಮೂವರು ಸಿಬ್ಬಂದಿ ನೇಮಕ, ಮೂಲ ಸೌಲಭ್ಯಕ್ಕಾಗಿ ಅನುದಾನ ಇದೆ. ಆದರೆ ಹಿಂದಿನ ಶಾಸಕರು ಇದನ್ನು ಉಪಯೋಗಿಸಿ ಕೊಂಡಿಲ್ಲ. ಈಗಿನ ಶಾಸಕರೂ ಅದರ ಬಗ್ಗೆ ಗಮನ ಹರಿಸಿಲ್ಲ ಯಾಕೆ ಎನ್ನುವುದೆ ಯಕ್ಷಪ್ರಶ್ನೆ.

ಇನ್ನಾದರೂ ಸಾಗರ ಯೋಜನಾ ಪ್ರಾಧಿಕಾರದಲ್ಲಿ ಕಾರ್ಯ ಚಟುವಟಿಕೆ ನಡೆಯುವಂತೆ ನೋಡಿಕೊಳ್ಳುವ ಜೊತೆಗೆ ಬಾಕಿ ಇರುವ ಕಡತಗಳನ್ನು ವಿಲೇ ಮಾಡಲು ಗಮನ ಹರಿಸಲು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮಾಯವಾದ ಟೌನ್ ಪ್ಲಾನಿಂಗ್ ಆಫೀಸರ್

ಯೋಜನಾ ಪ್ರಾಧಿಕಾರದ ಕಚೇರಿ ಇದ್ದು ಅದಕ್ಕೊಬ್ಬರು ಟೌನ್ ಪ್ಲಾನಿಂಗ್ ಆಫೀಸರ್ ಇದ್ದಾರೆ. ಆದರೆ ಅಧಿಕಾರಿ ಸಾಗರಕ್ಕೆ ಬರುವುದೇ ಅಪರೂಪ. ಸಂಬಳ ವಗೈರೆ ಸಾಗರ ಟೌನ್ ಪ್ಲಾನಿಂಗ್ ಆಫೀಸರ್ ಹೆಡ್‌ನಲ್ಲಿ ಬರುತ್ತಿದ್ದರೂ ಅಧಿಕಾರಿ ಮಾತ್ರ ಬರುವುದೇ ಇಲ್ಲ. ಎಲ್ಲೋ ಶಿವಮೊಗ್ಗದಲ್ಲಿ ಕುಳಿತು ಇಲ್ಲಿನ ವ್ಯವಹಾರ ಡೀಲ್ ಮಾಡುತ್ತಿದ್ದಾರೆ ಎನ್ನಲಾಗುತ್ತಿದೆ. ಫೋನ್ ಮಾಡಿದರೂ ಉತ್ತರಿಸುತ್ತಿಲ್ಲ. ಹೊಸದಾಗಿ ಕಟ್ಟಡ ಕಟ್ಟುವವರು ಬಿಲ್ಡಿಂಗ್ ಲೈಸೆನ್ಸ್ ಪಡೆಯಲು ಶಿವಮೊಗ್ಗಕ್ಕೆ ಅಧಿಕಾರಿ ಹುಡುಕಿಕೊಂಡು ಅಲೆಯಬೇಕಾಗಿದೆ. ಹತ್ತಾರು ಲೇಔಟ್‌ಗಳು ನಿರ್ಮಾಣವಾಗಿದ್ದು, ಪರವಾನಗಿ ಪಡೆಯಲು ಅಧಿಕಾರಿಗೆ ಸಲಾಂ ಹೊಡೆಯುವ ಸ್ಥಿತಿ ಇದೆ.

ಆರಂಭ ಶೂರತ್ವ

ಗೋಪಾಲಕೃಷ್ಣ ಬೇಳೂರು ಗೆದ್ದು ಬಂದ ಮೇಲೆ ಮೊದಲು ಸಾಗರ ಯೋಜನಾ ಪ್ರಾಧಿಕಾರದ ಕಡೆ ಕಣ್ಣು ಹಾಯಿಸಿದರು. ತಾವೇ ಅಧ್ಯಕ್ಷರಾಗಿ, ಸರ್ಕಾರದಿಂದ ಸೋಮಶೇಖರ ಲ್ಯಾವಿಗೆರೆ, ಸುರೇಶಬಾಬು ಇನ್ನಿತರರನ್ನು ನಾಮ ನಿರ್ದೇಶನ ಮಾಡಿದರು. ಆದರೆ ಪ್ರಾಧಿಕಾರದ ಸಭೆ ನಡೆದದ್ದು ಪದಗ್ರಹಣ ಸಂದರ್ಭದಲ್ಲಿ ಮಾತ್ರ. ಅಂದು ಹಾರತುರಾಯಿ ಓಡಾಡಿ, ಸಿಹಿತಿಂಡಿ ಪೊಟ್ಟಣ ಪ್ರಾಧಿಕಾರದ ಕಚೇರಿ ಹೊಕ್ಕು ಸಂತೃಪ್ತಿಯಾಗಿದ್ದು ಬಿಟ್ಟರೇ ಹಿಂದಿನಂತೆ ಮೂಲ ಸೌಲಭ್ಯ, ಪ್ರಾಧಿಕಾರದ ಕಚೇರಿ ನೋಡಲೇ ಇಲ್ಲ. ಪ್ರಾಧಿಕಾರದ ಮೂರ್‍ನಾಲ್ಕು ಸಭೆ ನಡೆದದ್ದು ಬಿಟ್ಟರೆ ಯಾವಾಗಲೂ ಕಚೇರಿ ಬೀಗ ಹಾಕಿಯೆ ಇರುತ್ತದೆ.

ದಿಗಂತ ವಿಶೇಷ



